(ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನದಿಂದ ಎದ್ದು ಒಂದು ಕಾಗದ ಪೊಟ್ಟಣವನ್ನು ಕೈಲಿ ಹಿಡಿದುಕೊಂಡು ಹೋಗಿ ಅದನ್ನು ಮಾನ್ಯ ಅಧ್ಯಕ್ಷರ ಟೇಬಲ್ಲಿನ ಮೇಲೆ ಇಟ್ಟರು.)

DISCUSSION IN A MATTER OF URGENT PUBLIC IMPORTANCE UNDER RULE 146.

re. : Considarate of the working of the Agro Industries Corporation 2nd Report of the P.U.C. Debeate (Contd).

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ : ಈ ಸದನದ ಮುಂದೆ ಸಾರ್ವಜನಿಕ ಉದ್ದಿಮೆಗಳ ವರದಿಯನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಈ ಮಾನ್ಯ ಸಭೆಯ ಆಳುವ ಪಕ್ಷದ ಕೆಲವು ಮಾನ್ಯ ಸದಸ್ಯರು ಆ ವರದಿಯ ಬಗ್ಗೆ ತಮ್ಮ ಟೀಕೆಯನ್ನು ಮಾಡಿದ್ದಾರೆ. ಆದರೆ ನಾನು ಅವರನ್ನು ಏನು ಕೇಳಿಕೊಳ್ಳುತ್ತಿದ್ದೇನೆಂದರೆ ಇಂಥ ಒಂದು ಪ್ರಾಮುಖ್ಯವಾದ ವರದಿಯನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಅವರು ತಮ್ಮ ಯಾವ ಒಂದು ದೃಷ್ಟಿಕೋನದಿಂದ ಈ ವರದಿಯನ್ನು ನೋಡುತ್ತಿದ್ದಾರೆ ಅದನ್ನು ಅವರು ಸ್ವಲ್ಪ ಬದಲಾವಣೆ ಮಾಡಿಕೊಂಡು ಟೀಕೆಗಳನ್ನು ಮಾಡುವುದು ಸ್ವಾಗತಾರ್ಹವಾದದ್ದು ಎಂದು ಅವರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಈ ವರದಿಯಲ್ಲಿ ಪ್ರಸ್ತಾಪ ಮಾಡಿರತಕ್ಕ ಅಂಶಗಳಾದರೂ ಬಹಳ ಗಹನವಾದವು ಇದರಲ್ಲಿ ದೊಡ್ಡ ಅಧಿಕಾರ ಸ್ಥಾನದಲ್ಲಿರತಕ್ಕ ಒಬ್ಬ ಮಂತ್ರಿಗಳು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ, ಅವರ ಹಸ್ತಕ್ಷೇಪ ಇದರಲ್ಲಿ ಬಹಳವಾಗಿದ್ದರೂ ಏನೂ ಇಲ್ಲ ಎಂದು, ಅಂಥ ಅಪಾದನೆಗೆ ಲವಲೇಶವೂ ಅವಕಾಶವಿಲ್ಲ ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಅವರು ಒಂದು ಅಂಶವನ್ನು ತಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕು : ಅದೇನೆಂದರೆ — ಇದೇ ಮಾನ್ಯ ಸಭೆಯ ಮಾನ್ಯ ಸದಸ್ಯರುಗಳು ವಿಚಾರ ವಿಮರ್ಶೆ ನಡೆಸಿ ಕೊಟ್ಟಿರತಕ್ಕಂಥ ಒಂದು ವರದಿ ಇದು. ಈ ವರದಿಯನ್ನು ಅವರು ಯಾರ ಮೇಲಿನ ದ್ವೇಷದಿಂದಾಗಲಿ ಅಥವಾ ಯಾರನ್ನಾದರೂ ಹಳಿಯುವುದಕ್ಕಾಗಲಿ ಕೊಟ್ಟಂಥ ಒಂದು ವರದಿಯಲ್ಲ, ಎಂಬುದನ್ನು ಅವರು ಮನಗಾಣಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ನಿನ್ನೆಯೇ ನಾನು ತಿಳಿಸಿದ್ದೇನೆ. ಆ ರೀತಿಯಾಗಿ ಯಾರೂ ಹೇಳಲಿಲ್ಲ ವೆಂದು. ಮತ್ತೆ ತಾವು ಇವತ್ತು ಅದನ್ನೇ ಹೇಳುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಹೇಳಿದ್ದಾರೆ. ಏಕೆಂದರೆ, ಪ್ರಜಾಸತ್ತಾತ್ಮಕವಾದ ಇತಿಹಾಸದಲ್ಲಿ ಇಂತಹ ಶಾಸಕಾಂಗದಿಂದ...

ಅಧ್ಯಕ್ಷರು : ಅವರು ಇಲ್ಲವೆಂದು ಹೇಳಿದ ಮೇಲೆ ತಾವು ಒಪ್ಪಿಕೊಳ್ಳಬೇಕು. ಪುನಃ ಅದನ್ನು ಪುಷ್ಟೀಕರಿಸುತ್ತಾ ಹೋದರೆ ಸುಮ್ಮನೆ ವೇಳೆಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಶ್ರೀ ಪ್ರಭಾಕರ್ ಅವರು ನಿನ್ನೆ ಮಾತನಾಡುವಾಗ ಇದು ಸಣ್ಣದಾದರೆ ಸಣ್ಣದು ಎಂದು ತಿಳಿದುಕೊಳ್ಳಬಹುದು, ದೊಡ್ಡದಾದರೆ ದೊಡ್ಡದು ಎಂದು ತಿಳಿದುಕೊಳ್ಳಬಹುದೆಂದು ಹೇಳಿದರು. ನಾನು ಇದನ್ನು ದೊಡ್ಡದೆಂದು ತಿಳಿದುಕೊಳ್ಳಬೇಕಾಗಿದೆ. ಒಬ್ಬ ರಾಜಕಾರಣಿ ಅಧಿಕಾರದಲ್ಲಿದ್ದಾಗ ತಪ್ಪು ಮಾಡತಕ್ಕ ಸಂದರ್ಭ ಹೇಗೆ ಬರುತ್ತದೆಂಬುದು ಇದರಲ್ಲಿ ಬೆಳಕು ಚೆಲ್ಲಿದೆ. ಮುಂದೆ ಪ್ರಜಾಸತ್ತಾತ್ಮಕವಾದ ಇತಿಹಾಸದಲ್ಲಿರುವ ಮಂತ್ರಿಗಳು ಹಾಗೂ ಅಧಿಕಾರದಲ್ಲಿರತಕ್ಕ ರಾಜಕಾರಣಿಗಳು ಹೇಗೆ ತಮ್ಮ ಮಾರ್ಗವನ್ನು ಆಡಳಿತದಲ್ಲಿ ಸರಿಪಡಿಸಿಕೊಳ್ಳಬೇಕೆಂಬುದನ್ನು ಇದರಲ್ಲಿ ತೋರಿಸಿ ಕೊಟ್ಟಿದ್ದಾರೆ. ಯಾವ ರೀತಿ ಇಂತಹ ತಪ್ಪುಗಳು ಮುಂದೆ ಆಗದಂತೆ ಒಂದು ದಿಕ್ಸೂಚಿಯನ್ನು ನಮಗೆ ಕೊಟ್ಟಿದ್ದಾರೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಜೊತೆಗೆ ಈ ಒಂದು ವರದಿಯನ್ನು ಸಲ್ಲಿಸುವ ಕಾಲದಲ್ಲಿ ಸಮಿತಿಯ ಸದಸ್ಯರು ಒಂದು ಅರ್ಜಿಯನ್ನು ಸಲ್ಲಿಸಿದ್ದಾರೆ. ಸಮಿತಿ ತನ್ನ ಕಾರ್ಯಕ್ರಮ ವನ್ನು ನಡೆಸುವ ಕಾಲದಲ್ಲಿ ವ್ಯವಸ್ಥಿತವಾದ ಕಾನೂನು ಬದ್ಧವಾದ, ನಿಯಮಬದ್ಧವಾದ ರೀತಿಯಲ್ಲಿ ವ್ಯವಹಾರ ಮಾಡಲಿಲ್ಲವೆಂಬ ಮಾತನ್ನು ನಾನು ಒಪ್ಪುವುದಿಲ್ಲ ಜೊತೆಗೆ ಆ ಅರ್ಜಿಯನ್ನು ವರದಿಯ ಜೊತೆಯಲ್ಲಿ ಕೊಟ್ಟಿದ್ದಾರೆ. ನಾನೂ ಸಹ ಕೆಲವು ಜೆಂಟಿ ಸಮಿತಿಗಳಲ್ಲಿ ಕೆಲಸಮಾಡಿದ್ದೇನೆ. ಅವರು

(ಶ್ರೀ ಕಾಗೋಡು ತಿಮ್ಮಪ್ಪ)

ಕೊಟ್ಟಿರತಕ್ಕ ನಡವಳಿಕೆಗಳನ್ನು ನೋಡಿದಾಗ ಈ ದಿವಸ ಸಮಿತಿಯವರು ಪ್ರತಿದಿವಸದ ನಡವಳಿಕೆಗಳನ್ನು ಬಹಳ ಶ್ರದ್ಧೆಯಿಂದ ನಡೆಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಯಾರ್ಯಾರು ಯಾವ್ಯಾವ ಹಂತದಲ್ಲಿ ಏನೇನು ತೀರ್ಮಾನ ಮಾಡಿದ್ದಾರೆಂಬುದನ್ನು ಪೂರ್ಣ ವಿವರಗಳೊಂದಿಗೆ ವರದಿಯನ್ನು ಕೊಟ್ಟಿದ್ದಾರೆ. ಯಾವ ಒಬ್ಬ ಸದಸ್ಯ ತಾನು ಆ ಸಮಿತಿಯಲ್ಲಿದಾಗ ತನಗೆ ಯಾವ ಮಾಹಿತಿಯನ್ನು ಮತ್ತು ತಿಳುವಳಿಕೆಯನ್ನೂ ಕೊಡದಯೇ ನಡವಳಿಕೆಯನ್ನೂ ಕೊಡದೆಯೇ ನಡವಳಿಕೆಗಳನ್ನು ನಡೆಸಲಾಗಿದೆ ಎಂದು ಪ್ರಸ್ತಾಪ ಮಾಡಿರುವುದು ಅನುಚಿತವೆಂಬ ಕಾರಣದಿಂದ ನಾನು ಹೇಳುತ್ತೇನೆ. ಆದ್ದರಿಂದ ಆ ಸಮಿತಿಯ ನಡವಳಿಕೆಗಳು ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ಹಾಗೂ ನಿಯಮಗಳಿಗನುಗುಣವಾಗಿ ನಡೆದಿದೆ. ಆದ್ದರಿಂದ ಆ ಒಂದು ನಡವಳಿಕೆಗಳ ಬಗ್ಗೆ ಪ್ರಶ್ನೆ ಮಾಡತಕ್ಕ ಪ್ರಯತ್ನಕ್ಕೆ ಯಾವ ಒಬ್ಬ ಸದಸ್ಯರೂ ಕೈಹಾಕಬಾರದು. ಈ ಶಾಸನಸಭೆಗಳಲ್ಲಿ ನಡೆಯತಕ್ಕ ನಡವಳಿಕೆಗಳನ್ನು ಬಹಳ ಗೌರವದಿಂದ, ಬಹಳ ಮಹತ್ವಪೂರ್ಣವಾಗಿ ಕಾಣಬೇಕು. ಇಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಖುದ್ದು ತಿಳಿದುಕೊಳ್ಳದೆ ಆ ಕಡೆ ರಜಾ ಹಾಕಿ ಹೋಗುವ ಸದಸ್ಯರುಗಳೂ ಸಹ ಇರುತ್ತಾರೆ. ಇಲ್ಲಿ ನಡೆದಂಥ ಎಲ್ಲ ವಿಚಾರಗಳು ನನ್ನನ್ನೇನೂ ಬದ್ಧಪಡಿಸುವುದಿಲ್ಲವೆಂದು ಹೇಳಿದರೆ, ಅದಕ್ಕಿಂತಲೂ ಹಾಸ್ಯಾಸ್ಪದವಾದ ಮಾತು ಬೇರೆ ಏನೂ ಇಲ್ಲ. ನನ್ನ ಒಂದು ದೃಷ್ಟಿಯಲ್ಲಿ ಆ ಸಮಿತಿಯವರು ನಡೆಸಿರುವ ಕಾರ್ಯಕ್ರಮ ಬಹಳ ಸಮರ್ಪಕವಾಗಿದೆ. ಅದಕ್ಕಾಗಿ ಈ ಒಂದು ವರದಿಯನ್ನು ಬಹಳ ಮಹತ್ವಪೂರ್ಣವಾದುದೆಂದು ನಾವು ಕಾಣಬೇಕು. ನೀವೂ ಆ ರೀತಿಯಾಗಿ ಕಾಣಬೇಕು ಇದರಲ್ಲಿರುವ ಸತ್ಯಾಂಶಗಳು ಏನೇನೆಂಬುದನ್ನು ನಾವು ಮೊಟ್ಟಮೊದಲ ನೆಯವಾಗಿ ಅರ್ಥಮಾಡಿಕೊಳ್ಳಬೇಕು. ಹಿಂದೆ ಮಾನ್ಯ ಶ್ರೀ ವಿ.ಕೆ. ಕೃಷ್ಣ ಮೆನನ್ ಅವರ ಮೇಲೆ ಬಂದಂಥ ಆರೋಪದ ಬಗ್ಗೆ ಮಾನ್ಯ ಶ್ರೀ ಜವಹರ್‌ಲಾಲ್ ನೆಹರೂ ಅವರು ಏನೇನೋ ಪ್ರಯತ್ನಪಟ್ಟು ಮರೆಮಾಚು ಮಾಡುವುದಕ್ಕೆ ಪ್ರಯತ್ನಪಟ್ಟಂಥ ನಿದರ್ಶನವೂ ಇದೆ ಅಂತಹ ದೃಷ್ಟಾಂತಗಳು ಬೇಕಾದಷ್ಟಿವೆ. ಅನೇಕ ರೀತಿಯಲ್ಲಿ ಅಧಿಕಾರದಲ್ಲಿದ್ದವರ ಮೇಲೆ ಏನಾದರೂ ಆಪಾದನೆಗಳನು ಮಾಡಿದಾಗ ಸ್ವಾಭಾವಿಕವಾಗಿ ಮುಖ್ಯಮಂತ್ರಿಯಾಗಿರುವವರು ಏನೇನೋ ಕಾರಣಗಳಿಂದ ರಾಜಕೀಯದಲ್ಲಿ ಅವರನ್ನು ರಕ್ಷಣೆ ಮಾಡುವುದೂ ಉಂಟು. ಕೇವಲ ಒಂದು ಜೀಪಿನ ಪ್ರಕರಣದ ಬಗ್ಗೆ ಮಾನ್ಯ ಶ್ರೀ ಕೃಷ್ಣ ಮೆನನ್ ಅವರ ಮೇಲೆ ಹಿಂದೆ ಒಂದು ಆರೋಪಣೆ ಬಂದಾಗ, ಅದನ್ನು ಎಸ್ಟಿಮೇಟ್ಸ್ ಕಮಿಟಿಯವರು ಬಹಿರಂಗಪಡಿಸಿದಾಗ ಅದು ಲೋಕ ಸಭೆಯಲ್ಲಿ ಚರ್ಚೆಗೆ ಬಂದಾಗ, ಅಲ್ಲಿ ಅಧ್ಯಕ್ಷರಾಗಿದ್ದ ಮಾನ್ಯ ಶ್ರೀ ಅನಂತಶಯನು ಅಯ್ಯಂಗಾರ್ ಅವರು ಎಸ್ಟಿಮೇಟ್ಸ್ ಕಮಿಟಿಯವರು ಮಾಡಿರತಕ್ಕದ್ದನ್ನು ಆಸ್ತು ಎಂದೆನಿಸಿ ಅವರ ಒಂದು ವರದಿಯನ್ನು ಲೋಕಸಭೆಯಲ್ಲಿ ಅಂಗೀಕಾರಮಾಡಿದ್ದರೂ, ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದಿದ್ದರೂ, ಅವರೇ ಸ್ವೇಚ್ಛೆಯಾಗಿ ಮುಂದೆ ಬಂದು ರಾಜಕೀಯ ಒತ್ತಡಕ್ಕಾಗಿ ರಾಜೀನಾಮೆ ಕೊಡುವ ಪ್ರಸಂಗ ಬಂತು. ಆದರೆ ಇಲ್ಲಿ ನಮ್ಮ ಕೃಷಿ ಮಂತ್ರಿಗಳು ಆ ರೀತಿಯಾಗಿ ರಾಜೀನಾಮೆ ಕೊಡುವ ಕೆಲಸಕ್ಕೆ ಹೋಗಲಿಲ್ಲ. ಅವರೂ ಸಹ ಆ ರೀತಿಯಾಗಿ ಕೊಡುತ್ತಾರೆಂದು ನಾನು ತಿಳಿದಿದ್ದೇನೆ ರಾಜಕಾರಣಗಳಾಗಿರುವುದು ಒಂದು ಪವಿತ್ರವಾದ ಕೆಲಸ. ಸಾರ್ವಜನಿಕ ಜೀವನದಲ್ಲಿ ಇಂತಹ ಒಂದು ಸಮಿತಿ ಒಬ್ಬ ರಾಜಕಾರಣಿಯ ಮೇಲೆ ಆಪಾದನೆಯನ್ನು ಹೊರಿಸಿದಾಗ ಅದರ ಬಗ್ಗೆ ಇಂತಹ ಒಂದು ಪವಿತ್ರವಾದ ವೇದಿಕೆಯಿಂದ ಏನಾದರೂ ತೀರ್ಮಾನಮಾಡುವವರೆಗೆ ಅವರು ಅಧಿಕಾರದಿಂದ ದೂರ ಇರುತ್ತೇನೆಂದು ಹೇಳಬೇಕಾಗಿತ್ತು. ಅವರೇ ಸ್ವಪ್ರೇರಣೆಯಿಂದ ತ್ಯಾಗಮಾಡಿ ಹೊರಗೆ ಹೋಗುವ ಪ್ರಮೇಯವಿತ್ತು. ಆದರೂ ಅವರು ಅದನ್ನು ಮಾಡಲಿಲ್ಲ. ಅವರನ್ನು ಈಗಲಾದರೂ ಆರೀತಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ, ಇನ್ನು ಹುಲುಕೋಟಿ ಹತ್ತಿ ಗಿರಣಿಗೆ ಕೊಟ್ಟಿರತಕ್ಕ ಷೇರು ಬಂಡವಾಳದ ಬಗ್ಗೆ ಮಾನ್ಯ ಶ್ರೀ ಪ್ರಭಾಕರ್ ಅವರು ನಿನ್ನೆ ಮಾತನಾಡುತ್ತಾ ಇದು ಅಗ್ರೋಬೇಸ್ಡ್, ಅಗ್ರೊ ರಿಯಾಲಿಟಿ ಅಗ್ರೊ ಇಂಡಸ್ಟ್ರೀಸ್ ಎಂಬುದಾಗಿ ಹೇಳಿದರು. ನಾನು ಹುಲುಕೋಟಿಯಲ್ಲಿ ಮಿಲ್ ಆಗಬಾರದು ಎಂದು ಹೇಳುವುದಿಲ್ಲ. ಹಾಗೆ ಮಾಡಿದ್ದು ತಪ್ಪು ಎಂದು ಹೇಳುವುದಿಲ್ಲ. ಸರ್ಕಾರಕ್ಕೆ ಹುಲುಕೋಟಿ ಹತ್ತಿ ಗಿರಣಿಗೆ ಷೇರು ಬಂಡವಾಳ ಕೊಡಬೇಕೆಂಬ ಇರಾದೆ ಇದ್ದಿದ್ದರೆ, ಈಗಾಗಲೇ ೩೭ ಲಕ್ಷ ರೂಪಾಯಿಗಳನ್ನು ಕೊಟ್ಟಿರುವಾಗ ಇನ್ನು ಕೇವಲ ೧೫ ಲಕ್ಷರೂಪಾಯಿಗಳನ್ನು ಕೊಡಬಾರದೆಂದು ಇವರಿಗೆ ಯಾರು ಹೇಳಿದರು. ಆ ರೀತಿಯಾಗಿ ಅವರಿಗೆ ಕೊಟ್ಟಿದ್ದು ಎಂಬ ತಪ್ಪು ಎಂಬುದಾಗಿ ಈ ಸದನದಲ್ಲಿ ಇವರನ್ನು ಯಾರೂ ಪ್ರಶ್ನೆ ಮಾಡಲಿಲ್ಲ. ಈ ೧೫ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡುವಾಗ ನೀವು ಅನುಸರಿಸಿರುವ ವಿಧಾನ ಎಷ್ಟರಮಟ್ಟಿಗೆ ನಿಮ್ಮ ಕಾರ್ಯವ್ಯಾಪ್ತಿಯನ್ನು ತೃಪ್ತಿಪಡಿಸಿರುವುದಾಗಿದೆ ಎಂಬುದು ಇಲ್ಲಿರತಕ್ಕ ಪ್ರಶ್ನೆ. ಅರ್ಜಿ ೨೧ನೇ ತಾರೀಖು ಬರೆದು ಅದು ೨೨ನೇ ತಾರೀಖಿನಲ್ಲಿ ಬಂದು ಅವತ್ತೇ ಅನಸೈನ್ಡ್ ಪ್ರಾಜೆಕ್ಟ್ ರಿಪೋರ್ಟ್ ಅಷ್ಟು ಬೇಗ ಕೊಟ್ಟಿದ್ದಾರೆ. ಈ ರೀತಿಯಾದಂಥ ಕ್ರಮ ಅನುಸರಿಸರುವುದಕ್ಕೆ ಈ ಒಂದು ಕ್ರಮದಲ್ಲಿ ದೋಷ

ಕಾಣುವುದಕ್ಕೆ ನಮ್ಮ ಕೃಷಿ ಮಂತ್ರಿಯವರು ಹಸ್ತಕ್ಷೇಪ ಮಾಡಿದುದೇ ಮುಖ್ಯ ಕಾರಣವಾಗಿದೆ. ಅವರಿಗೆ ಸಾಲ ಏಕೆ ಕೊಟ್ಟಿರಿ ಎಂಬುದಾಗಿ ನಾವು ಪ್ರಶ್ನೆ ಮಾಡುವುದಿಲ್ಲ. ನಿಮ್ಮ ಹಸ್ತಕ್ಷೇಪವಾಗಿ ಕ್ರಮದಲ್ಲಿ ದೋಷವಾಗಿದೆ. ಹಾಗೂ ಲೋಪವಾಗಿದೆ. ಆದರೆ ಮಾನ್ಯ ಶ್ರೀ ಪ್ರಭಾಕರ್ ಅವರು ಹೇಳಿದ ಹಾಗೆ ಹುಲುಕೋಟಿ ಹತ್ತಿಯ ಗಿರಣಿಗೆ ಸಾಲ ಕೊಟ್ಟಿರುವ ಬಗ್ಗೆ ನಾನು ಆಕ್ಷೇಪಣೆ ಮಾಡುತ್ತಿಲ್ಲ. ಆದರೆ ಕೊಟ್ಟಿರುವ ಕ್ರಮ ಸರಿಯಲ್ಲವೆಂದು ನಾನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಸಹಕಾರ ಸಂಘದ ರೂಲ್ಸ್‌ನಲ್ಲಿ ಸೆಕ್ಷನ್ ೧೬ ಪ್ರಕಾರ ಸಹಕಾರ ಸಂಘದಲ್ಲಿ ಒಂದು ಕಂಪನಿ ಸದಸ್ಯತ್ವವನ್ನು ಪಡೆಯುವುದಕ್ಕೆ ಅವಕಾಶವಿಲ್ಲ. ಹಾಗಿದ್ದಾಗ ಸದಸ್ಯತ್ವವನ್ನು ಪಡೆಯುವುದಕ್ಕೆ ಸಹಕಾರ ಸಂಘದಲ್ಲಿ ೧೦ ಸಾವಿರ ರೂಪಾಯಿಗಳಿಂತ ಹೆಚ್ಚು ಬಂಡವಾಳವನ್ನು ತೊಡಗಿಸುವುದಕ್ಕೆ ಅವಕಾಶವಿಲ್ಲ. ೧೦ ಸಾವಿರ ರೂಪಾಯಿಗಳಿಗಿಂದ ಜಾಸ್ತಿ ಮಾಡುವುದಕ್ಕೆ ೧೬ನೇ ಸೆಕ್ಷನ್ ಪ್ರಕಾರ ವಿನಾಯತಿ ಕೊಡಬೇಕೆಂದು ಡಿಸಂಬರ್ ತಿಂಗಳಲ್ಲಿ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಕಾಲದಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದಂತಹ ಒಂದು ಇಂಟೆನ್ಷನ್ ಏನು ? ಮೈಸೂರು ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎನ್ನುವ ಸಂಸ್ಥೆ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್‌ಗೆ ಇನ್ನೂ ಇತರ ಅಂತಹ ಸಂಸ್ಥೆಗಳಿಗೆ ಮತ್ತು ಕೃಷಿಗೆ ಸಂಬಂಧಪಟ್ಟ ಕೈಗಾರಿಕೆಗಳಿಗೆ ಷೇರು ಬಂಡವಾಳವನ್ನು ಕೊಡಬೇಕೆಂದು ಈ ರೀತಿ ಮಾಡಿದ್ದಾರೆಯೇ ? ಅಥವಾ ಹುಲುಕೋಟಿ ಹತ್ತಿ ಗಿರಣಿಗೆ ಷೇರು ಬಂಡವಾಳ ಕೊಡಬೇಕೆಂದು ಈ ರೀತಿ ಮಾಡಿದ್ದಾರೆಯೇ ? ಅದಕ್ಕೆ ಷೇರು ಬಂಡವಾಳವನ್ನು ತೊಡಗಿಸಬೇಕೆಂಬ ಉದ್ದೇಶದಿಂದ ಮೈಸೂರು ಸಹಕಾರ ಸಂಘಗಳ ರೂಲ್ಸಿನ ಸೆಕ್ಷನ್ ೧೬ ಮತ್ತು ೨೨ರ ಪ್ರಕಾರ ವಿನಾಯತಿಯನ್ನು ತೋರಿಸುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆಂದು ನನಗೆ ಕಾಣುತ್ತದೆ.

SRI K.H. PATIL.—Is the exemption restricted to Hulkoti Mill or is the exemption general ?

SRI KAGODU THIMMAPPA.—The circumstances which prompted the Honourable Minister to issue that notification are to help the textile mills.

ಇಲ್ಲದಿದ್ದರೆ ತಮಗೆ ಸಾರ್ವಜನಿಕರಿಂದ ಏನಾದರೂ ಕೋರಿಕೆ ಬಂದಿತ್ತೇ ? ಹುಲುಕೋಟಿಯಲ್ಲದ ಇನ್ನು ಯಾವುದಾದರೂ ಇತರು ಸಹಕಾರೀ ಸಂಸ್ಥೆಗಳಿಂದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನವರು ಶೇರ ಬಂಡವಾಳ ಹಾಕಬೇಕೆಂದು ಕೇಳಿಕೆ ಬಂದಿತ್ತೇ ? ಅಥವಾ ಸಹಕಾರೀ ಸಂಸ್ಥೆಗಳ ಪ್ರತಿನಿಧಿಗಳು ಅಥವಾ ಪ್ರಭಾವಶಾಲಿಗಳು ಸರ್ಕಾರದ ಮೇಲೆ ಒತ್ತಾಯ ತಂದಿದ್ದರೆ ಹಾಗೆ ಒತ್ತಾಯ ತಂದು ಇಂಥ ವಿನಾಯತಿಯನ್ನು ತಾವು ಕೊಡಬೇಕೆಂದು ಬೇಡಿಕೆ ಇಟ್ಟಿದ್ದರೆ ? ಅಂಥ ಸಂದರ್ಭದಲ್ಲಿ ಈ ಸುತ್ತೋಲೆಯನ್ನು ಹೊರಡಿಸಿದ್ದರೆ ನಾನು ಒಪ್ಪುತ್ತಿದ್ದೆ.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಮಂತ್ರಿಯವರು ಸುತ್ತೋಲೆಯನು ಹೊರಡಿಸಿದಾಗ ಎಲ್ಲದಕ್ಕೂ ಅನ್ವಯವಾಗುವಂತೆ ಹೊರಡಿಸಿದ್ದೇವೆ ಎಂದು ಹೇಳಿದರು. ಆ ಸುತ್ತೋಲೆಯನ್ನು ನಮ್ಮ ಬಿಜಾಪುರ ಜಿಲ್ಲೆಯವರು ಸಹ ಒಂದು ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಅವರಿಗೆ ಇಲ್ಲಿಯವರೆಗೆ ಸಹ ಒಂದು ಬಿಡಿ ಕಾಸನ್ನೂ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ಈ ಸೆಕ್ಷನ್ ೧೬ ಮತ್ತು ೨೨ರ ಪ್ರಕಾರ ವಿನಾಯಿತಿ ಮಾಡಿ ಸುತ್ತೋಲೆ ಹೊರಡಿಸಿರುವ ಉದ್ದೇಶ ನಿಮ್ಮ ಹುಲುಕೋಟಿಯ ಸಂಸ್ಥೆಗೆ ಸಹಾಯ ಮಾಡಬೇಕೆಂಬುದು ಇಲ್ಲ ವೇದ್ಯವಾಗುತ್ತದೆ. ಇದರಲ್ಲಿ ನಿಮ್ಮ ಸ್ವಾರ್ಥ ಸೇರಿದೆಯೇ ವಿನಹ ರಾಜ್ಯದ ಹಿತಾಸಕ್ತಿಗಳು ಯಾವುದೂ ಅಡಗಿಲ್ಲ. ಆದ್ದರಿಂದ ನೀವು ಇದನ್ನು ಮಾಡಿರುವುದು ನಿಮ್ಮ ಹುಲುಕೋಟಿಯ ಸಹಕಾರಿ ಸಂಸ್ಥೆಗೆ ಆಗ್ರೋ ಇಂಡಸ್ಟ್ರೀಸ ಕಾರ್ಪೊರೇಷನಿಂದ ಬಂಡವಾಳವನ್ನು ಕೊಡಿಸಬೇಕೆಂಬುದನ್ನು ತಾವು ಪ್ರಥಮವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಜೊತೆಗೆ ಸೆಕ್ಷನ್ ೧೬ರ ವಿನಾಯಿತಿ ಕೊಡತಕ್ಕ ಅಧಿಕಾರ ತಮಗೆ ಹೇಗೆ ಬಂತು ? ಏಕೆಂದರೆ ಅದನ್ನು ಮಾಡುವಂತಹ ಅಧಿಕಾರ ಸಂಪೂರ್ಣವಾಗಿ ಶಾಸನ ಸಭೆಗೆ ಇರುವುದು. ಆ ಅಧಿಕಾರವನ್ನು ನೀವು ಕಿತ್ತುಕೊಂಡು ಮಾಡಿದಿರಿ ? ಮೊದಲನೆಯದಾಗಿ ಒಂದು ಕಂಪನಿಯಲ್ಲಿ ಸಹಕಾರ ಸಂಘ ಸದಸ್ಯತ್ವವನ್ನು ಪಡೆಯುವುದಕ್ಕಾಗುವುದಿಲ್ಲ ಎಂದು ಇದೆ. ಆದರೆ ಅದರ ಸಾಧ್ಯತೆ ಇದೆ ಎಂದು ವಿನಾಯಿತಿ ಕೊಟ್ಟ ಸುತ್ತೋಲೆಯನ್ನು ಕಳಿಸಿ ಇರತಕ್ಕಂತಹ ಕಾನೂನಿಗೆ ತಿದ್ದುಪಡಿ ಮಾಡಿದ ಹಾಗೆ ಮಾಡಿದ್ದಾರೆ. ಅದಕ್ಕೆ ಏನಾದರೂ ತಿದ್ದುಪಡಿ ಮಾಡಬೇಕಾದರೆ ಈ ಶಾಸನ ಸಭೆ ಮಾಡಬೇಕಾಗುತ್ತದೆ. ಅದು ಬಿಟ್ಟು ನೀವು ಈ ರೀತಿ ಮಾಡಿದುದರಿಂದ ಶಾಸನ ಸಭೆ

(ಶ್ರೀ ಕಾಗೋಡು ತಿಮ್ಮಪ್ಪ)

ಇರತಕ್ಕಂತಹ ಹಕ್ಕನ್ನು ಸಹ ನೀವು ಕಸಿದುಕೊಂಡ ಹಾಗೆ ಆಗಿದೆ ಆದನ್ನು ತಮ್ಮ ಆಸ್ತಯಿಂದ, ಮತ್ತು ಸ್ವಾರ್ಥ ದೃಷ್ಟಿಯಿಂದ ಮಾಡುವುದಕ್ಕೋಸ್ಕರ ಈ ಸುತ್ತೋಲೆಯನ್ನು ಮಾಡಿ ಕಳಿದ್ದೀರಿ. ಇದರಿಂದ ನೀವು ಆ ಮಿಲ್ಲಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದಲೇ ಮಾಡಿದ್ದೀ ಎಂಬುದೇ ನನ್ನ ಅಪಾದನೆ.

ಇನ್ನು ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ವ್ಯಾಪ್ತಿ ಎಷ್ಟು ಇದೆ ಇದರ ಕೆಲಸ ಏನು ಏನ್ನುವುದನ್ನು ವಿಸ್ತಾರವಾಗಿ ಹೇಳುವುದು ಕಷ್ಟ. ಆ ಸಮಿತಿಯವರು ಅಲ್ಲಿಗೆ ಹೋದಂತಹ ಕಾಲದಲ್ಲಿ ಅದರ ಉದ್ದೇಶ, ಆರ್ಟಿಕಲ್ಸ್ ಆಫ್ ಆಸೋಶಿಯೇಶನ್ ಮತ್ತು ಮೆಮೊರಂಡಂ ಆಫ್ ಅಸೋಶಿಯೇಶನ್ ನೋಡಿದ್ದಾರೆ. ಮಾನ್ಯ ಕೃಷಿ ಸಚಿವರು ಸಹಕಾರೀ ಕ್ಷೇತ್ರದಲ್ಲಿ ಬಹ ಅನುಭವ ಪಡೆದವರು ಮತ್ತು ಕೃಷಿ ಕ್ಷೇತ್ರದಲ್ಲಿ ಸುಧಾರಣೆ ಮಾಡಬೇಕೆಂಬ ಮನಸ್ಸುಳ್ಳವರು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಅವರಿಗೆ ಇಂಥ ಒಂದು ಆಸಕ್ತಿ ಉಂಟಾದ ಮೇಲೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನ ನಿಯಮಗಳನ್ನು ಸಂಪೂರ್ಣವಾಗಿ ಬದಲಾವಣೆ ಮಾಡಲು ಅವಕಾಶ ಇದ್ದರೂ ಏಕೆ ಮಾಡಿಲ್ಲ ? ಆದರೆ ನೀವು ಅಧಿಕಾರದಲ್ಲಿದ್ದಾಗ ಯಾವುದನ್ನಾದರೂ ಕಾನೂನುಬದ್ಧವಾಗಿ ಮಾಡಬೇಕಾಗಿದೆ. ಇವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನ ಉದ್ದೇಶಗಳನ್ನು ಬದಲಾವಣೆ ಮಾಡಿಕೊಂಡು ಅದರಲ್ಲಿ ಟೆಕ್ಸ್‌ಟೈಲ್ ಅಲ್ಲದೆ ಇತರೆ ಉದ್ಯಮಗಳು ಸಹ ಬರುತ್ತವೆ ಎನ್ನುವ ವ್ಯಾಖ್ಯಾನ ಮಾಡಿಕೊಂಡು ಈ ಕೆಲಸ ಮಾಡಿದ್ದರೆ, ಬಹುಶಃ ಇವತ್ತು ಇಂಥ ಆಕ್ಷೇಪಣೆ ಬರುತ್ತಿ ಇರಲಿಲ್ಲ. ಅಲ್ಲಿ ನೀವು ತಪ್ಪು ಮಾಡಿದ್ದೀರಿ ನಿಮಗೆ ನಿಜವಾಗಿ ಆಸಕ್ತಿ ಇದ್ದಿದ್ದರೆ ಇಡೀ ಸಹಕಾರೀ ಕ್ಷೇತ್ರವನ್ನು ಉತ್ತಮಪಡಿಸಬಹುದಾಗಿತ್ತು. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಉದ್ದೇಶವನ್ನೇ ಬದಲಾವಣೆ ಮಾಡಿಕೊಂಡು ತದ ನಂತರ ಇಂಥ ಬೇಡಿಕೆಯನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಂದೆ ಇಟ್ಟಿದ್ದರೆ ಬಂಡವಾಳ ಕೊಡಬಹುದಾಗಿತ್ತು. ಈ ಮೂಲಭೂತವಾದ ವ್ಯವಸ್ಥೆಯನ್ನು ಬದಲಾವಣೆ ಮಾಡದೆ ಇದ್ದಂತ ವ್ಯವಸ್ಥೆಯನ್ನೇ ಆಶ್ರಯಿಸಿಕೊಂಡು, ಅದರ ಅನುಕೂಲ ಪಡೆಯಲು ಅಧಿಕಾರಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಥವಾ ಅಲ್ಲಿರತಕ್ಕಂತಹ ಡೈರೆಕ್ಟರುಗಳು ನನ್ನ ಮಾತನ್ನು ಕೇಳುತ್ತಾರೆ ಎನ್ನುವ ಅಭಿಪ್ರಾಯದಲ್ಲಿ ಯಾವ ಮಾರ್ಗವನ್ನು ಅನುಸರಿಸಬೇಕೋ, ಅದನ್ನು ಅನುಸರಿಸದೆ ಹಿಂಬಾಗಿಲಿನಿಂದ ಈ ಕೆಲಸ ಮಾಡುವುದು ಉಚಿತವಾದುದು ಅಲ್ಲವೆಂದು ತಮ್ಮ ಮುಖಾಂತರ ಮಾನ್ಯ ಪ್ರಭಾಕರವರಿಗೆ ಹೇಳಬಯಸುತ್ತೇನೆ. ಇದರಲ್ಲಿ ಅನೇಕ ಅಪಾದನೆಗಳು ಇವೆ. ಅವುಗಳಲ್ಲಿ ಟ್ರಸಸ್ ತಯಾರಿಕೆ ಟ್ರಸಸ್ ಸಾಗಾಣಿಕೆ ಬೀಜೋಪಚಾರ ಸಬ್ಸಿಡಿ ಇತ್ಯಾದಿಗಳು ಸೇರಿಕೊಂಡಿವೆ. ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನವರು ಟ್ರಸಸ್ ಮಾಡತಕ್ಕದ್ದು ಒಂದು ಆಬ್ಜೆಕ್ಟಿವ್ ? ಸ್ವಾರ್ಥದಿಂದ ಎಲ್ಲವನ್ನೂ ಮಾಡಿದರೆ ಇದಕ್ಕೆ ಮಿತಿಯಾದರೂ ಇಲ್ಲದೆ ? ಉದಾಹರಣೆಗೆ ಮಾನ್ಯ ಸಿದ್ಧವೀರಪ್ಪನವರು ಆರೋಗ್ಯ ಮಂತ್ರಿಯಾಗಿದ್ದಾರೆಂದು ಆಸ್ಪತ್ರೆ ಯಲ್ಲಿರತಕ್ಕಂತಹ ಒಂದು 10 ಬಾಟ್ಲಿ ಔಷಧಿಗಳನ್ನು ಯಾರ ಹತ್ತಿರವಾದರೂ ಹೇಳಿ ತೆಗೆದುಕೊಂಡು ಬರಬಹುದಾಗುತ್ತದೆಯೇ ? ಅಥವಾ ಒಂದು ಆಸ್ಪತ್ರೆಯ ಔಷಧಿಯನ್ನು ಇನ್ನೊಂದ್ ಆಸ್ಪತ್ರೆಗೆ ಫೋನ್ ಮಾಡಿ ತೆಗೆದುಕೊಂಡು ಹೋಗಿ ಎಂದು ಹೇಳುವುದಕ್ಕಾಗುತ್ತದೆಯೇ ? ಅದನ್ನು ತೆಗೆದುಕೊಂಡು ಹೋಗಬೇಕಾದರೂ ಕೆಲವು ಪ್ರೊಸೀಜರ್ಸ್ ಮತ್ತು ಪದ್ಧತಿಗಳು ಇವೆ. ಆದ್ದರಿಂದ ಟ್ರಸಸ್ ಮಾಡಬೇಕೆಂದು ನಿಮ್ಮನ್ನು ಹುಲುಕೋಟೆಯವರು ಕೇಳಿದ್ದಾರೆಯೇ ? ಅಥವಾ ಹುಲುಕೋಟಿಯವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನವರು ಕಬ್ಬಿಣವನ್ನು ತರಿಸಿಕೊಡುವುದಕ್ಕೆ ನಮ್ಮ ಏಜೆಂಟರಾಗಿ ಕೆಲಸ ಮಾಡಬೇಕೆಂದು ಕೇಳಿದ್ದಾರೆಯೇ ? ಅವರು ಇವರ ಏಜೆಂಟರಾಗಿ ಕೆಲಸ ಮಾಡುವ ಅವಶ್ಯಕತೆಯಾದರೂ ಏನಿತ್ತು ? ನಾನು ಮಾನ್ಯ ಕೃಷಿ ಮಂತ್ರಿಯವರನ್ನು ಕೇಳುವುದಕ್ಕೆ ಇವತ್ತು ತಯಾರಾಗಿಲ್ಲ. ಹಾಗಿದ್ದರೆ ಕೃಷಿ ಮಂತ್ರಿಯವರು ಕೇಳಿ ಹುಲುಕೋಟಿ ಮಿಲ್ಲನವರು ಏನಾದರೂ ಬರವಣಿಗೆಯ ಮುಖಾಂತರ ಕೇಳಿದ ಪತ್ರಗಳು ಇವೆಯೇ ? ಹುಲುಕೋಟಿ ಟೆಕ್ಸ್‌ಟೈಲ್ ಮಿಲ್ಲಿನಿಂದ ಯಾವ ರೀತಿಯ ಬೇಡಿಕೆಯೂ ಇದರ ಬಗ್ಗೆ ಬಂದಿಲ್ಲವೆಂದು ಇದರಲ್ಲಿ ಹೇಳಿದ್ದಾರೆ. ಆದ್ದರಿಂದ ನಮ್ಮ ಏಜೆಂಟರಾಗಿ ಕೆಲಸ ಮಾಡಿ ಎಂದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿನವರನ್ನು ಮಿಲ್ಲಿನವರು ಕೇಳಿದ್ದಾರೆಯೇ ? ಅದರ ಒಂದು ಗದವಾದರೂ ಬಂದಿದೆಯೇ ? ಅಂಥ ಯಾವುದಾದರೂ ಒಂದು ಕಾಗದಚೂರಾದರೂ ಬಂದಿದ್ದರೆ ಈ ಸದನದಲ್ಲಿ ಅದನ್ನು ಇಡಿ.

3-00 P.M.

ಆ ಬಗ್ಗೆ ಒಂದು ಕಾಗದದ ಚೂರು ಬಂದಿಲ್ಲ. ಒಂದು ವೇಳೆ ಅವರಿಂದ ಕಾಗದ ಬಂದಿದೆ ಎಂದು ತಿಳಿದುಕೊಳ್ಳೋಣ. ಅದರಲ್ಲಿ ಅವರು ಟ್ರಸಸ್‌ನ್ನು ಯಾವ ದರದಲ್ಲಿ ಮಾಡಿಕೊಡುತ್ತೀರಿ ಎಂದು ಗೊತ್ತು ಮಾಡುವುದು ಬೇಡವೇ ? ಅದೇನು ಸಂತೆಯಲ್ಲಿ ಸಿಕ್ಕಿದ ವಸ್ತುವೇ ? ಆ ಕೆಲಸವನ್ನು ಮಾಡತಕ್ಕ ಕಾಲದಲ್ಲಿ ಯಾರಿಂದ ಒಪ್ಪಂದವಾಗಬೇಕಾಗಿತ್ತೋ ಅದು ಆಗಿಲ್ಲ. ಆ ರೀತಿ ಒಪ್ಪಂದ ಮಾಡಿಕೊಳ್ಳದೆ ಆ ಕೆಲಸವನ್ನು ಮಾಡಿದ್ದು ನ್ಯಾಯವೇ ? ಏತಕ್ಕೆ ಸ್ವ ಇಚ್ಛೆಯಿಂದ ಅದನ್ನು ಮಾಡಿಕೊಟ್ಟಿದ್ದಾರೆ ? ಪ್ರತಿಯೊಂದಕ್ಕೂ ನಾವು ಕಾನೂನು ಮಾಡಿ ಇಟ್ಟಿದ್ದೇವೆ. ಆ ಟ್ರಸಸ್ ಅನ್ನು ಮಾಡತಕ್ಕ ಅವಶ್ಯಕತೆ ಬಂದಾಗ ಅದನ್ನು ಮಾಡತಕ್ಕ ಕಾಲದಲ್ಲಿ ಆ ಸೊಸೈಟಿಯಿಂದ ಯಾವ ಕಾಗದವೂ ಬಂದಿಲ್ಲ. ಅದಕ್ಕೆ ಒಂದು ಉತ್ತರ ಸಾಬೀತು ಆಗುತ್ತದೆ ಆ ಸಮಿತಿಯ ಅಧ್ಯಕ್ಷರು ಒಂದು ಮಾತನ್ನು ಕೇಳುತ್ತಾರೆ. ಅದು ಈ ರೀತಿ ಇದೆ.

"At a meeting held in the Chambers of the Genaral Manager (AESD), Hebbal, the Hon. Minister for Agriculture, directed the following works to be attended immediately.—

Before I read this portion, I will read some relevant portion on page 33. It reads thus.

"Sri BAPU GOWDA.—What value do you attach for oral instructions ?

GENERAL MANAGER.—Because we know this type of work we have taken up this work.

CHAIRMAN.—You have completely misled the Committee in giving false information. The proceedings of the meeting with the Hon'ble Minister for Agriculture on 19th January 1973 at 10-30 a.m. at Hebbal office is as follows."

The proceedings of the meeting which the Hon. Minister for Agriculture held at Hebbal is as follows.

"At a meeting held in the Chambers of the General Manager (AESD), Hebbal, the Hon'ble Minister for Agriculture, directed the following works to be attended immediately.—

1. The blue print of the designed truss required for the construction of Spinning Mill is to be taken up immediately and approval of the Deputy Architect, Government of Mysore be obtained to-day only.
2. Fabrication of 120 angle trusses and 30 tubular trusses of the specified design should be taken up within a period of 1 1/2 months from now and transported to destination for erection purposes.
3. Iron hand ware *i.e.*, angle iron, etc., required for the fabrication is to be despatched to the CAEW from the Agro-spares Division immediately for taking up of fabrication work.
4. Within a period of two days a sample truss is to be fabricated with the available materials or from the materials obtained from the Spares Division, and this sample shown to the Hon'ble Minister for Agriculture for his approval.
5. As and when the extra materials are required, the Agro-Spares Division may be requested to arrange for the supply of the materials in time to keep up the schedule of fabrication work.

(CHAIRMAN)

6. The Managing Director was requested by Hon'ble Minister to kindly see that arrangement with regard to the procurement and supply of iron materials etc., is made and the fabrication work done on priority basis. Is this true ?

GENERAL MANAGER.—Yes, Sir.

These are the questions and directions given.

Sri M. Sathyanarayana Rao has further clarified in this way and it is reported like this.

SRI M. SATYANARAYANA RAO.—This job was undertaken as per the instructions of the Minister for Agriculture ?

GENERAL MANAGER.—Yes, Sir.

It is evidently clear that as per the instructions issued by the Hon. Minister for Agriculture, these works have been executed.

ಅವರು ಕೃಷಿ ಮಂತ್ರಿಗಳ ಓರಲ್ ಇನ್‌ಸ್ಟ್ರಕ್ಷನ್ ಮೇಲೆ ಈ ಕೆಲಸವನ್ನು ಒಪ್ಪಿಕೊಂಡಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳಿಗೂ ಹುಲುಕೋಟಿ ಟೆಕ್ಸ್‌ಟೈಲ್ ಮಿಲ್ಲಿಗೂ ಯಾವ ಸಂಬಂಧವೂ ಇಲ್ಲ ಎಂದರೆ ಅವರು ಆ ಮಿಲ್ಲಿಗೆ ಸಂಬಂಧಪಟ್ಟ ಕೆಲಸವನ್ನು ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟು ಮಾಡಿಸುವ ಅವಶ್ಯಕತೆ ಏನಿತ್ತು ? ಒಂದು ವೇಳೆ ಯಾರಾದರೂ ಆ ಕೆಲಸವನ್ನು ಮಾಡಿಸಿಕೊಡಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳಿದ್ದರೆ ಅವರು ಅದನ್ನು ಬೇಗ ಮಾಡಿಕೊಡಿ ಎಂದು ಸಂಬಂಧಪಟ್ಟವರಿಗೆ ಹೇಳಲಿ. ಹಾಗೆ ಅವರು ಹೇಳುವಾಗ ಅವರು ಏನಾದರೂ ಒಂದು ಅರ್ಜಿಯನ್ನು ಕೊಟ್ಟಿರಬೇಕು, ಅವರ ಬೇಡಿಕೆ ಇರಬೇಕು ಆ ಕೆಲಸವನ್ನು ಮಾಡುವುದಕ್ಕೆ ದರವನ್ನು ಒಪ್ಪಂದ ಮಾಡಿಕೊಳ್ಳಬೇಕಾಗಿತ್ತು. ಅವರು ಅರ್ಜಿಯನ್ನು ಹಾಕಿಲ್ಲ, ದರವನ್ನು ಗೊತ್ತುಮಾಡಿಲ್ಲ, ಹಾಗೆಯೇ ಈ ಕೆಲಸವನ್ನು ಮಾಡುವುದು ಹೇಗೆ ? ಹಾಗಾದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಮತ್ತು ಹುಲಕೋಟಿ ಮಿಲ್ಲಿನವರು ಪಾಲುದಾರರೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಇದರಲ್ಲಿ ಕೃಷಿ ಮಂತ್ರಿಗಳು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರಿಗೆ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟಿರುವುದರಿಂದ ಅವರು ಈ ಕೆಲಸವನ್ನು ಮಾಡಬೇಕಾಯಿತು ಎಂದು ಅರ್ಥವಾಗುತ್ತದೆ. ಆದ್ದರಿಂದ ಇದರಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಮುಖ್ಯ ಅಧಿಕಾರಿಗಳು ಎಷ್ಟೊಂದು ತಪ್ಪು ಮಾಡಿದ್ದಾರೆ ಎಂದರೆ ಅದನ್ನು ಯಾವ ಜವಾಬ್ದಾರಿಯುಳ್ಳ ಮನುಷ್ಯನೂ ಸಹಿಸುವುದಕ್ಕಾಗುವುದಿಲ್ಲ. ಇಂಥಾ ಕೆಲಸಗಳನ್ನು ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟು ಮಾಡಿಸುತ್ತೇವೆ ಎಂದರೆ ನಾವು ಕಾನೂನು ಮಾಡುವ ಅವಶ್ಯಕತೆಯೇ ಇಲ್ಲ. ಒಬ್ಬರು ಮಂತ್ರಿಗಳ ಓರಲ್ ಇನ್‌ಸ್ಟ್ರಕ್ಷನ್ ಪ್ರಕಾರ ಸೆಕ್ರೆಟರಿ ಅವರು ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಿಲ್ಲ ಇಂಥಾ ವ್ಯವಹಾರವನ್ನು ಇಲ್ಲಿ ಮಾಡಿಸಿದ್ದಾರೆ. ಇದರಲ್ಲಿ ಮಾನ್ಯ ಕೃಷಿ ಮಂತ್ರಿಗಳು ಹಸ್ತಕ್ಷೇಪ ಮಾಡಿದ್ದಾರೆ. ಈ ಪಬ್ಲಿಕ್ ಅಂಡರ್ ಟೇಕಿಂಗ್ ಸಮಿತಿಯ ಪ್ರೊಸಿಂಡಿಂಗ್ಸ್ ಪುಟ ೩೭ರಲ್ಲಿ ಶ್ರೀಮಾನ್ ಎಂ.ಎಸ್. ಕೃಷ್ಣನ್ ಅವರು ಒಂದು ಮಾತನ್ನು ಕೇಳಿದ್ದಾರೆ. ಅದು ಈ ರೀತಿ ಇದೆ.

SRI M. S. KRISHNAN.—Is there anything to show on record that the Gadag Textile Mill had written a letter to manufacture the trusses ?

WITNESS.—Probably there is no record.

CHAIRMAN.—In this entire dealing the work was taken up at the instance of the Hon'ble Minister for Agriculture. Isn't it ?

WITNESS.—We were asked to do the work early."

ಇದರಿಂದ ಇಷ್ಟು ರಂಜುವಾತಾಗುತ್ತದೆ. ಈ ಕೆಲಸದಲ್ಲಿ ಯಾವ ದಾಖಲೆಯೂ ಇಲ್ಲದೆ ಕೆಲಸ ಮಾಡಿರುವುದರಿಂದ ಕೃಷಿ ಮಂತ್ರಿಗಳು ಹಸ್ತಕ್ಷೇಪ ನಡೆದಿದೆ ಎಂದು ಸಾಬೀತಾಗಿದೆ. ಕಣ್ಣಿರಂವ ಮಂತ್ರಿಗಳು ಇದನ್ನು ಹೌದು ಎಂದು ಹೇಳಲೇ ಬೇಕು. ಇದು ಎಲ್ಲರೂ ಒಪ್ಪಿಕೊಳ್ಳುವ ಮಾತು.

ಹಾಗೆಯೇ ಟ್ರಸಸ್ ಅನ್ನು ಗದಗಿಗೆ ಸಾಗಿಸತಕ್ಕಂಥಾ ಕೆಲಸ ನಡೆದಿದೆ, ಇದರಲ್ಲಿ ಕೂಡ ಯಾವ ತರಹ ವರ್ತನೆ ಮಾಡಿದ್ದಾರೆ ಎಂಬುದನ್ನು ನೋಡಿದರೆ ಅದನ್ನು ಯಾರೂ ಸಹಿಸುವುದಕ್ಕಾಗುವುದಿಲ್ಲ,

ಹಾಗೆಯೇ ಹುಲುಕೋಟಿ ಟೆಕ್ಸ್‌ಟೈಲ್ ಮಿಲ್ಲಿಗೆ ಬೇಕಾದ ಜಮೀನನ್ನು ಅವರು ಕೊಂಡುಕೊಂಡಿದ್ದಾರೆ ಎಂದು ಹೇಳಿದ್ದಾರೆ, ನಾನು ಹುಲುಕೋಟೆ ಮಿಲ್ಲನ್ನು ನೋಡಿದ್ದೇನೆ, ಅಲ್ಲಿ ಕೈಗಾರಿಕೆಯನ್ನು ಮಾಡಬೇಕು ಎಂದು ಅವರು ಆ ಜಮೀನನ್ನು ಕೊಂಡುಕೊಂಡಿದ್ದಾರೆ, ಅದು ವ್ಯವಸಾಯದ ಜಮೀನು, ನಾನು ಆ ಜಮೀನನ್ನು ನೋಡಿದ್ದೇನೆ, ಅದರಲ್ಲಿ ಯಾವುದೇ ಕೈಗಾರಿಕೆಯ ಬಿಲ್ಡಿಂಗ್ ಕಟ್ಟುವುದಕ್ಕೆ ಬರುವುದಿಲ್ಲ, ಅದನು ಕನ್‌ವರ್ಷನ್ ಮಾಡಬೇಕು, ಕನ್‌ವರ್ಷನ್ ಮಾಡದೆ ಅಲ್ಲಿ ಬಿಲ್ಡಿಂಗ್ ಕಟ್ಟಿದರೆ ಅದನ್ನು ಜಿಲ್ಲಾಧಿಕಾರಿಗಳು ಕಿತ್ತು ಹಾಕಿಸುವುದಕ್ಕೆ ಅವಕಾಶ ಇದೆ, ಅವರು ಆ ಜಮೀನನ್ನು ನಾನ್ ಅಗ್ರಿಕಲ್‌ಚರಲ್ ಪರ್ಪಸ್‌ಗೆ ಎಂದು ಕನ್‌ವರ್ಷನ್ ಮಾಡಿಕೊಂಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ, ಇದು ಅಗ್ರಿಕಲ್‌ಚರಲ್ ಲ್ಯಾಂಡ್ ಆಗಿರುವುದರಿಂದ ಅದನ್ನು ನಾನ್ ಅಗ್ರಿಚರಲ್ ಪರ್ಪಸ್ ಗೋಸ್ಕರ ಉಪಯೋಗಮಾಡುವುದಕ್ಕೆ ಕನ್‌ವರ್ಷನ್ ಮಾಡಿಕೊಂಡು ಬಿಲ್ಡಿಂಗ್ ಕಟ್ಟಬೇಕು, ಆದರೆ ಆ ರೀತಿ ಆ ಜಮೀನನ್ನು ಕನ್‌ವರ್ಷನ್ ಮಾಡಿಕೊಳ್ಳದೆ ಅಲ್ಲಿ ಕೈಗಾರಿಕೆಯನ್ನು ಕಟ್ಟುವುದಕ್ಕೆ ಅಧಿಕಾರವಿಲ್ಲ, ಶ್ರೀಮಾನ್ ಕೆ.ಎಚ್. ಪಾಟೀಲ್ ಅವರು ಕೃಷಿ ಮಂತ್ರಿಗಳಾಗಿರಬಹುದು, ಆದರೆ ಅವರು ಲ್ಯಾಂಡ್ ರೆವಿನ್ಯೂ ಆಕ್ಟಿನ ೯೫ನೇ ಸೆಕ್ಷನ್ ಪ್ರಕಾರ ಅಗ್ರಿಕಲ್‌ಚರಲ್ ಲ್ಯಾಂಡನ್ನು ನಾನ್ ಅಗ್ರಿಕಲ್‌ಚರಲ್ ಪರ್ಪಸ್ಸಿಗೆ ಉಪಯೋಗ ಮಾಡಿಕೊಳ್ಳಕೂಡದು ಎಂದು ಇದೆ, ಅವರು ಆ ಜಮೀನನ್ನು ಕನ್‌ವರ್ಷನ್ ಮಾಡದೆ ನಾನ್ ಅಗ್ರಿಕಲ್‌ಚರಲ್ ಪರ್ಪಸ್ಸಿಗೆ ಉಪಯೋಗ ಮಾಡಿದ್ದರೆ ಆ ಬಗ್ಗೆ ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ ? ಆ ಮಿಲ್ಲಿನವರು ಅಗ್ರಿಕಲ್‌ಚರಲ್ ಲ್ಯಾಂಡ್ ಅನ್ನು ಹೇಗೆ ನಾನ್ ಅಗ್ರಿಕಲ್‌ಚರಲ್ ಪರ್ಪಸ್ಸಿಗೆ ಉಪಯೋಗ ಮಾಡಿದ್ದಾರೆ ? ಆದ್ದರಿಂದ ಅವರು ಲೋಪ ಮಾಡಿದ್ದಾರೆ, ಸರ್ಕಾರದ ಕಣ್ಣು ದುರಿನಲ್ಲಿಯೇ ಅನ್ಯಾಯ ನಡೆಯುತ್ತಿದೆ, ಹೀಗಿರುವಾಗ ಹುಲುಕೋಟಿ ಟೆಕ್ಸ್‌ಟೈಲ್ ಮಿಲ್ಲಿನವರು ಕೊಂಡಿರತಕ್ಕ ಜಮೀನನ್ನು ಕನ್‌ವರ್ಷನ್ ಮಾಡದೆ ನಾನ್ ಅಗ್ರಿಕಲ್‌ಚರಲ್ ಪರ್ಪಸ್ಸಿಗೆ ಉಪಯೋಗ ಮಾಡಿದ್ದರೆ ಅವರ ಮೇಲೆ ಏತಕ್ಕೆ ಕ್ರಮ ಕೈಗೊಳ್ಳಲಿಲ್ಲ ?

ಶ್ರೀ ಕೆ.ಎಚ್, ಪಾಟೀಲ್,—ಅದನ್ನು ಊಹೆಯ ಮೇಲೆ ಹೇಳುವುದು ಸರಿಯಲ್ಲ, ಹಾಗಾದರೆ ಮಾನ್ಯ ಸದಸ್ಯರು ಆ ಬಗ್ಗೆ ನನಗೆ ಒಂದು ಪತ್ರವನ್ನು ಬರೆಯಿರಿ, ನಾನು ಅದನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿ ಆ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಬರೆಯಬಹುದು,

ಶ್ರೀ ಕಾಗೋಡು ತಿಮ್ಮಪ್ಪ,—ಆದ್ದರಿಂದ ಇದನ್ನು ಕನ್‌ವರ್ಷನ್ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಏಕೆಂದರೆ ಇವರು ಬುಲ್ಡೋಜರನ್ನು ಇಲ್ಲಿಯ ಉಪಯೋಗಕ್ಕೆ ಕೊಡುವುದಕ್ಕೆ ಮೊದಲು ಅಗ್ರಿಕಲ್ಚರಲ್ ಪರ್ಪಸ್‌ಗೆ ಒಂದು ರೇಟ್ ಇದ್ದರೆ, ನಾನ್—ಅಗ್ರಿಕಲ್ಚರಲ್ ಪರ್‌ಪಸ್‌ಗೆ ಒಂದು ರೇಟ್ ಇತ್ತು, ಆದರೆ ಇಲ್ಲಿಯ ಕೆಲಸಕ್ಕೆ ಬುಲ್ಡೋಜರನ್ನು ಉಪಯೋಗಿಸಿಕೊಂಡ ಮೇಲೆ ಬೇರೆ ಬೇರೆ ರೇಟ್‌ಗಳು ಇರಬಾರದೆಂದು ಏಪ್ರಿಲ್ ತಿಂಗಳ ನಂತರ ತಿದ್ದುಪಡಿ ಮಾಡಿದ್ದಾರೆ, ಇಲ್ಲಿ ಒಂದು ಹಕೀಕತ್ ನಡೆದಿದೆ. ಏನೆಂದರೆ ಈ ಟೆಕ್ಸ್‌ಟೈಲ್ ಮಿಲ್‌ನ ಉಪಯೋಗಕ್ಕೆ ಬುಲ್ಡೋಜರನ್ನು ಕೊಡುವ ವಿಚಾರದಲ್ಲಿ ಈ ಮಿಲ್‌ನವರಿಂದ ಒಂದು ಕೋರಿಕೆ ಪತ್ರ ಕೂಡ ಬಂದಿರಲಿಲ್ಲ. ಮಾನ್ಯ ಕೃಷಿ ಮಂತ್ರಿಗಳ ಮಾತಿನ ಮೇಲೆ ಕೊಟ್ಟಿದ್ದಾರೆ, ಅದೂ ಕೂಡ ಓರಲ್. ಬುಲ್ಡೋಜರ್‌ನ ಉಪಯೋಗ ಪಡೆದ ಮೇಲೆ, ಅದನ್ನು ನಾನ್—ಅಗ್ರಿಕಲ್‌ಚರಲ್ ಪರ್‌ಪಸ್‌ಗೆ ಉಪಯೋಗ ಮಾಡಿರುವುದರಿಂದ ೨೩ ಸಾವಿರ ಚಿಲ್ಲರೆ ಚಾರ್ಜ್ ಮಾಡಲಾಗಿದೆ ಎಂದು ಅಸಿಸ್ಟೆಂಟ್ ಅಗ್ರಿಕಲ್ಚರಲ್ ಇಂಜನಿಯರ್ ಅವರು ಒಂದು ಬಿಲ್‌ನ್ನು ಕಳಿಸಿಕೊಟ್ಟರು. ಈ ರೀತಿ ಬಿಲ್ ಬಂದ ನಂತರ, ಅದನ್ನು ಅಗ್ರಿಕಲ್ಚರಲ್ ಪರ್ಪಸ್‌ಗೆ ಎಂದು ಬದಲಾಯಿಸಿ ೨೩ ಸಾವಿರ ಚಿಲ್ಲರೆ ಹಣವನ್ನು ೭ ಸಾವಿರ ರೂಪಾಯಿಗಳಿಗೆ ಇಳಿಸುವ ಘಟನೆನಡೆದಿದೆ. ಈ ಅಂಶವನ್ನು ಈ ವರದಿಯಲ್ಲಿ ಹೇಳಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಆ ಜಮೀನನ್ನು ಕನ್‌ವರ್ಷನ್ ಮಾಡಿದ್ದಾರೆ. ಆ ರೀತಿ ಕನ್‌ವರ್ಷ್ ಮಾಡಿದ ಮೇಲೆ ಬುಲ್ಡೋಜರನ್ನು ಉಪಯೋಗಿಸಿದರೆ ಅದು ನಾನ್—ಅಗ್ರಿಕಲ್ಚರಲ್ ಪರ್‌ಪಸ್ ಆಗುತ್ತದೆ. ಆದರೂ ಸಹ ಇದನ್ನು ಅಗ್ರಿಕಲ್ಚರಲ್ ಪರ್‌ಪಸ್ ಎಂದು ಟ್ರೀಟ್ ಮಾಡುವುದಾದರೆ ಲ್ಯಾಂಡ್ ರೆವಿನ್ಯೂ ಆಕ್ಟ್ ಆದರೂ ಸಹ ಇರುವುದು ಏತಕ್ಕಾಗಿ ? ನಾಳೆ ವಿಧಾನ ಸೌಧದ ಸುತ್ತಮುತ್ತಲಿರುವ ಜಮೀನನ್ನು ಬುಲ್ಡೋಜರ್‌ನಿಂದ ಹೊಡಿಸಿ ಅದನ್ನು ಅಗ್ರಿಕಲ್ಚರಲ್ ಪರ್‌ಪಸಸ್ ಎಂದು ಟ್ರೀಟ್ ಮಾಡಿದರೆ ಅದನ್ನು ಯಾರಾದರು ನಂಬುವುದಕ್ಕಾಗುತ್ತದೆಯೇ ? ತಿಳಿವಳಿಕೆಯಿರುವ ಮನುಷ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ರ್‍ಯಾರೂ ಇದನು ಒಪ್ಪುವುದಕ್ಕಾಗುವುದಿಲ್ಲ. ಅಸಿಸ್ಟೆಂಟ್ ಅಗ್ರಿಕಲ್ಚರಲ್ ಇಂಜಿನಿಯರ್ ಅವರು ೨೩ ಸಾವಿರ ರೂಪಾಯಿಗಳಿಗೆ ಬಿಲ್ ಕಳಿಸಿದರು. ಅದರ ಮೇಲೆ ಇದನ್ನು ಅಗ್ರಿಕಲ್ಚರಲ್ ಪರ್‌ಪಸ್ ಎಂದು ಟ್ರೀಟ್ ಮಾಡಿ ಎಂಬುದಾಗಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಚೇರ್‌ಮನ್ ಅವರು ಬರೆದರು. ಇದು ನ್ಯಾಯುವೇ ಎಂದು ಕೇಳುತ್ತೇನೆ. ಇದರಲ್ಲಿ ಸಂಪೂರ್ಣವಾಗಿ ಲೋಪ ನಡೆದಿದೆ ಬುಲ್ಡೋಜರ್ ಸರ್ಕಾರಕ್ಕೆ ಸೇರಿದ್ದು. ಆದಕಾರಣ ಇದನ್ನು ಇಷ್ಟ ಬಂದಂತೆ ಉಪಯೋಗಿಸುವುದಕ್ಕೆ ಬರುವುದಿಲ್ಲ, ಆದರೂ ಉಪಯೋಗಿಸಿರಬೇಕಾದರೆ ಕೃಷಿ ಮಂತ್ರಿಗಳ ಹಸ್ತಕ್ಷೇಪವೇ ಇದಕ್ಕೆ ಕಾರಣವೆಂದು ಹೇಳುತ್ತೇನೆ. ಇದನ್ನೇ ಇವರು ಈ ರೀತಿ ಉಪಯೋಗಿಸಿಕೊಂಡ ಮೇಲೆ ಇನ್ನು ಯಾವುದನ್ನು ಇವರು ರಕ್ಷಣೆ ಮಾಡುತ್ತಾರೆಂದು ನಾನು ಕೇಳಬೇಕಾಗಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಚೇರ್‌ಮನ್ ಅವರು ಆ ರೀತಿ ಬರೆದ ಪತ್ರದ ಮೇಲೆ ೯ನೇ ತಾರೀಖಿನ ದಿವಸ ದಸ್ಕತ್ ಹಾಕಿದ್ದಾರೆ. ವ್ಯವಸಾಯಂದ ಭೂಮಿಗೆ ಬುಲ್ಡೋಜರನ್ನು ಉಪಯೋಗ ಮಾಡಲು ಯಾರಾದರು ಪಡೆಯಬೇಕಾದರೆ ಮೊದಲು ಇನಿಷಿಯಲ್ ಡೆಪಾಜಿಟ್ ಇಡಬೇಕಾಗುತ್ತದೆ, ಮತ್ತು ಅದಕ್ಕಾಗಿಯೇ ಇರುವ ಫಾರಂನ್ನು ಭರ್ತಿ ಮಾಡಿ ನಾಲ್ಕಾಣೆ ಸ್ಟಾಂಪನ್ನು ಹಚ್ಚಿ ಕೊಡಬೇಕೆಂದು ನಿಯಮವಿದೆ. ಈ ನಿಯಮದ ಪ್ರಕಾರ ನಡೆಯಬೇಕೆಂದು ಹ್ಯಾಂಡ್ ಬಿಲ್‌ಗಳನ್ನು ತಯಾರಿಸಿ ಹಳ್ಳಿಗಳ ರೈತರಿಗೆ ಹಂಚಿದ್ದಾರೆ. ಈ ರೀತಿ ಫಾರಂ ಭರ್ತಿ ಮಾಡಿಕೊಟ್ಟ ಮೇಲೆ ಸಂಬಂಧಪಟ್ಟ ಜಮೀನನ್ನು ಸರ್ವೆ ಮಾಡಿ ಎಸ್ಟಿಮೇಟನ್ನು ತಯಾರು ಮಾಡಲಾಗುತ್ತದೆ. ಅನಂತರ ಬುಲ್ಡೋಜರನ್ನು ಕೊಡಲಾಗುತ್ತದೆ. ಇದು ಇರತಕ್ಕಂಥ ನಿಯಮ. ಆದರೆ ಇಲ್ಲಿ ಮಾತ್ರ ಇದು ತಮ್ಮ ಆಸ್ತಿಯೆಂದು ತಿಳಿದುಕೊಂಡು ಉಪಯೋಗಿ ಮಾಡಿದ್ದಾರೆ. ಯಾವ ನಿಯಮವನ್ನೂ ಅನುಸರಿಸಿಲ್ಲ. ಇದು ತಮ್ಮ ಸ್ವಂತ ಆಸ್ತಿಯೆಂದು ತಿಳಿದುಕೊಂಡು ಉಪಯೋಗ ಮಾಡಿದ್ದರೆ ಅದು ತಪ್ಪಾಗುತ್ತದೆ ಇದು ಸಾರ್ವಜನಿಕರ ಸ್ವತ್ತು. ಆದರೂ ಇಲ್ಲಿ ಮಂಜೂರಾತಿ ಇಲ್ಲದೆ, ವರ್ಕಿಂಗ್ ಆರ್ಡರ್ ಇಲ್ಲದೆ ಅದರ ಉಪಯೋಗ ಪಡೆದು ಕೊಂಡಿದ್ದಾರೆ. ಅದಕ್ಕಾಗಿಯೇ ಇರುವ ಫಾರಂನ್ನು ಭರ್ತಿ ಮಾಡಿಕೊಟ್ಟಿಲ್ಲ. ಅಸಿಸ್ಟೆಂಟ್ ಅಗ್ರಿಕಲ್ಚರಲ್ ಇಂಜಿನಿಯರ್ ಅವರಿಂದ ಬಿಲ್ ಬಂದಾಗಲೇ ಇವರು ಉಪಯೋಗ ಮಾಡಿಕೊಂಡಿದ್ದು ಗೊತ್ತಾಗಿದ್ದು. ಆಗ ಅಪ್ಲಿಕೇಷನ್ ಫಾರಂ ಎಲ್ಲಿ ಎಂದು ಹುಡುಕಿಕೊಂಡಿದ್ದಾರೆ. ಅದು ಇಲ್ಲ ಎಂದು ಗೊತ್ತಾದಾಗ ತಾರೀಖು ೧೭-೩-೧೯೭೩ರಲ್ಲಿ ಅರ್ಜಿ ಕೊಟ್ಟಂತೆ ಒಂದು ಅರ್ಜಿಯನ್ನು ತಯಾರಿಸಿ ಕೊ᳚ಟ್ಟರು. ಅನಂತರ ಅದೇ ತಾರೀಖನ್ನು ೧೦-೧೨-೧೯೭೨ ಎಂದು ತಿದ್ದಿದ್ದಾರೆ. ಈ ರೀತಿ ತಾರೀಖನ್ನು ತಿದ್ದಿದರೆ ಅದು ಫೋರ್ಜರಿಯಾಗುತ್ತದೆ. ಈ ರೀತಿ ಫೋರ್ಜರಿಯಾಗಬೇಕಾದರೆ ಅಬೇಟರ್ ಯಾರಾದರು ಇರಬೇಕಾಗುತ್ತದೆ. ಆದ್ದರಿಂದ ಇಲ್ಲಿ ಐ.ಪಿ.ಸಿ. ೧೦೫ನೇ ಸೆಕ್ಷನ್ ಪ್ರಕಾರ ಅಬೇಟರ್ ಆದವರು ಶಿಕ್ಷೆಗೆ ಅರ್ಹನಾಗುತ್ತಾನೆ ಮತ್ತು ಫೋರ್ಜರಿ ಮಾಡಿದವನು ಸಹ ಶಿಕ್ಷೆಗೆ ಅರ್ಹನಾಗುತ್ತಾನೆ, ಈ ವಿಚಾರದಲ್ಲಿ ಪಿ.ಯು.ಸಿ. ಚೇರ್‌ಮನ್ ಅವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಚೇರ್‌ಮನ್ ಅವರಿಗೆ ಕೇಳಿದ ಪ್ರಶ್ನೆಗಳಿಗೆ ಯಾವ ರೀತಿ ಉತ್ತರ ಕೊಟ್ಟಿದ್ದಾರೆಂಬ ಬಗ್ಗೆ ಕೆಲವನ್ನು ಮಾತ್ರ ಓದಿ ಹೇಳುತ್ತೇನೆ.

> "On the 8th March, the General Manager, Hubli, writes to the Divisional Engineer, Hubli. He has not obtained the necessaiy application forms but still issued the work orders. By then the work had been completed. Your order is on the 9th March. There was not a formal application at all. Was it proper for the Corporation to hire the services of the buldozer without there being application forms ?

CHAIRMAN, (A.I.C.).—Application should have been obtaianed. Normally the formalities should precede.

SRI M. SATYANARAYANA RAO.—How do you justify. What were the reasons for overlooking the formalities ?

SRI LAKSHMANA RAU.—We leave it to you to judge.

SRI M. SATYNARAYANA RAO.—In another case, for a decision there has been 3 months' delay.

CHAIRMAN, (A.I.C.).—It came to me on the 8th March and I passed orders.

SRI M. SATYANARAYANA RAO.—Do you admit that it is a fabricated date ?

SRI B. B. SAYANAYAK.—Now you please see and tell us what your impression is ?

CHAIRMAN, (A.I.C.).—I see that there is overwriting. I cannot say what the idea behind it is. What the purpose behind it is, God alone knows "

ಎಂದು ಹೇಳಿ ಅದನ್ನು ದೇವರಿಗೇ ಮುಟ್ಟಿಸಿ ಕೈ ಬಿಟ್ಟರು ಅರ್ಜಿ ಮೇಲಿರುವ ತಾರೀಖನ್ನು ತಿದ್ದಿರುವ ಉದ್ದೇಶವಾದರೂ ಏನು ? ಅರ್ಜಿಯೇ ಇಲ್ಲದೆ ಇವರು ಬುಲ್ಡೋಜರನ್ನು ಉಪಯೋಗ ಮಾಡಿದ್ದಾರೆಂದು ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದರಿಂದ, ಅವರು ಗಡಿಬಿಡಿಗೆ ಒಳಗಾಗಿ ತಾರೀಖನ್ನು ತಿದ್ದಿದರು. ತಾರೀಖು ೧೦ನೇ ಡಿಸೆಂಬರ್ ೧೯೭೨ರಲ್ಲಿಯೇ ಅರ್ಜಿ ಕೊಡಲಾಗಿದೆ ಎಂಬ ರೀತಿಯಲ್ಲಿ ತಾರೀಖನ್ನು ತಿದಿದ್ದಾರೆ. ಈ ರೀತಿ ತಾರೀಖನ್ನು ತಿದ್ದಿ ಹಿಂದಿನ ತಾರೀಖನ್ನು ಹಾಕುವ ಪ್ರಮೇಯ ಏನಿತ್ತು ಎಂದು ಕೇಳುತ್ತೇನೆ.

SRI. K. H. PATIL.—May I know the receipt date in the office ?

SRI KAGODU THIMMAPPA,—It was received on 19th March 1973.

SRI M. S. KRISHNAN.—Sri M. Satyanarayana Rao asks the question which is like this :

" M. SATYANARAYANA RAO.—Here is a letter : it appears to have been dated 17th March 1973. The date has been altered as 10th December 1972. I will pass on that letter. please scrutinise that letter very carefully......"

CHAIRMAN (A.I.C.).—This letter was brought to me on that day by somebody. Then I certainly did not see the date. This is a thing which I cannot answer. The General Manager has put it as 13th March 1973. I certainly do not look into those dates when somebody brings these applications. My attention has not gone to the date at all."

This is what the chairman has replied.

SRI H. SIDDAVEERAPPA.—He is the Chairman and he is not expected to know who has put the date and what date it is.

The letter passes so many hands in the office.

SRI M.S.KRISHNAN.—He was not able to explain why the date was changed.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ೧೧ನೇ ಡಿಸೆಂಬರ್ ೧೯೭೨ ಎಂದು ಇದೆ. ಇದನ್ನು ಏಕೆ ಇಲ್ಲಿ ಹೇಳುತ್ತೇನೆ ಎಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನವರು ತಪ್ಪಿಸಿಕೊಳ್ಳುವುದಕ್ಕಾಗಿ ಮತ್ತು ಜನಗಳ ಮುಂದೆ ಅದನ್ನು ತೋರಿಸಿಕೊಳ್ಳುವುದಕ್ಕಾಗಿ ಇದರಲ್ಲಿ ೯ನೇ ತಾರೀಖು ಇಂತಿತ್ತು ಎಂದು ರುಜು ಹಾಕಿರುತ್ತಾರೆ. ಬುಲ್ಡೋಜರು ಗಳನ್ನು ಕೊಡಬೇಕೆಂದು ಯಾವ ವರ್ಕ್ ಆರ್ಡರೂ ಇರಲಿಲ್ಲ ಅಥವಾ ಬೇರೆ ಯಾವ ಕಾಗದಗಳೂ ಇರಲಿಲ್ಲ. ಇದರಲ್ಲಿ ಏನಿದ್ದರೂ ಮಿನಿಸ್ಟರ್‌ರವರ ಓರಲ್ ಇನ್‌ಸ್ಟ್ರಕ್ಷನ್‌ಗಳು ಮಾತ್ರ. ಈ ರೀತಿಯಾಗಿ ಓರಲ್ ಇನ್‌ಸ್ಟ್ರಕ್ಷನ್‌ಗಳನ್ನು ಕೊಟ್ಟಿರುವುದು ಏನು ತೋರಿಸುತ್ತದೆ ಎಂದರೆ ೧೧ನೇ ಡಿಸೆಂಬರ್ ೧೯೭೨ ಎಂದು ಹಾಕಿರುವುದು. It is a forgery committed on the face of the documents.

ಆದುದರಿಂದ ಇದರಲ್ಲಿ ಇಷ್ಟು ಧೀರ್ಘವಾಗಿ ಹೇಳಿರುವಂತಹ ಆಪಾದನೆಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಹಾಗೂ ಈ ಕಾರ್ಪೋರೇಷನ್‌ನಲ್ಲಿ ನಡೆದಿರುವ ಅವ್ಯವಹಾರಗಳನ್ನು ಯಾರೂ ಕ್ಷಮಿಸುವುದಕ್ಕಾಗುವುದಿಲ್ಲ, ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿಕೊಟ್ಟಿದ್ದಾರೆ. ಇದರಲ್ಲಿ ನಡೆದಿರುವ ವ್ಯವಹಾರಗಳು ಎಷ್ಟು ಮಟ್ಟಿಗೆ ಆಗಿದೆ ಎನ್ನುವುದನ್ನು ಸರಿಯಾಗಿ ನೋಡಿದರೆ ಇದರಲ್ಲಿ ಬಹಳವಾಗಿ ಅವ್ಯವಹಾರಗಳು ನಡೆದಿವೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ, ಅದನ್ನು ಮಾನ್ಯ ಮಂತ್ರಿಗಳು ಎದೆ ಮುಟ್ಟಿ ನೋಡಿಕೊಂಡು ಹೇಳಬಹುದು. ಇದರಲ್ಲಿ ಅವ್ಯವಹಾರಗಳು ನಡೆದಿರುವುದು ಎಲ್ಲರಿಗೂ ಚೆನ್ನಾಗಿ ಕಾಣುತ್ತದೆ, ಇದರಲ್ಲಿ ಇವರು ದೊಡ್ಡವರು ಅವರು ಸಣ್ಣವರು ಎನ್ನುವ ಪ್ರಶ್ನೆಯಲ್ಲ. ಎಷ್ಟರಮಟ್ಟಿಗೆ ಅವ್ಯವಹಾರಗಳು ನಡೆದಿವೆ ಎನ್ನುವುದು ಇದರಲ್ಲಿ ಕಣ್ಣಿಗೇ ಚೆನ್ನಾಗಿ ಕಾಣುತ್ತದೆ, ಸಮಿತಿಯವರು ಇದರ ಎಲ್ಲ ಅವ್ಯವಹಾರಗಳನ್ನೂ ಬಹಿರಂಗವಾಗಿ ಎಲ್ಲರಿಗೂ ತಿಳಿಯುವಂತೆ ಪ್ರಸ್ತಾಪ ಮಾಡಿದ್ದಾರೆ, ಯಾವಾಗ ಇಂತಹ ಅವ್ಯವಹಾರಗಳು ಆಗಿವೆ ಎಂದು ತಿಳಿಯಬರುತ್ತದೋ ಆ ಕೂಡಲೇ ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ಮಾನ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗಿತ್ತು, ಆ ರೀತಿ ಮಾಡದೇ ಇರುವುದರಿಂದ ಇಂತಹ ಅವ್ಯವಹಾರಗಳಿಗಾಗಿ ಮಂತ್ರಿಗಳು ತಲೆ ತಗ್ಗಿಸಬೇಕಾಗಿತ್ತು ಮತ್ತು ಅವರು ಈ ವೇಳೆಗೆ ರಾಜೀನಾಮೆ ಕೊಡಬೇಕಾಗಿತ್ತು. ಹಿಂದೆ ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗಿದ್ದ ಶ್ರೀಮಾನ್ ಲಾಲ್ ಬಹದ್ದೂರ್ ಶಾಸ್ತ್ರಿಯವರು ಒಂದು ಸಣ್ಣ ಕಾರಣಕ್ಕಾಗಿ ರಾಜೀನಾಮೆ ಕೊಟ್ಟರು. ಇದಕ್ಕೆ ಕಾರಣ ಅವರ ಇಲಾಖೆಯ ಆಡಳಿತ ಅಸಮರ್ಪಕವಾಗಿತ್ತು ಎಂದು ಅವರು ಒಂದು. ಕಡೆ ರೈಲ್ವೆ ಆಕ್ಸಿಡೆಂಟಾದ ಕೂಡಲೇ ತಕ್ಷಣ ಅವರ ಪದವಿಗೆ ರಾಜೀನಾಮೆ ಕೊಟ್ಟು ಎಲ್ಲರಿಗೂ ಮಾದರಿಯಾದರು. ಅವರು ರಾಜೀನಾಮೆ ಕೊಡಬಾರದಾಗಿತ್ತು. ಆದರೂ ಅವರು ತಮಗೆ ಇದರಲ್ಲಿ ನೈತಿಕ ಹೊಣೆ ಇದೆ ಎಂದು ಅವರು ಕೂಡಲೇ ರಾಜೀನಾಮೆ ಕೊಟ್ಟರು, ಹಾಗೆ ಅವರು ಕೇಂದ್ರದಲ್ಲಿದ್ದ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು, ಅವರೇನು ರೈಲ್ವೆಯಲ್ಲಿ ತಪ್ಪಿರುವುದು ನನ್ನ ತಪ್ಪಿನಿಂದ ಅಲ್ಲ ಎಂದು ಹೇಳಲಿಲ್ಲ ಎಂದು ಹೇಳಲು ಹೋಗಲಿಲ್ಲ, ಹಾಗೆ ಇಲ್ಲೂ ಕೂಡ ಅನೇಕ ರೀತಿಯಾದ ಅವ್ಯವಹಾರಗಳು ಆಗಿರುವುದರಿಂದ ಇದರಲ್ಲಿ ಸರಕಾರದ ಮಂತ್ರಿಗಳ ಹೊಣೆ ಇದೆ, ಇದಕ್ಕಾಗಿ ಅವರು ಅವರ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿತ್ತು. ಈ ವೇಳೆಗೆ ಅವರು ರಾಜೀನಾಮೆ ಕೊಟ್ಟಿದ್ದರೆ ಅವರು ನಿಜವಾಗಿಯೂ ದೊಡ್ಡವ ಮನುಷ್ಯರಾಗಿರುತ್ತಿದ್ದರು, ಮುಂದೆ ಅವರು ಇನ್ನೂ ಉನ್ನತ ಪದವಿಗೆ ಬರಲು ಅರ್ಹರಾಗುತ್ತಿದ್ದರು.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಮಂತ್ರಿಗಳನ್ನು ರಾಜೀನಾಮೆ ಕೊಡಿಸಿ ಅವರನ್ನು ಮುಂದೆ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಮಾಡಬೇಕೆಂದಿದ್ದೀರೇನು ?

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಎಷ್ಟು ಮಟ್ಟಿನ ಅವ್ಯವಹಾರಗಳು ನಡೆದಿವೆ. ಇದನ್ನು ಯಾರೂ ಈಗ ಮುಚ್ಚಲಾಗುವುದಿಲ್ಲ.

ಇನ್ನೊಂದು ಮುಖ್ಯವಾದ ಅವ್ಯವಹಾರ ಎಂದರೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಸಿದ್ದವೀರಪ್ಪನವರ ಊರಿನಲ್ಲಿ ಅಂದರೆ ದಾವಣಗೆರೆಯಲ್ಲಿರುವ ಸಕ್ಕರೆ ಕಂಪನಿಗೆ ಷೇರು ಬಂಡವಾಳವನ್ನು ಕೊಟ್ಟಿರುವುದರ ಬಗ್ಗೆ ಇದೆ. ಇದನ್ನು ಕೊಡುವಾಗ ಈ ಕಂಪೆನಿಗೆ ಹಣವಿರಲಿಲ್ಲ, ಇದನ್ನು ಸರಕಾರವೇ ನೇರವಾಗಿ ಕೊಡಬಹುದಾಗಿತ್ತು. ಅದನ್ನು ಮಾಡದೇ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೆಷನ್‌ನವರ ಮೂಲಕ ಇವರಿಗೆ ಷೇರು ಬಂಡವಾಳಕ್ಕಾಗಿ ಸುಮಾರು ೨೫ ಲಕ್ಷ ರೂಪಾಯಿ ಕೊಡಿಸಿಕೊಟ್ಟಿದ್ದಾರೆ. ಸರಕಾರದವರೇ ನೇರವಾಗಿ ಯಾವ ಯಾವ ಇಂಡಸ್ಟ್ರೀಗಳಿಗೆ ಹಣ ಬೇಕು ಅದನ್ನು ನೋಡಿಕೊಂಡು ಅವರೇ ಆಗಾಗ್ಗೆ ಸಹಾಯ ಮಾಡುತ್ತಾರೆ, ಅದರಂತೆ ಸರಕಾರವೇ ಇಲ್ಲೂ ಹಣ ಸಹಾಯ ಕೊಡಬಹುದಾಗಿತ್ತು ಆದರೆ ಹಾಗೆ ಮಾಡದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮೂಲಕ ಷೇರು ಬಂಡವಾಳಕ್ಕಾಗಿ ಕೊಟ್ಟಿದ್ದಾರೆ, ಇದರಲ್ಲಿ ಒಬ್ಬ ಡೈರೆಕ್ಟರು ಸಕ್ಕರೆ ಕಂಪನಿಯಲ್ಲೂ ಡೈರೆಕ್ಟರಾಗಿದ್ದಾರೆ, ಅದರಂತೆ ಅವರೇ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನಲ್ಲೂ ಡೈರೆಕ್ಟರಾಗಿದ್ದಾರೆ, ಇದರಲ್ಲಿ ಆಸಕ್ತಿ ಇರುವ ಒಬ್ಬರೇ

ಡೈರೆಕ್ಟರು ಎರಡು ಕಡೆಯಲ್ಲಿದ್ದುದರಿಂದ ಇವರು ನ್ಯಾಯವಾಗಿ ನಿಯಮದಂತೆ ಎಂದರೆ ಕಂಪನಿ ಕಾನೂನು ೩೦೦ರ ಪ್ರಕಾರ ಸಕ್ಕರೆ ಕಂಪನಿಯ ಡೈರೆಕ್ಟರುಗಳ ಮೀಟಿಂಗಿನಲ್ಲಿ ಇವರು ಭಾಗ ವಹಿಸಲು ಅವಕಾಶವಿಲ್ಲ. ಸರಕಾರದ ಸಮಿತಿಯವರು ಇಲ್ಲಿಗೆ ಹೋದ ಕಾಲದಲ್ಲಿ ಇದನ್ನು ಎತ್ತಿ ತೋರಿಸಿದ್ದಾರೆ, ಹಾಗಿದ್ದರೂ ಇವರೇ ಡೈರೆಕ್ಟರುಗಳ ಮೀಟಿಂಗಿನಲ್ಲಿ ಭಾಗ ವಹಿಸಿ ಸಕ್ಕರೆ ಕಂಪನಿಗೆ ಸಹಾಯ ಕೊಡಿಸಿದಾರೆ.

ಶ್ರೀ ಕೆ. ಹೆಚ್. ಪಾಟೀಲ್. - ಐದನೇ ಒಂದು ಭಾಗದಷ್ಟು ಷೇರು ಬಂಡವಾಳ ಸರಕಾರದ ಮೂಲಕ ಇದ್ದರೆ ಅವರೂ ಡೈರೆಕ್ಟರಾಗಿ ಎರಡು ಕಡೆಗಳಲ್ಲೂ ಇರಬಹುದು. ಇದೇ ಕಾನೂನಿನಲ್ಲಿದೆ, ತಾವು ಅದನ್ನು ಓದಿ ನೋಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿರುವ ಕಾನೂನಿನಲ್ಲಿ ಡೈರಕ್ಟಾಗಿ ಹಾಗೂ ಇಂಡೈರಕ್ಟಾಗಿ ಎಂದು ಇದ್ದರೆ ಎಂದು ಹೇಳಲಾಗಿದೆ. ಹೀಗಿರುವಾಗ ಇವರೇ ೨೫ ಲಕ್ಷದಷ್ಟು ಹಣವನ್ನು ಷೇರು ಬಂಡವಾಳಕ್ಕಾಗಿ ಕೊಡಿಸುವುದು ಸರಿಯೇ ? ಎಂದು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ನಾನು ಕಾನೂನಿನಲ್ಲಿರುವ ಕೆಲವು ವಿಚಾರಗಳನ್ನು ಇಲ್ಲಿ ಸಭೆಯ ಅವಗಾಹನೆಗಾಗಿ ಓದುತ್ತೇನೆ.

Rule 300 of the Companies Act, says :—

> "No Director of a Company shall as a Director take any part in discussion of or vote on any contractors or arrangement entered in to or to be entered by or on behalf of the Government if he is in any way, whether directly or indirectly, concerned or interested in the contract or arrangement nor shall his person count for purposes of forming a quorum..."

ಆದುದರಿಂದ

ಇದರಲ್ಲಿ ಒಬ್ಬ ಡೈರೆಕ್ಟರು ಅಲ್ಲಿದ್ದರೆ ಈ ಸಕ್ಕರೆ ಕಂಪನಿಯ ಮೀಟಿಂಗಿನಲ್ಲೂ ಇರಲು ಅವಕಾಶವಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದರಲ್ಲಿರುವ ಪ್ರೊಸೀಡಿಂಗ್ಸ್‌ನಲ್ಲಿ ತಾವು ನೋಡಬಹುದು. ಅದು ಹೀಗಿದೆ.

> "CHAIRMAN.—At the time you took a decision in the Board to invest Rs. 25 Lakhs in the Davanagere Sugar Mills, were you aware that Mr. H.T. Reddy was one of the Directors and he himself initiated the debate? But according to the Company Law, an interested director should not take part in any discussion relating to any contract nor can he vote and it is further provided that if this provision is contravened, the offence is punishable with fine which may extend to Rs. 5,000. Sri H.T. Reddy was a director of the Davanagere Sugar Mills and fully knowing this, how did you pass this resolution ?
>
> WITNESS.—Whether he was a director at that time, I do not know exactly. At that time nobody brought it to our notice that he was a director. We did not actually apply our mind. If we were aware, I would not have permitted it.
>
> CHAIRMAN.—Before you entered in to this contract and took a decision, was it not your duty to examine all these things as Chairman an managing Director ?

Witness.—As I said, we did not apply our mind to this.

SRI M. SATYANARAYANA RAO.—So, the Registrar of Companies may proceed against the Agro-Industries Corporation to find out whether the resolution cannot be held to be NULL and VOID and also proceed against certain directors. I would like to know whether you examined the soundness of the Company and who the directors of the Company and who the directors of the company were, before taking the decision to invest so much money ?

WITNESS.—This particular aspect somehow we missed. I admit it is a lapse on our part. I do not want to defend anything that we have done."

ಇಲ್ಲಿ ನಡೆದಿರತಕ್ಕ ವ್ಯವಹಾರಗಳನ್ನು ನಾವು ನೋಡಿದರೆ ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿರುವುದು ಪ್ರಾಮುಖ್ಯವಾಗಿ ಕಾಣುತ್ತದೆ, ಇಂತಹ ಅವ್ಯವಹಾರಗಳನ್ನು ನೋಡಿದ ಕೂಡಲೇ ನಮ್ಮ ಕೃಷಿ ಮಂತ್ರಿಗಳು ರಾಜೀನಾಮ ಕೊಡಬೇಕಾಗಿತ್ತು, ಇದರಲ್ಲಿ ಏನು ಅಪರಾಧ ನಡೆದಿದೆ ಎಂದರೆ ಎಷ್ಟು ಮಟ್ಟಿನ ಸ್ವಾರ್ಥತೆ ಹಗೂ ಆಸಕ್ತಿ ಇದೆ ಎನ್ನುವುದು ಇಲ್ಲಿ ಚನ್ನಾಗಿ ಗೊತಾಗುತ್ತದೆ, ಇದರಲ್ಲಿ ಅಧಿಕಾರಿಗಳ ಹಸ್ತಕ್ಷೇಪ ಪೂರ್ಣವಾಗಿದೆ ಎನ್ನುವುದು ಈ ಸಮಿತಿಯವರ ವರದಿಯಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಇನ್‌ವೈಟೀ ಎಂದು ಏಕೆ ಕರೆಯಬೇಕಾಗಿತ್ತು ಎನ್ನುವ ಮಾತನ್ನು ಹೇಳಿದ್ದಾರೆ, ಇನ್‌ವೈಟೀ ಎಂದು ಬೇಕಾದರೂ ಹೇಳಬಹುದು ಇಲ್ಲವೇ ವಿಟ್‌ನೆಸ್ ಎಂದು ಬೇಕಾದರೂ ಹೇಳಬಹುದು, ಸಾಕ್ಷಿ ಎಂದು ಹೇಳುವಾಗ ಅವರು ಇನ್‌ವೈಟೀ ಎಂದು ಬಂದಿರಬಹುದು. ಅದರಲ್ಲೇನೂ ವ್ಯತ್ಯಾಸವಿಲ್ಲ.

He might not have been an invitee to depose evidence. ಇಂತಹ ಪದಗಳನ್ನುಪಯೋಗಿಸುವುದರಿಂದೇನೂ ವ್ಯತ್ಯಾಸ ಮಾಡಬೇಕಾಗಿಲ್ಲ.

3 30 P. M.

ಈ ವರದಿಯ ಸತ್ಯಾಸತ್ಯತೆಯನ್ನು ವಿಚಾರ ಮಾಡಿದರೆ, ಈ ಸಮಿತಿ ಕೊಟ್ಟಿರತಕ್ಕ ವರದಿಯಲ್ಲಿ ಕಂಡುಬರತಕ್ಕ ವಿಷಯಗಳನ್ನು ನೋಡಿದರೆ ಇವೊತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ನಡೆಯಂತಕ್ಕ ವ್ಯವಹಾರಗಳು ಎಷ್ಟರಮಟ್ಟಿಗೆ ಸ್ವಚ್ಛವಾಗಿವೆ, ಎಷ್ಟರಮಟ್ಟಿಗೆ ಕಾನೂನು ಬದ್ಧವಾಗಿ ನಡೆಯುತ್ತಿವೆ ಎನ್ನುವುದರ ಒಂದು ಉದಾಹರಣೆ ಈ ವರದಿಯಿಂದ ನಮಗೆ ಸಿಕ್ಕಿದೆ. ಎಲ್ಲ ಸಂಸ್ಥೆಗಳಲ್ಲೂ ಇದೇ ತರಹ ಅಕ್ರಮಗಳು, ಅವ್ಯವಹಾರಗಳು ನಡೆಯುತ್ತಿರಬಹುದು ಆದುದರಿಂದ ಇಂಥ ಸಮಿತಿ ವರದಿಯನ್ನು ಕೊಟ್ಟ ಮೇಲೆ ಸಮಿತಿಯವರು ಪೂರ್ವ ಗ್ರಹ ಪೀಡಿತರಾಗಿದ್ದರೂ ಹಾಗೆ ಹೀಗೆ ಎಂದು ಹೇಳುವುದಕ್ಕೆ ಬದಲು ಪ್ರಾಮಾಣಿಕವಾಗಿ, ಇಂಥ ತೀರ್ಮಾನ ಶಾಸನ ಸಭೆಗಳ ಒಂದು ಉಪ ಸಮಿತಿಯಿಂದ ಬಂದ ಮೇಲೆ, ಅದಕ್ಕೆ ತಲೆಬಾಗಿ, ಅಧಿಕಾರ ತ್ಯಾಗ ಮಾಡತಕ್ಕ ಬುದ್ಧಿ ಮಾನ್ಯ ಮಂತ್ರಿಗಳಿಗೆ ಬಂದರೆ ರಾಜ್ಯದಲ್ಲಿ ಅದಕ್ಕಿಂತ ದೊಡ್ಡತನ ಅದಕ್ಕಿಂತ ದೊಡ್ಡ ಕೆಲಸವನ್ನು ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರ ಸಿಕ್ಕಬಹುದು ಹೋಗಬಹುದು. ಆದರೆ ಅಧಿಕಾರದಲ್ಲಿದ್ದಾಗ ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿದ್ದೆ, ಶಾಸನ ಸಭೆಗೆ ಅಂಟಿಗೊಂಡಿದ್ದೆ ಎನ್ನುವುದು ಮುಖ್ಯ. ನನಗೆ ವೋಟು ಜಾಸ್ತಿ ಇದೆ, ಶಾಸನ ಸಭಾ ಪಕ್ಷದಲ್ಲಿ ಬೆಂಬಲವಿದೆ ಎನ್ನುವುದರ ಮೇಲೆ ಹೋಗಬಾರದು. ಮಾನ್ಯ ಮಂತ್ರಿಗಳಿಗೆ ನೂರಾರು ಜನರ ಬೆಂಬಲವಿರಬಹುದು. ಶಾಸನ ಸಭೆಯ ಅಂಗವಾಗಿ ಕೆಲಸ ಮಾಡಿದ ಸಮಿತಿ ಕೊಟ ರತಕ್ಕ ಅಭಿಪ್ರಾಯಗಳನ್ನು ಮಾನ್ಯ ಮಾಡಿದರೆ ಇತಿಹಾಸದಲ್ಲಿ ಒಬ್ಬ ದೊಡ್ಡ ಮನುಷ್ಯನಾಗಿ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಉತ್ತಮ ಸಂಪ್ರದಾಯಗಳನ್ನು ಬೆಳಸಬೇಕು, ಮತ್ತು ಉತ್ತಮ ಸಂಪ್ರದಾಯಗಳನ್ನು ಬೆಳಸಿದರೆ ಮುಂದೆ ಎಲ್ಲರಿಗೂ ಮಾದರಿಯಾಗುತ್ತಾರೆ. ಬಹಳ ಉತ್ತಮವಾದ ಸಂಪ್ರದಾಯಗಳನ್ನು ರಾಜ್ಯದಲ್ಲಿ ಸ್ಥಾಪನೆ ಮಾಡಬೇಕು. ಅದರಲ್ಲಿಯೂ ಮುಖ್ಯವಾಗಿ ಶಾಸನ ಸಭೆಯಲ್ಲಿ ಅದನ್ನು ಸ್ಥಾಪನೆ ಮಾಡುವುದು ಬಹಳ ಪ್ರಾಮುಖ್ಯ

ವಾದಂದು ಸಮಾಜವಾದವನ್ನು ಹೇಳುವಾಗ ಅದೇ ಮಟ್ಟದಲ್ಲಿ ಪ್ರಜಾ ಪ್ರಭುತ್ವದಲ್ಲಿಯೂ ವಿಶ್ವಾಸವನ್ನು ಇಡಬೇಕು. ಎಷ್ಟೇ ಶ್ರದ್ಧೆವಹಿಸಿ ಪ್ರಾಮಾಣಿಕತೆಯಿಂದ ವರ್ತಿಸಿದ್ದರೂ, ಸಮಿತಿಯ ವರದಿಯನ್ನು ಪ್ರಶ್ನೆ ಮಾಡುವುದಕ್ಕೆ ಹೋಗದೆ. ಅದರಲ್ಲಿ ಎತ್ತಿ ತೋರಿಸತಕ್ಕ ಅಂಶಗಳನ್ನು ಸ್ವೀಕಾರ ಮಾಡಿ ಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟು, ಈ ಅಪಾದನೆಯಿಂದ ವಿಮುಕ್ತರಾಗಬೇಕೆಂದು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಕೇಳಿಕೊಂಡು ನಿಮಗೆ ಅಭಿನಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

SRI H. SIDDAVEERAPPA (Minister for Health).— Madam Speaker, since indirectly my name has also been dragged on in the report I would like to speak. Further whatever has been refferred to Mr Patil as Minister for Agriculture refers to the entire Government because it is a joint responsibility.

(Mr. Deputy Speaker in the Chair)

ಸ್ವಾಮಿ, ಉಪಾಧ್ಯಕ್ಷರೇ, ಈ ಚರ್ಚೆಯಲ್ಲಿ ಭಾಗವಹಿಸುವ ಉದ್ದೇಶ ನನಗಾದರೂ ಇರಲಿಲ್ಲ. ಆದರೆ ನನ್ನ ಸ್ನೇಹಿತರಾದ ಮಾನ್ಯ ಸದಸ್ಯರು ಮಾತನಾಡಿದ ಮೇಲೆ ಈ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ ಮಾನ್ಯ ಸದಸ್ಯರು ಬಹಳ ಮೇಲ್ಮಟ್ಟದಲ್ಲಿ ಚರ್ಚೆ ಮಾಡಿದ್ದಾರೆ ಮತ್ತು ಅನೇಕ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ ಅದಕ್ಕೆ ಸರಿಯಾಗಿ, ಸಮಂಜಸವಾಗಿ ಜವಾಬನ್ನು ಕೊಡುವುದಕ್ಕೆ ನನಗೆ ಶಕ್ತಿ ಇದ್ದ ಮಟ್ಟಿಗೆ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮಾನ್ ಕೃಷ್ಣನ್ ರವರಿಗೂ ಗೊತ್ತಿದೆ ಮತ್ತು ಆ ಕಡೆ ಇರುವ, ಹಿಂದೆ ಕೈಗಾರಿಕಾ ಮಂತ್ರಿಗಳಾಗಿದ ಶ್ರೀ ರಾಜಶೇಖರ ಮೂರ್ತಿ ಅವರಿಗೂ ಗೊತ್ತಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಸಮಿತಿಯನ್ನು ಏತಕ್ಕೋಸ್ಕರ ನೇಮಿಸಬೇಕು ಎಂದು ನಾವು ಹೇಳಿದೆವು, ಏತಕ್ಕೋಸ್ಕರ ನೇಮಿಸಲಾಯಿತು, ಯಾವ ಉದ್ದೇಶದಿಂದ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯನ್ನು ಈ ಶಾಸನ ಸಭೆಯ ಸ್ವಾಚೂಟರಿಬಾಡಿ ಆಗಿ ನೇಮಿಸಬೇಕು ಎನ್ನುವ ಅಭಿಪ್ರಾಯವನ್ನು ನಾವು ಇಟ್ಟು ಕೊಂಡಿದ್ದೆವು ಎನ್ನುವುದು ಸಹ ಹಿಂದಿನ ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಅರ್ಥವಾಗುತ್ತದೆ. ನಮ್ಮ ಉದ್ದೇಶವಾದರೂ ಆಗ ಇದ್ದದ್ದು ಇಷ್ಟೇ, ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೋಟ್ಯಂತರ ರೂಪಾಯಿಗಳ ಬಂಡವಾಳವನ್ನು ಹಾಕಿದ್ದೇವೆ, ಹಾಕಿರತಕ್ಕ ಬಂಡವಾಳದ ಮೇಲೆ ಸರಿಯಾಗಿ ಪ್ರತಿಫಲ ಬರುತ್ತಿಲ್ಲ, ಅವು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೇ ; ಖಾಸಗಿಯವರು ಮಾಡಿದರೆ ಚೆನ್ನಾಗಿ ನಡೆಯುತ್ತಿದ್ದರೆ ಇವು ಏಕೆ ಸರಿಯಾಗಿ ನಡೆಯಬಾರದು ; ಮ್ಯಾನೇಜ್‌ಮೆಂಟ್‌ನಲ್ಲಿ ಏನಾದರೂ ತಪ್ಪಿದೆಯೋ ಅಥವಾ ಲೋಪದೋಷಗಳಿವೆಯೋ ಎನ್ನುವುದನ್ನೆಲ್ಲಾ ಕಂಡು ಹಿಡಿಯಬೇಕು ಮತ್ತು ಅವುಗಳು ಕೆಲಸ ಮಾಡತಕ್ಕ ರೀತಿಯನ್ನು ಎಷ್ಟುಮಟ್ಟಿಗೆ ಸರಿಪಡಿಸಬೇಕು ಎನ್ನತಕ್ಕ ಮೂಲೋದ್ದೇಶವನ್ನು ಇಟ್ಟುಕೊಂಡು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಇರಬೇಕು ಎಂದು ಹೇಳಿದೆವು. ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ಆ ವೇಳೆಗಾಗಲೇ ಲೋಕಸಭೆಯಲ್ಲಿ ಅಸ್ತಿತ್ವದಲ್ಲಿ ಬಂದಿತ್ತು. ಅದೇ ಆಧಾರದ ಮೇಲೆ ಇಲ್ಲಿಯೂ ಮಾಡಬೇಕು ಎನ್ನುವ ದೃಷ್ಟಿಯಿಂದ ಬಹಳ ಒತ್ತಾಯ ಮಾಡಿದೆವು. ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ, ಆಗಿನ ಸರ್ಕಾರದವರು ನಾವು ಅದೇ ರೀತಿ ಮಾಡೋಣ ಎಂದು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ಇರಬೇಕೆಂದು ಷೆಡ್ಯೂಲ್‌ನಲ್ಲಿ ಹಾಕಿ ಇಂತಿಂಥ ಕೈಗಾರಿಕೆಗಳನ್ನು ಅದರ ವ್ಯಾಪ್ತಿಗೆ ವಹಿಸಬೇಕೆಂದು ಮಾಡಿದರು. ನಾನು ನಮ್ಮ ಸ್ನೇಹಿತದಲ್ಲಿ ಕೇಳಿಕೊಳ್ಳುವುದು ಇಷ್ಟೆ. ಒಂದು ವೇಳೆ ಇರ್ರೆಗ್ಯೂಲ್ಯಾರಿಟೀಸ್ ಆಗಿರಬಹುದು ಎನ್ನುವುದನ್ನು ಒಪ್ಪಿಕೊಳ್ಳೋಣ. ಇರ್ರೆಗ್ಯುಲ್ಯಾರಿಟೀಸ್ ಆಗಿವೆ ಎಂದು ನಾನು ಹೇಳುವುದಿಲ್ಲ. ಕಾನೂನು ಬಲ್ಲ ನಮ್ಮಂಥವರಿಗೆ ಗೊತ್ತಿದೆ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಎರಡು ವಿಚಾರವಿದೆ. ಇಲ್ಲಿ ಗ್ಯಾಲಿಟಿ ಎನ್ನುವುದೊಂದು, ಇರ್ರೆಗ್ಯುಲ್ಯಾರಿಟಿ ಎನ್ನುವುದು ಒಂದು. ಇಲ್ಲಿ ಗ್ಯಾಲಿಟಿ ಇದ್ದರೆ that cannot be cured ಅದು ಒಳ್ಳೆಯದಲ್ಲ, ಇರ್ರೆಗ್ಯುಲ್ಯಾರಿಟಿ ಇದ್ದರೆ that can be easily cured. ಇದಕ್ಕೆ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿನ ಸೆಕ್ಷನ್ ಓದಿ ಹೇಳಬೇಕಾಗಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಅಪರಾಧ ಮಾಡಬಹುದು, ಮಹಾಪರಾಧ ಮಾಡಬಾರದು ಎಂದು ಬೋಧನೆ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.— ನಾನು ಹಾಗೆ ಹೇಳುವುದಿಲ್ಲ. ಅಪರಾಧ ಮಾಡಿದ್ದರೆ ಅಪರಾಧವೇ. ಆದರೆ ನಾನು ಹೇಳುವುದಾದರೂ ಇಷ್ಟೆ. ಅನೇಕ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅದರ ಬಗ್ಗೆ ನಾವು ನೋಡಬೇಕಾದ್ದು ಇಷ್ಟೆ. ಇವು ವ್ಯಾವಹಾರಿಕವೇ ಅಥವಾ ಅವ್ಯವಹಾರಿಕವೇ? ಈಗ ಮಾಡಿರತಕ್ಕ ವ್ಯವ

(ಶ್ರೀ ಎಚ್. ಸಿದ್ದವೀರಪ್ಪ)

ಹಾರ ಯಾವ ದೃಷ್ಟಿಯಿಂದಲಾದರೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅನ್ನು ಯಾವುದಾದರೂ ಲಂಕ್ಸಾನಿಗೆ ಗುರಿಪಡಿಸಿದೆಯೋ ಅಥವಾ ಯಾವ ರೀತಿಯಾದರೂ ಈಗ ಮಾಡಿರತಕ್ಕ ವ್ಯವಹಾರದಿಂದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಹಣಕಾಸನ್ನು ಕಳೆದುಕೊಂಡಿದೆಯೋ ಅಥವಾ ಏನಾದರೂ ಈ ವ್ಯವಹಾರದಲ್ಲಿ ಅನ್ಯಾಯ ಮಾಡಿಕೊಂಡಿದೆಯೋ ಎನ್ನತಕ್ಕದ್ದನ್ನು ನಾವು ವಿವರವಾಗಿ ನೋಡಬೇಕು.

ಸಮಿತಿಯವರು ಕೊಟ್ಟಿರುವ ವರದಿಯ ಒಂದನೇ ಪ್ಯಾರಾದಲ್ಲಿ ಡೈವರ್ಷನ್ ಆಫ್ ಫಂಡ್ ವಿಚಾರ ವಾಗಿ ಹೇಳಿದ್ದಾರೆ. ಅದರಲ್ಲಿ ಮೂರು ಮುಖ್ಯವಾದ ವಿಚಾರಗಳನ್ನು ಹೇಳಿದ್ದಾರೆ. Investment in the share capital of Mangalore Chemicals and +Fertilizers Limited. Rs. 100,00,000 ಈ ಹಣವನ್ನು ಬಹುಶಃ ಹಿಂದೆ ಇದ್ದ ಸರ್ಕಾರದ ಕಾಲದಲ್ಲಿ ಹಾಕಿದ್ದು ಎಂದು ಕಾಣುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಕೊಟ್ಟರೋ ಅಥವಾ ಶ್ರೀಮಾನ್ ವಿರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಕೊಟ್ಟರೋ ನನಗೆ ಗೊತ್ತಿಲ್ಲ. ನ್ಯಾಯವಾಗಿ ನೋಡಿದರೆ ಈ ದುಡ್ಡು ಏನಾಯಿತು ಎನ್ನುವುದು ಗೊತ್ತಿಲ್ಲ. ಬಹಳ ದೊಡ್ಡ ಹಣ, ಒಂದು ಕೋಟಿ ರುಪಾಯಿ, ಸಾರ್ವಜನಿಕ ಹಣ. ಇರತಕ್ಕ ಎರಡು ಕೋಟಿ ರೂಪಾಯಿ ಬಂಡವಾಳದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಎಂದರೆ ಅರ್ಧ ಭಾಗವನ್ನು ಅದರಲ್ಲಿ ತೊಡಗಿಸಿದ್ದಾರೆ. ಈ ಒಂದು ಕೋಟಿ ರೂಪಾಯಿ ಏನಾಯಿತು ಎನ್ನುವುದನ್ನು ಮುಖ್ಯವಾಗಿ ವಿಚಾರ ಮಾಡಬೇಕಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಮುಂದಿನ ಪ್ಯಾರಾ ಓದಿ ಬಿಡಿ ಅದು ಈ ರೀತಿ ಇದೆ :—'The investment in the share capital of the Mangalore Chemicals and Fertilizer was not exmined during this enquiry as it enquired examination on a wider scale and hence deferred.'

ಶ್ರೀ ಎಚ್. ಸಿದ್ದವೀರಪ್ಪ.— ಅದಕ್ಕೆ ಹೇಳತಕ್ಕಂಥದ್ದು ವೈಡರ್ ಸ್ಕೇಲ್‌ನಲ್ಲಿ ಅಂಥದ್ದನ್ನು ಮೊದಲು ತೆಗೆದುಕೊಳ್ಳಬೇಕಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.— ಇಲ್ಲಿ ರೆಫೆರೆನ್ಸ್ ಆಗಿದ್ದು ಸ್ಪೀಕರ್ ಮೂಲಕ, ಹಾಲುಕೋಟೆ ಕೋಆಪರೇಟಿವ್ ಸೊಸೈಟಿ ವ್ಯವಹಾರದ ಬಗ್ಗೆ ಹೇಳುವುದು ಬಿಟ್ಟು ಇನ್ನೊಂದು ವ್ಯವಹಾರಕ್ಕೆ ಹೇಗೆ ಹೋಗುವುದಕ್ಕೆ ಆಗುತ್ತದೆ. ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಹೇಳುವುದಕ್ಕೆ ಹೋದರೆ ಇಲ್ಲಿ ಬಂದಂಥ ವ್ಯವಹಾರ ಬೇರೆ, ಟ್ರೇಸಸ್ಸ್ ಮಾಡಿದರು. ನಾನು ನಿಮಗೆ ಹೇಳುವುದಾದರೂ ಇಷ್ಟೆ. ಹಣ ಮೊದಲು ತೊಡಿಸಿದ್ದಾರೆ. ಟೆಕ್ಸ್‌ಟೈಲ್ ಮಿಲ್ಸ್ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಹೌದೋ ಅಲ್ಲವೋ ಎನ್ನುವುದರಲ್ಲಿ ಎರಡು ಅಭಿಪ್ರಾಯ. ಆಗ್ರೋ ಬೇಸ್ಡ್ ಇಂಡಸ್ಟ್ರೀ ಆಗುತ್ತದೆ. ಕೇಂದ್ರಸರ್ಕಾರದ ನೀತಿಯೂ ಕೂಡ ಇದೆ. ಕೋಆಪರೇಟಿವ್ ಬೇಸಿಸ್ ಮೇಲೆ ΓΙΡ ಟೆಕ್ಸ್‌ಟೈಲ್ ಮಿಲ್‌ಗಳನ್ನು ಮೈಸೂರು ರಾಜ್ಯದಲ್ಲಿ ತೆಗೆದರೂ ಅವಶ್ಯಕತೆ ಇದೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಿ ಹೇಳಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಪತ್ರಿಕೆಗಳಲ್ಲಿ ಬಂದಿದೆ ಅದನ್ನು ನೋಡಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್.— ಟೆಕ್ಸ್‌ಟೈಲ್ ಎಲ್ಲಾ ಆಗ್ರೋ ಬೇಸ್ಡ್ ಇಂಡಸ್ಟ್ರೀ ಎಂದು ಹೇಳಿದ್ದಾರೆಯೇ ?

ಶ್ರೀ ಎಚ್. ಎಸ್. ಸಿದ್ದವೀರಪ್ಪ.—ಎನ್. ಸಿ. ಡಿ. ಸಿ. ಆಕ್ಟಿನಲ್ಲಿ ಹೇಳಿದೆ. ೫ ನೇ ಐಟಂನಲ್ಲಿ ಟೆಕ್ಸ್‌ಟೈಲ್ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಎಂದು ಅವರು ತಿಳಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಕಾಟನ್ ಜಿನ್ ಮತ್ತು ಅನ್‌ಜಿನ್ ಇದೆ. ಮುಂದೆ ನೋಟಿಫಿಕೇಷನ್ ಹೊರಡಿಸಿದ್ದಾರೆ ಅದರ ಪ್ರಕಾರ ೫ ನೇ ಕಲಮ್ ಒಳಗೆ ಟೆಕ್ಸ್‌ಟೈಲ್ ಹಾಕಿದ್ದಾರೆ ;

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಸರ್ಕಾರದವರು ಒಪ್ಪಿದ್ದಾರೆಯೋ ಅದನ್ನು ನಡೆಸಿದ್ದಾರೆಯೋ ಎಂದು ಹೇಳಿ.

ಶ್ರೀ ಎಚ್. ಸಿದ್ದವೀರಪ್ಪ.—ಆಗ್ರೋ ಬೇಸ್ಡ್ ಇಂಡಸ್ಟ್ರೀ ಹೌದೇ ಅಲ್ಲವೇ ಎನ್ನುವುದು ವಾದಗ್ರಸ್ತ ನಿಮ್ಮ ತಳಿಯೊಳಗೆ ಇದೆ. ಅದನ್ನು ಯೋಚನೆ ಮಾಡುವುದಕ್ಕಿಂತ ಮುಂಚೆ ನಿಮ್ಮ ಅಭಿಪ್ರಾಯದಲ್ಲಿ ಅದು ಆಗ್ರೋ ಬೇಸ್ಡ್ ಇಂಡಸ್ಟ್ರೀ ಎನ್ನುವುದಕ್ಕೆ ಸರಿಯಾದ ಮಾಹಿತಿ ಇದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಕೆ. ಎಚ್. ಪಾಟೀಲರನ್ನು ಹಿಡಿದುಕೊಂಡು ನೀವು ಈ ರೀತಿ ಮಾಡಿದ್ದೀರಿ, ಹಾಗೇ ಮಾಡಿದ್ದೀರಿ, ಹೀಗೆ ಮಾಡಿದ್ದೀರಿ ರಾಜಿನಾಮೆ ಕೊಡಿ ಎಂದು ಕೇಳಬೇಕಾದರೆ ನಾನಾದರೂ ತಮಗೆ ಒಂದು ಮಾತು ಹೇಳುತ್ತೇನೆ. You are only crossing Ts and dotting the Is. ಸುಮ್ಮನ್ನೇ ಹರಿದು ಬಿಚ್ಚಿ ಬಿಚ್ಚಿ ನೋಡುತ್ತಿದ್ದೀರಿ ಅಷ್ಟೇ ಹೊರತು ಈ ರಾಜ್ಯಕ್ಕೆ ಅನ್ಯಾಯ ಆಗಿದೆಯೋ, ಸರ್ಕಾರಕ್ಕೆ ಅನ್ಯಾಯವಾಗಿದೆಯೋ ಎಂಬುದನ್ನು ನೋಡಬೇಕು. ಯಾರೇ ಆಗಲೀ ಒಂದು ಒಳ್ಳೆಯ ಕೆಲಸ ಆಗಬೇಕೆಂಬ ದೃಷ್ಟಿಯಿಂದ ಕೆಲಸ ಮಾಡಿದರೆ ಅದು ತಪ್ಪು, ಇಲ್ಲದಿದ್ದರೆ, ಯಾತಕ್ಕೆ ಇಷ್ಟು ಡಿಲೇ ಯಾತಕ್ಕೆ ಇದನ್ನು ಮಾಡಿದ್ದೀರಿ ಎಂದು ಕೇಳುತ್ತೀರಿ. ಅಂಡ್ಯೂಹೇಸ್ಟ್ (undue haste) ಆಗಿದೆ ಎಂದು ಹೇಳಬೇಕಾಗಿತ್ತು. ನಿಮ್ಮ ದೃಷ್ಟಿಯಲ್ಲಿ ಅದನ್ನು ಇಂಡೀಸೆಂಟ್ ಹೇಸ್ಟ್ ಎಂದು ಹೇಳಿದ್ದೀರಿ. ಬಹುಶಃ ಅಂಡ್ಯೂ ಹೇಸ್ಟ್ ಎಂದು ಹೇಳಿದ್ದರೆ ಸರಿಯಾಗಿರುತ್ತಿತ್ತು. ಇದು ಹೇಗೆ ಇರಲಿ, ಪಡ ಮಿಂಗಡಣೆ ಮಾಡುವುದಕ್ಕೆ ಹೋಗುವುದಿಲ್ಲ. ಯಾತಕೋಸ್ಕರ ಇಷ್ಟು ಬೇಗ ಮಾಡಿದರು ಎಂದರೆ ಒಂದು ತಾರೀಖಿನಲ್ಲಿ ಅದು ಪ್ರೊಡಕ್ಷನ್‌ಗೆ ಬಂದರೆ ಗೌವರ್ನಮೆಂಟ್ ಆಫ್ ಇಂಡಿಯಾ ಪ್ರಕಾರ ಡೆವಲಪ್‌ಮೆಂಟ್‌ನವರು ೧೫ ಲಕ್ಷ ರೂ. ರಿಬೇಟ್ ಕೊಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದೇ ತರಹ : ಬೇರೆ ಕಡೆ ಕೊಡಬೇಕು ಎಂದು ಇಲ್ಲವೇ ?

ಶ್ರೀ ಎಚ್ ಸಿದ್ದವೀರಪ್ಪ.—ಶಕ್ತಿ ಇದ್ದವರು ಬರಲಿ ಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮಂಗೌಡ.—ಗದಗ್ ಕೋ ಆಪರೇಟೀವ್ ಸೊಸೈಟಿಯವರು ಕೇಳಿದ ಹಾಗೆ ಬಿಜಾಪುರದವರು ಕೇಳಿದರು. ಅವರಿಗೆ ಯಾತಕ್ಕೆ ಕೊಡಲಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಅದರ ಬಗ್ಗೆ ಬೇರೆ ಶಾರ್ಟ್ ನೋಟೀಸ್ ಕ್ವಶ್ಚನ್ ಕೇಳಿ, ಅದನ್ನು ಬೇರೆ ವಿಚಾರ ಮಾಡೋಣ.

ಶ್ರೀ ಕೆ. ಎಚ್. ಪಾಟೀಲ್.—ಬಿಜಾಪುರದವರು, ಗುಲ್ಬರ್ಗದವರು ಯಾವುದೇ ಭಾಗದವರು ಕೇಳಲಿ, ೧೦ ಟೆಕ್ಸ್‌ಟೈಲ್ ಮಿಲ್ಸ್ ಆಗಬೇಕು ಎಂದು ಈಗಾಗಲೇ ಏರ್ಪಾಡುಗಳನ್ನು ಹಾಕಿಕೊಂಡಿದ್ದೇವೆ ಆ ಪ್ರಕಾರ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬೇರೆ ಮಿಲ್‌ನವರು ಮಾಡಿದಂತೆ ಎರಡರಷ್ಟು ಹಣ ಕೂಡಿಸಿ ವರದಿಯನ್ನು ಕಳುಹಿಸಿದರೆ ಅವಶ್ಯವಾಗಿ ಕೊಡುತ್ತೇವೆ. ಶ್ರೀ ಕಬಾಡಿಯವರು ಕೇಳಿದ್ದರು, ಅವರು ಇನ್ನು ಹಣ ಕೂಡಿಸಿಲ್ಲ ಪುನಃ ಕೇಳುತ್ತಾರೆ ಹಣ ಕೂಡಿಸಿ ಕೇಳಿ ಅವಶ್ಯವಾಗಿ ಕೊಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಕೋ-ಆಪರೇಟಿವ್ ಸ್ಪಿನಿಂಗ್ ಮಿಲ್ ಚೇರ್ಮನ್ ಜೊತೆಗೆ ನಾನು ಹೋಗಿ ಹುಲುಕೋಟೆ ಟೆಕ್ಸ್‌ಟೈಲ್ ಮಿಲ್‌ಗೆ ಕೊಟ್ಟಂಥ ಹಣವನ್ನು ನಮಗೂ ಸಹಾಯ ಮಾಡಿ ಎಂದು ಹೇಳಿ, ಸ್ವತಃ ಅವರನ್ನು ಭೇಟಿಯಾಗಿ ಅರ್ಜಿಯನ್ನು ಕೊಟ್ಟಿದ್ದೇವೆ. ಕೊಟ್ಟ ತಕ್ಷಣ ಎನ್‌ಕ್ವೈರಿ ಮಾಡಿಸಿ ಹಣವನ್ನು ಮಂಜೂರು ಮಾಡುತ್ತೇವೆಂದು ಹೇಳಿದರು ಎರಡು ತಿಂಗಳು ಆಯಿತು ಇಲ್ಲಿಯವರೆಗೂ ಕೊಟ್ಟಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಹಣ ಕೂಡಿಸಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ನಾವು ಕೇಳಿದ ಹಣ ಕೊಡುವುದು ಒತ್ತಟ್ಟಿಗೆ ಇರಲಿ. ಶೇರ್ ಹಣ ೮ ಲಕ್ಷದ ೫ ಸಾವಿರ ರೂಪಾಯಿ ಕೂಡಿಸಿದರೆ ೨ ಲಕ್ಷ ೧೦ ಸಾವಿರ ರೂಪಾಯಿ ಸರ್ಕಾರದವರು ಕೊಡಬೇಕಾಗಿತ್ತು, ಆದರೆ ಇದುವರೆಗೂ ಕೊಡಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೂ ಇದಕ್ಕೂ ಏನು ಸಂಬಂಧ ?

SRI M. S. KRISHNAN.—Hon'ble Minister Sri K. H. Patil said that if others have got the capacity to collect as much then we will also help them. ಶೇರು ಬಂಡವಾಳ ಕಲೆಕ್ಟ್ ಮಾಡಿದರೆ ಕೊಡುತ್ತೇವೆ ಎಂದು ತಾವು ಹೇಳಿದಿರಿ. ೨೦ ಲಕ್ಷ ರೂಪಾಯಿ ಕಲೆಕ್ಟ್ ಮಾಡಿದ್ದಾರೆ ೧೫ ಲಕ್ಷ ರೂಪಾಯಿ ಆಗ್ರೋ ಬೇಸ್ಡ್ ಕಾರ್ಪೊರೇಷನ್, ೩೦ ಲಕ್ಷ ರೂಪಾಯಿ ಇನ್ನೊಂದು ಕಡೆ ಬಂತು, ಆ ರೀತಿ ಅವರು ಕೇಳಿದ್ದಾರೆ ಅವರಿಗೆ ಯಾತಕ್ಕೆ ಕೊಡಲಿಲ್ಲ ಎಂದು ಕೇಳುತ್ತೇನೆ.

SRI K. H. PATIL.—I did not say 'Capacity'.

SRI H. SIDDAVEERAPPA.—If the hon'ble Members do not want to hear me, I do not want to say anything.

MR. DEPUTY SPEAKER.—It will be dificult for hon.Minister to Extricate himself from those classifications.

SRI M. S. KRISHNAN.—Hon.Minister is arguing a hopeless case.

SRI H. SIDDAVEERAPPA.—I am arguing a hopeful case. What I want the Hon.Member to understand is the main purpose of the duties of the Public Undertakings Committee. ನೀವು ಇಲ್ಲಿ ನೋಡಬೇಕಾಗುವುದು ಹಣ ಲಾಕ್ಷಾನ ಆಗಿದೆಯೋ, ದುಡ್ಡು ಪೋಲು ಆಗಿದೆಯೋ ದೇಶದ ದುಡ್ಡು ಹೊರಟು ಹೋಗಿದೆಯೋ ಎನ್ನುವುದನ್ನು ಗಮನಿಸಬೇಕಾಗತ್ತು. As I have understood the purpose of the P.U.C. is to see that all public Undertakings are profitably managed or managed in a commercial manner or managed in a way as not to cause general revenues to be lost by mismanagement or otherwise. ಇದನ್ನು ಆ ದೃಷ್ಟಿಯಿಂದ ನೋಡಬೇಕಾದ್ದು ಮುಖ್ಯ. ಅದನ್ನು ಬಿಟ್ಟುಬಿಟ್ಟು ಪ್ರೊಸೀಜರ್ ಇರೆಗ್ಯುಲರ್ ಆಗಿದೆ, ಇದು ಇಲ್ಲೀಗಲ್ ಆಗಿದೆ ಎಂದು ಹೇಳುವುದಕ್ಕೆ ಹೊರಟಿದ್ದೀರಿ. ನನ್ನ ಮನಸ್ಸಿಗೆ ವ್ಯಥೆ ಆಗಿದ್ದರೂ, ಅಲ್ಲಿರತಕ್ಕ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ಲ್ಲಿರತಕ್ಕ ಚೇರ್ಮನ್ ಅವರು ಬಹಳ ದೊಡ್ಡ ಮನುಷ್ಯರು ಅವರು ನನ್ನ ಎದುರಿಗೆ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. He comes from a very noble family. He was a Secretary under me for so many years. He is a Class I Officer. He is worth his weight in gold. ಅವರನ್ನು ಕ್ರಾಸ್ ಎಕ್ಸಾಮಿನ್ ಮಾಡಿ ಗ್ರೂಯಲಿಂಗ್ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಳ್ಳೆಯವರನ್ನು ದುರುಪಯೋಗಪಡಿಸಿಕೊಂಡು ಬಲಿ ಕೊಡುತ್ತಾರೆಂದು ವ್ಯಥೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನು ಕೇಳದೇ ಯಾರನ್ನು ಕೇಳಬೇಕು ಎಂದು ಹೇಳುತ್ತೇನೆ.

SRI H. SIDDAVEERAPPA.—You could have called the Minister.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳನ್ನು ಕರೆಯುವ ಹಾಗಿಲ್ಲ ಎಂದು ರೂಲ್ ಮಾಡಿದ್ದಾರೆ. ಚೇರ್ಮನ್ ಕರೆದರೆ ತಪ್ಪು ಏನಿಲ್ಲ. He should not put the Chairman of the Corporation against us. We have also got greatest respect for him. Unfortunately he became the Victim for the machinations of the minister.

SRI H. SIDDAVEERAPPA.—You could have called the Secretary. He is responsible for the Management. Or; if you really wanted you could have called the minister.

SRI M. S. KRISHNAN.—As for as rules are concerned calling the minister is out of question.

SRI H. SIDDAVEERAPPA.—I don't think so. If the committee had asked that could have been a different matter. ಆ ವರದಿ ಪ್ರಕಾರ ಇರೆಗ್ಯುಲಾರಿಟೀಸ್ ಮಾಡಿದ್ದಾರೆ ಎಂದು ಹೈಲೈಟ್ ಮಾಡುವುದಕ್ಕೆ ಹೋಗಿ ಅದು ಮಾಡಿಲ್ಲ, ಇದು ಮಾಡಿಲ್ಲ ಎನ್ನತಕ್ಕದ್ದು, ಗದಗ್ ಕಾಟನ್ ಕೊ-ಆಪರೇಟಿವ್ ಸೊಸೈಟಿಗೆ ಇವರು ಹಣ ಕೊಟ್ಟಿರು ಎಂದು ಆಪಾದನೆ ಮಾಡಿದ್ದಾರೆ. ಕೆ. ಎಚ್. ಪಾಟೀಲರು ಸ್ವಂತ ಮನೆ ಮಾಡಿಕೊಂಡಿದ್ದಾರೆಯೋ ? ಅದರಲ್ಲಿ

ಎಷ್ಟು ಜನ ಷೇರ್‌ಹೋಲ್ಡರ್ಸ್ ಇದ್ದಾರೆ ? ಪಬ್ಲಿಕ್ ಷೇರ್ ಎಷ್ಟು ಇದೆ ಎನ್ನುವುದನ್ನು ತಾವು ನೋಡ ಬೇಕು. ಬಹುಶಃ ತಾವು ಮಿಲ್ಲಿಗೆ ಹೋಗಿ ನೋಡಿದ್ದೀರಿ ಎಂದು ಕಾಣುತ್ತದೆ. ಇವತ್ತಲ್ಲ, ಕೆ. ಎಚ್. ಪಾಟೀಲರು ಮಂತ್ರಿ ಆಗುವುದಕ್ಕೆ ಮುಂಚೆ ಅನೇಕ ವರ್ಷಗಳಿಂದ ಸಹಕಾರ ಸಂಘಗಳಿಗೆ ಸಹಾಯ ಮಾಡಿ ದ್ದಾರೆ ; ಅನೇಕ ಸಹಕಾರ ಸಂಘಗಳನ್ನು ಬೆಳೆಸಿದ್ದಾರೆ. ಅವರು ಅಲ್ಲಿ ಮಾಡಿದಂಥ ಸಾಹಸ ಕಾರ್ಯ ನೋಡಿ ದರೆ ಎಲ್ಲರೂ ಮೆಚ್ಚಬೇಕು, ಸಹಕಾರಸಂಘಗಳನ್ನು ಬೆಳೆಸುವುದರಲ್ಲಿ ಅವರು ಬಹಳ ಕಷ್ಟಪಟ್ಟಿದ್ದಾರೆ. ಅವರು ಸ್ವಂತ ಮನೆಗೆ ಕರೆದುಕೊಂಡುಹೋಗಿ ಹಣ ಹಾಕಿದ್ದರೆ, ನೀವು ಹೇಳಿದ್ದು ನಿಜ ಎಂದು ಒಪ್ಪಿ ಕೊಳ್ಳುತ್ತೇನೆ. ಒಂದು ವೇಳೆ ರೂಲ್ ಪ್ರಕಾರ ಮಾಡಿದ್ದರೆ, ಅವರು ಆ ಕಾನ್‌ಸ್ಟಿಟ್ಯೂಯನ್ಸಿ ಮೆಂಬರ್ ಎನ್ನುವುದನ್ನು ತಾವು ಮರೆಯಕೂಡದು. ಪ್ರತಿಯೊಬ್ಬರೂ ಮೆಂಬರ್ ಆಗಿರಲಿ, ಮಂತ್ರಿಯಾಗಿರಲಿ, ಅವರ ಕಾನ್‌ಸ್ಟಿಟ್ಯೂಯನ್ಸಿಗೆ ಕೈಗಾರಿಕೆ ಅಥವಾ ಯಾವುದಾದರೂ ಒಳ್ಳೆಯ ಕಾರ್ಯವಾಗುತ್ತದೆ ಎಂದರೆ ಅದಕ್ಕೆ ಸಹಾಯ ಮಾಡಬೇಕಾದುದು ಆ ಮೆಂಬರನ ಕರ್ತವ್ಯ ಹೌದೋ ಅಲ್ಲವೋ, ನೀವೇ ಯೋಚನೆ ಮಾಡಿ ? ಅವರು ಸಹಾಯಮಾಡಿ ಇಂಟರೆಸ್ಟ್ ತೆಗೆದುಕೊಂಡಿದ್ದರೆ ನೀವು ಹೇಳುವ ಪ್ರಕಾರ ನನ್ನ ಅಭಿ ಪ್ರಾಯದಲ್ಲಿ ಅದು ಏನೂ ತಪ್ಪಿಲ್ಲ let that ndustry come in that area. ಆ ದೃಷ್ಟಿ ಯಿಂದ ನನ್ನ ಕಾನ್‌ಸ್ಟಿಟ್ಯೂಯನ್ಸಿಗೆ ಇಂಡಸ್ಟ್ರಿ ಬರುತ್ತದೆ ಎಂದು ಮಾಡಿದ್ದರೆ ಅದು ತಪ್ಪು ಎಂದು ಭಾವಿಸುವುದಕ್ಕೆ ಹೋದರೆ, ಅದು ಸರಿಯಾಗಿ ಕಾಣುವುದಿಲ್ಲ. ೧೫ ಲಕ್ಷ ರೂಪಾಯಿ ತೊಡಗಿಸಿರತಕ್ಕ ಹಣ ಹಾಗೆ ವಾಪಸ್ ಕೊಡುತ್ತೇವೆಂದು ಹೇಳಿದರು. ಈ ವಿಚಾರದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಕಾಗದ ಬರೆದಿದ್ದಾರೆಂದು ಕೇಳಿದ್ದೇನೆ. ಅವರು ಅಲ್ಲಿಗೆ ಹಣ ಕೊಟ್ಟಿರುವುದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಒಂದು ದೊಡ್ಡ ಸ್ಥಾನ ಬರಬೇಕು ಎಂಬ ಉದ್ದೇಶವೇ ಹೊರತು, ಬಹುಶಃ ೨ ಕೋಟಿ ಚಿಲ್ಲರೆ ರೂಪಾಯಿ, ಕೊಟ್ಟಿದ್ದ ೧೫ ಲಕ್ಷ ರೂಪಾಯಿ ಹಣ ಬೇರೆ ಕಡೆಯಿಂದ ತರುವುದಕ್ಕೆ ಅವರಿಗೆ ಸಾಧ್ಯವಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಕಳ್ಳ ಮಾಲು ಕದ್ದುಬಿಟ್ಟು, ಅದನ್ನು ವಾಪಸ್ ಕೊಟರೆ, ಕದ್ದಿರು ವುದು ತಪ್ಪಿಹೋಯಿತು.

ಶ್ರೀ ಎಚ್. ಸಿದ್ದವೀರಪ್ಪ.—ಮಾಲೇ ಇಲ್ಲ. ಕದ್ದವರು ಯಾರು, ತೆಗೆದುಕೊಂಡವರು ಯಾರು ? ಒಂದೇ ತಿಂಗಳಲ್ಲಿ ೧೫ ಲಕ್ಷ ರೂಪಾಯಿ ಚೆಕ್ ವಾಪಸ್ ಕೊಡಬೇಕಾದರೆ, ಆ ಸೊಸೈಟಿಗೆ ಸಾಲ್ವೆನ್ಸಿ ಇರಲಿಲ್ಲವೇ ? They have raised moneys in the banks.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಸಚಿವರು ಹೇಳಿದರು. ಕೈಗಾರಿಕೆಗಳು ಒಬ್ಬ ಸದಸ್ಯನ ಕ್ಷೇತ್ರಕ್ಕೆ ಹೋಗುತ್ತದೆ ಆದರಿಂದ ಸಂತೋಷ ಪಡಬೇಕೇ ವಿನಾ ಅವಕ್ಕಾಗಿ ಅಸಂತೋಷ ಪಡಬಾರದು, ಹೊಟ್ಟೆಕಿಚ್ಚು ಪಡಬಾರದು ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೊಟ್ಟೆಕಿಚ್ಚು ಎಂದು ಹೇಳಲಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸಂತೋಷ ಪಡೋಣ. ಹುಲುಕೋಟೆಗೆ, ಹರಿಹರಕ್ಕೆ ಆ ಕಡೆ ಸದಸ್ಯರ ಕ್ಷೇತ್ರಕ್ಕೆ ಕಾರ್ಖಾನೆಗಳು ಹೋದುವು, ಅದಕ್ಕೆ ಅಸಂತೋಷ ಇಲ್ಲ ಅದೇ ಚುರುಕು, ಅದೇ ಬಿರುಸು ಈ ಕಡೆ ಸದಸ್ಯರ ಕ್ಷೇತ್ರಗಳಿಗೆ ಮಾಡಿಕೊಟ್ಟರೆ ಸಂತೋಷ ಪಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಮುಂದು ಬನ್ನಿ ಮಾಡುತ್ತೇವೆ, ಅದರಲ್ಲೇನೂ ಅನುಮಾನವಿಲ್ಲ ನಾನು ಹೇಳುವುದು ಇಷ್ಟೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಫೈನಾನ್ಸ್ ಕಾರ್ಪೊರೇಷನ್ ಬಂದಿರುವುದರಿಂದ within a record time ಕರ್ನಾಟಕ ಸ್ಟೇಟ್‌ನಲ್ಲಿ ಎಲ್ಲೂ ಇಷ್ಟು ಕೋಟಿ ರೂಪಾಯಿ ಬಂಡವಾಳ ತೊಡಗಿಸಿರತಕ್ಕ ಟೆಕ್ಸ್‌ಟೈಲ್ ಇಂಡಸ್ಟ್ರಿ ಶೀಘ್ರ ಕಾಲದಲ್ಲಿ ಪ್ರೊಡಕ್ಷನ್‌ಗೆ ಬಂದಿಲ್ಲ. ದಯವಿಟ್ಟು ನೋಡಿಕೊಂಡು ಬನ್ನಿ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಪ್ರೊಡಕ್ಷನ್‌ಗೆ ಹೇಗೆ ಬಂದಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಪಿಂಡಲ್ಸ್ ಫಿಕ್ಸ್ ಆಗುತ್ತಾ ಇದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಬ್ಲೋ ಹೌಸ್ ತಯಾರಾಗುತ್ತಿತ್ತು. ಬಿಲ್ಡಿಂಗ್ ತಯಾರಾಗುತ್ತಾ ಇದೆ. ಸಾಮಾನ್ಯ ವಾಗಿ ಟೆಕ್ಸ್‌ಟೈಲ್ ಇಂಡಸ್ಟ್ರಿ ಒಂದು ಬಿಲ್ಡಿಂಗಿಗೆ ಬರಬೇಕಾದರೆ ಮಿಷನರಿ ಎರೆಕ್ಟ್ ಆಗಬೇಕಾದರೆ ಒಂದು ವರ್ಷ ಬೇಕು ನಾನಾದರೂ ತಿಳಿದಿದ್ದೇನೆ. ಅವರು ಡೆವಲಪ್‌ಮೆಂಟ್ ರಿಬೇಟ್ ತೆಗೆದುಕೊಳ್ಳುವ ಉದ್ದೇಶದಿಂದ ಶುರು ಮಾಡಿದ್ದಾರೆ. ಅದೇ ರೀತಿ ನಾನು ತಮಗೆ ಹೇಳುತ್ತೇನೆ. ಛೇರ್ಮನರೂ ಹೇಳಿ

(ಶ್ರೀ ಎಚ್. ಸಿದ್ದವೀರಪ್ಪ)

ದ್ದಾರೆ. ನಾವ್ಯಾರೂ ದಾಕ್ಷಿಣ್ಯಕ್ಕೆ ಒಳಗಾಗಿಲ್ಲ. ನಾನು ಫೈನಾನ್ಸ್ ಕಾರ್ಪೊರೇಷನ್ ಛೇರ್ಮನ್ ಇಬ್ಬರೂ ಕೂತುಕೊಂಡು ಯೋಚನೆ ಮಾಡಿದೆವು. ನಮ್ಮ ದೃಷ್ಟಿಯಲ್ಲಿ ಈ ಎರಡು ಇಂಡಸ್ಟ್ರಿ ಬರುವುದಕ್ಕೆ ಅನುಕೂಲವಿದೆ. ಏರಿಯಾ ಫಸ್ಟ್‌ಕ್ಲಾಸಾಗಿದೆ. ನಾನೂ ಹೋಗಿ ನೋಡಿಕೊಂಡು ಬಂದಿರುವುದರಿಂದ ನಮ್ಮ ಮನಸ್ಸಿಗೆ ಸಮರ್ಪಕವಾಗಿದೆ, ಎಂದು ಹೆಮ್ಮೆಯಿಂದ ಹೇಳುತ್ತೇನೆ. ಅವರ ದೂರದರ್ಶಿತ್ವದಿಂದ ಈ ಎರಡು ಕೈಗಾರಿಕೆಗಳು ಶೀಘ್ರದಲ್ಲೇ ಪ್ರೊಡಕ್ಷನ್‌ಗೆ ಬರುತ್ತವೆ. ದಾವಣಗೆರೆಯಲ್ಲಿರುವ ಸಕ್ಕರೆ ಕಾರ್ಖಾನೆ ಏಪ್ರಿಲ್‌ನಲ್ಲಿ ಸಕ್ಕರೆ ಕೊಡತಕ್ಕ ಪರಿಸ್ಥಿತಿಗೆ ಬಂದು, ೪೫ ಲಕ್ಷ ರೂಪಾಯಿ ಡೆವಲಪ್‌ಮೆಂಟ್ ರಿಬೇಟ್ ತೆಗೆದುಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಇಲ್ಲ ಎಂದ ಹೇಳುತ್ತೇವೆ, ಕೈಗಾರಿಕೆಗಳು ಬರಬೇಕು, ಡೆವಲಪ್‌ಮೆಂಟ್ ಆಗಬೇಕು, ಎಲ್ಲವೂ ಬರಬೇಕು ಎಂದು ಹೇಳುತ್ತೇವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಹಣ ಹಾಕಿದ್ದು ಸರಿಯೋ ಇಲ್ಲವೇ ಎನ್ನತಕ್ಕದ್ದು ಮೂಲ ತತ್ವ, ಇದನ್ನು ನಾವು ಯೋಚನೆ ಮಾಡಬೇಕು. ನಮ್ಮ ದೃಷ್ಟಿಯಲ್ಲಿ, ಸರ್ಕಾರದ ದೃಷ್ಟಿಯಲ್ಲಿ, ಈ ಹಣ ಹಾಕಿದ್ದು ತಪ್ಪೇನಿಲ್ಲ. ನಿಮಗೆ ಇಷ್ಟು ಗ್ಯಾರಂಟಿ ಕೊಡುತ್ತೇನೆ. ನಿಮಗೆ ಬೇಕು ಎಂದರೆ ಒಂದು ವರ್ಷದಲ್ಲಿ ಅಲ್ಲ, ೬ ತಿಂಗಳಲ್ಲಿ ಬೇಕಾದರೆ ಅವರು ತೊಡಗಿಸಿರತಕ್ಕ ಷೇರ್ ಹಣವನ್ನು ಈ ಎರಡು ಕಂಪೆನಿಗಳು ಕೊಡತಕ್ಕ ಶಕ್ತಿವುಳ್ಳವರಾಗಿರುತ್ತಾರೆ ಎಂದು ಸ್ವತಃ ಗೊತ್ತಿದೆ. ಇವತ್ತಿನ ದಿವಸ ಅವ್ಯವಹಾರವಾಗಿದೆ ಎಂದು ಹೇಳುವುದಿಲ್ಲ. As I have already stated I am making an appeal to you not to make too much. ರೂಲ್ಸ್‌ನಲ್ಲಿ ಹೆಚ್ಚು ಕಡಿಮೆ ಆಗಿದ್ದರೆ ಇದನ್ನು ದೊಡ್ಡದಾಗಿ ಬೆಳೆಸುವುದು ಸರಿಯಲ್ಲ. Irregularities there may be. I have not entered in to details. My request is, it is not an illegality, but utmost it may be an irregularity. ಇದು ಮಂತ್ರಿ ಮನೆಗೆ ಹೋದವರೆ, ಯಾರೂ ಒಂದು ದಿನ ಮಂತ್ರಿ ಆಗಿರುವುದಕ್ಕೆ ಸಾಧ್ಯ. ಶ್ರೀಮಾನ್ ಪುಟ್ಟಸ್ವಾಮಿಯವರು ಹಿಂದೆ ಮಂತ್ರಿಗಳಾಗಿದ್ದರು. ಅವರಿಗೆ ಗೊತ್ತಿದೆ. We have to issue instructions telephonically and I am glad our officers are such that if instruction is issued they will put it in the note "under instructions of the minister by telephone" and we agree to it. What for telephones are there ? They are there for the purpose to see that the work is speeded up. ಪ್ರತಿಯೊಂದು ಶ್ಯಾನುಭೋಗಗಾರಿಕೆ ಮಾಡಿಕೊಡಿ, ಬರೆದುಕೊಡಿ ಎಂದು ಹೇಳಿ ಕಾಲ ಕಳೆದರೆ ಹೇಗೆ ? After all it is a commercial undertaking. Don't they turn out all these transactions by telephones ?

ಶ್ರೀ ಟಿ. ಎಂ. ಮಂಜುನಾಥ್.—ಪ್ರತಿಯೊಂದಕ್ಕೂ ಅದೇರೀತಿ ಟೆಲಿಫೋನ್ ಮುಖಾಂತರ ಮಾಡಿದರೆ ಒಳ್ಳೆಯದು.

4—P. M.

ಶ್ರೀ ಹೆಚ್. ಸಿದ್ದವೀರಪ್ಪ.—ನನ್ನ ದೃಷ್ಟಿಯಲ್ಲಿ ಈ ಷೇಪ್ ತೆಗೆದುಕೊಳ್ಳುತ್ತದೆ ಎನ್ನುವುದು ಗೊತ್ತಿರಲಿಲ್ಲ. ಇದು ನಮ್ಮ ದುರ್ದೈವ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಕೆ. ಹೆಚ್. ಪಾಟೀಲರು ಇದ್ದಿರಬಹುದು. ಅವರಿಗೆ ಬಹಳ ಹುಮ್ಮನಸ್ಸು. ಆದರೆ ಅವರದ್ದು ಒಂದು ಸ್ವಭಾವ. ಅದು ಏನೆಂದರೆ ನಾವು ಮೆತ್ತಗೆ ನಡೆದರೆ ಅವರು ಓಡಾಡುತ್ತಾರೆ, ನಾವು ಓಡಿದರೆ ಅವರು ಕುಪ್ಪಳಿಸುತ್ತಾರೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಹಾಗೆಯೇ ಕುಪ್ಪಳಿಸುತ್ತಾ ಇದ್ದು ಮೂಗು ಒಡೆದು ಕೊಂಡಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಅದಕ್ಕೆ ಕಾರಣ you see that Gentleman is a little Dynamic. ಅವರು ಬುಲ್‌ಡೋಜರ್ ತರಹ ಎಂದು ಹೇಳಿದ್ದೀರ. ಅವರು ಬುಲ್‌ಡೋಜರ್ ತರಹ ಕೆಲಸ ಮಾಡುತ್ತಾರೆ. I can assure the House that he has done actually wonderful work in the Department of Agriculture and Forest and he has shown it by facts and figures. ಇದರಲ್ಲಿ ಅವರು ಏನಾದರೂ ದುಡ್ಡು ತಿಂದಿದ್ದರೆ.

ಹಣ ಹೊಡೆದಿದ್ದರೆ, ಲಂಚ ತಿಂದಿದ್ದರೆ ಮನೆಗೆ ಹೋಗಿ ಎಂದು ಹೇಳಿ. ಅದು ಬಿಟ್ಟು ಅವರು ಬಹಳ ಒಳ್ಳೆಯ ಕೆಲಸ ಮಾಡಿದ್ದರೆ ಮನೆಗೆ ಹೋಗಿ ಎಂದು ಹೇಳಿದರೆ ಇದಕ್ಕೆ ಏನು ಹೇಳಬೇಕು ?

ಶ್ರೀ ಹೆಚ್. ಎಸ್. ಸಿದ್ದಪ್ಪ.—ನೀವು ಈ ಕಡೆ ಇದ್ದಾಗ ನಮಗೆ ಹೇಳಿ ಕೊಟ್ಟದ್ದು ತಪ್ಪಾಯಿತು

SRI H. SIDDAVEERAPPA.—The Public Undertakings Committee is a very important Committee I think it has greater responsibility than the other two committees which are also equally important. ಆದುದರಿಂದ ನಾನು ಇದರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಈ ವ್ಯವಹಾರವನ್ನು ಈ ಹೈಲೈಟ್ ಮಾಡಿದ್ದೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಮಿಟಿ ಮೆಂಬರ್ಸ್‌ಗೆ ಹಿತೋಪದೇಶ ಮಾಡಬೇಕಾದರೆ ನಿಮ್ಮ ಮೆಂಬರ್ಸ್‌ಗೆ ಕರೆಸಿ ಹೇಳಿ. ಆದರೆ ಈ ಸಭೆಗೆ ತಮ್ಮ ನಿಲವು ಏನು ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಮಾಡಿರುವಂಥಾದ್ದರಲ್ಲಿ ಅನ್ಯಾಯ ಏನೂ ಆಗಿಲ್ಲಾ ಎನ್ನುವುದೇ ನನ್ನ ನಿಲುವು ಮತ್ತು ಶ್ರೀಮಾನ್ ಕೆ. ಹೆಚ್. ಪಾಟೀಲರು ಏನು ಮಾಡಿದ್ದಾರೆ ಅದು ಅಕ್ಷಮ್ಯ, ಅಪರಾಧ ಏನೂ ಅಲ್ಲ. ರಾಜೀನಾಮೆ ಕೊಡತಕ್ಕಂಥ ತಕ್ಸೀರು ಏನೂ ಆಗಿಲ್ಲ. ಅವರು ಅಂತಹ ದೊಡ್ಡ ತಪ್ಪುಮಾಡಿ ರಾಜೀನಾಮೆ ಕೊಟ್ಟು ಮನೆಗೆ ಹೋಗುವಷ್ಟು ತಪ್ಪು ಮಾಡಿಲ್ಲ. ರಾಜೀನಾಮೆ ಕೊಡುವಷ್ಟು ಬೇಕಾದಷ್ಟು ತಪ್ಪು ಮಾಡಿದ್ದರೆ ಮಂತ್ರಿಯಾಗಿರತಕ್ಕಂಥಾವರು ಯಾರಾದರೂ ಆಗಲಿ ಅವರು ರಾಜೀನಾಮೆ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ಕಾಲದಲ್ಲಿ ಸಿದ್ಧಲಿಂಗಯ್ಯನವರು ಏತಕ್ಕೆ ರಾಜೀನಾಮೆ ಕೊಟ್ಟರು ?

ಶ್ರೀ ಹೆಚ್. ಸಿದ್ದವೀರಪ್ಪ.—ಅದಕ್ಕೆ ಹಿನ್ನೆಲೆ ಬೇರೆ ಇದೆ. ಅವರ ಅಣ್ಣನವರಿಗೆ ತಾಮ್ರದ ತಂತಿಯ ಒಂದು ವ್ಯವಹಾರದಲ್ಲಿ ಸಂಬಂಧ ಇತ್ತು ಎಂದು ಬಂತು. ಅದಕ್ಕೆ ರಾಜೀನಾಮೆ ಕೊಟ್ಟರು. ಅದು ಸರಿಯಲ್ಲ ಎಂದೂ ಬಂತು.

ಶ್ರೀ ಕೋಣಂದೂರು ಲಿಂಗಪ್ಪ.—ಇದವರಲ್ಲಿ ಅದೇ ತರಹ ಪ್ರೂವ್ ಮಾಡಿದರೆ ?

ಶ್ರೀ ಹೆಚ್. ಸಿದ್ದವೀರಪ್ಪ.—ಶ್ರೀ ಸಿದ್ಧಲಿಂಗಯ್ಯನವರು ರಾಜೀನಾಮೆ ಕೊಡಬೇಕಾದ ಪ್ರಸಂಗ ಇರಲಿಲ್ಲ. ನಾನು ಮಂತ್ರಿಯಾಗಿದ್ದೆ. ಅವರನ್ನು ರಾಜೀನಾಮೆ ಕೊಡಬೇಡಿರಿ ಎಂದು ಹೇಳಿದರೂ ನಾನು ಕೊಡುವುದೇ ಸರಿ ಎಂದು ರಾಜೀನಾಮೆ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಕೋಣಂದೂರು ಲಿಂಗಪ್ಪ.—ಇವರಿಗೂ ಅದೇ ತರಹ ಸ್ವಂತ ಹಿತಾಸಕ್ತಿ ಇದೆ ಎಂದು ಪ್ರೂವ್ ಮಾಡಿದರೆ ಆವಾಗ ಏನು ಹೇಳುತ್ತೀರಿ ?

ಶ್ರೀ ಹೆಚ್. ಸಿದ್ದವೀರಪ್ಪ —ಅವರು ಹೊರಟು ಹೋದರೆ ಕರ್ತವ್ಯ ಲೋಪವಾಗುತ್ತದೆ ಮತ್ತು ದೇಶದಲ್ಲಿ ದಕ್ಷತೆಯಿಂದ ಕೆಲಸ ಮಾಡತಕ್ಕಂಥ ನಿಸ್ಪೃಹ ಮನುಷ್ಯನೊಬ್ಬನನ್ನು ಕಳೆದು ಕೊಂಡಂತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹಿಂದೆ ಮಂತ್ರಿಯಾಗಿದ್ದಿರಿ, ಈಗಲೂ ಮಂತ್ರಿ ಯಾಗಿದ್ದೀರಿ. ಯಾವಾಗಲಾದರೂ ಈ ರೀತಿಯ ವ್ಯವಹಾರ ತಾವು ಮಾಡಿದ್ದೀರಾ ?

SRI K. PUUTASWAMY.—In the case of Sri Siddalingaiah, if I remember correct, the allegation was of personal benefit. Here, there is no allegation of personal benefit.

ಶ್ರೀ ಹೆಚ್. ಸಿದ್ದವೀರಪ್ಪ.—ಶ್ರೀ ಸಿದ್ದಲಿಂಗಯ್ಯನವರು ಅವರ ಅವಿಭಕ್ತ ಕುಟುಂಬದ ಅಣ್ಣನವರಿಗೆ ತಾಮ್ರದ ತಂತಿಯನ್ನು ಕೊಟ್ಟರು, ಅವರಿಗೆ ಸಹಾಯ ಮಾಡಿದರು ಎಂದು ಬಂತು. ಆದರೆ ನ್ಯಾಯವಾಗಿ ಕಾನೂನು ದೃಷ್ಟಿಯಿಂದ ನೋಡಿದರೆ ಅವರಲ್ಲಿ ತಪ್ಪಿಲ್ಲ ಎಂದು ಸಾಬೀತು ಮಾಡತಕ್ಕ ಅಂಶ ವಾತು ಇದ್ದರೂ ಕೂಡ ಏಕಪ್ಪಾ ನನಗೆ ಬೇಡ ಎಂದು ಮನೆಗೆ ಹೊರಟು ಹೋದರು. ಕಾವಿ ಬಟ್ಟೆ ಹಾಕಿಕೊಳ್ಳಬೇಕಾಯಿತು. ತಾವು ನೀವು ಹೇಳಿದ ಹಾಗೆ ರಾಜೀನಾಮೆ ಕೊಟ್ಟರೆ ಈ ಭಾಗದಲ್ಲಿ ಮಂತ್ರಿಯಾಗಿ ಕುಳಿತುಕೊಳ್ಳುವವರು ನಾವೇ, ನಾವೇ ಮಂತ್ರಿಯಾಗಿ ಬರುತ್ತೇವೆ ಎಂದು ತಿಳಿದಿದ್ದರೆ ಅದು ತಪ್ಪು.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮನ್ನು ಕೇಳುವುದು ಹಿಂದೆ ನೀವು ಮಂತ್ರಿಯಾಗಿದ್ದಿರಿ, ಈಗಲೂ ಮಂತ್ರಿಯಾಗಿದ್ದೀರಿ. ಯಾವಾಗಲಾದರೂ ಈ ತರಹ ವ್ಯವಹಾರ ಮಾಡಿದ್ದೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಈ ರೀತಿಯಾಗಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯ ರಿಪೋರ್ಟ್ ಹಿಂದೆಂದೂ ಬಂದಿರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗೋಕುಲಾಷ್ಟಮಿಗೂ ಇನಾಂ ಸಾಬಿಗೂ ಸಂಬಂಧ ಕಲ್ಪಿಸುತ್ತಿದ್ದೀರಿ.

ಶ್ರೀ ಹೆಚ್. ಸಿದ್ದವೀರಪ್ಪ.—ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯಲ್ಲಿ ಈ ವ್ಯವಹಾರ ಏನು ತಪ್ಪಾಗಿದೆ. ಅದರ ಮೂಲ ಹೇಗಿದೆ ಎಂದರೆ ಅತ್ತೆ ಸೊಸೆ ವಿಚಾರದಲ್ಲಿ ಏತಕ್ಕೆ ಕಸ ಹೊಡೆಯಲಿಲ್ಲ, ಅಲ್ಲಿ ಏತಕ್ಕೆ ಮಾಡಲಿಲ್ಲಾ ಎಂದು ಕೇಳಿದಂತೆ ಈ ರೀತಿ ತಪ್ಪು ಕಂಡು ಹಿಡಿಯಲಿಕ್ಕೆ ಹೋದರೆ ಬಹಳ ಕಷ್ಟ ಬರುತ್ತದೆ It becomes impossible to administer.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ಬಗ್ಗೆ ಈ ವರದಿಯಲ್ಲಿ ಪಕ್ಷಪಾತದ ನಿರೂಪಣೆ ಆಗಿದೆ. ಈ ರಾಜ್ಯದಲ್ಲಿ ಮಂತ್ರಿ ಏನಾದರೂ ರಾಜೀನಾಮೆ ಕೊಡಬೇಕಾದರೆ ಮಂತ್ರಿ ಮಂಡಲದಲ್ಲಿ ಯಾವ ಅಪಘಾತ ವಾದರೆ ರಾಜೀನಾಮೆ ಕೊಡಬೇಕು ಎಂದು ಹೇಳಿ.

ಶ್ರೀ ಹೆಚ್. ಸಿದ್ದವೀರಪ್ಪ.—ಮಂತ್ರಿ, ಅಕ್ಷಮ್ಯ ಅಪರಾಧ ಮಾಡಿದರೆ, ಮಾಡಬಾರದ ತಪ್ಪು ಮಾಡಿದರೆ, ಮನೆಗೆ ಹೋಗಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದನ್ನು ಬಿಚ್ಚಿ ಹೇಳಬೇಕು. ಯಾವರೀತಿ ತಪ್ಪು ಮಾಡಿದರೆ ರಾಜೀನಾಮೆ ಕೊಡಬೇಕೆಂದು ಬಿಚ್ಚಿ ಹೇಳಬೇಕು.

ಶ್ರೀ ಹೆಚ್. ಸಿದ್ದವೀರಪ್ಪ.—ಅನಕ್ಕೋಸ್ಕರ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ ಇದನ್ನು ದೊಡ್ಡದಾಗಿ ಬೆಳೆಸುವುದು ಬೇಡ. ಇದನ್ನು ದೊಡ್ಡದಾಗಿ ಬೆಳೆಸುವುದರಿಂದ ಯಾವ ಸಾಧಕವೂ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಪ್ರಶ್ನೆ ಮಾಡುವವರೇ ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಇಲ್ಲ. ನೀವು ಇಲ್ಲದಿದ್ದರೆ ಈ ಸಭೆಗೇ ಶೋಭಾಯಮಾನವಿಲ್ಲಾ. ನೀವು ಇರಲೇ ಬೇಕು ಎನ್ನುವುದು ನಮ್ಮ ಉದ್ದೇಶ. ಇದನ್ನು ಹೆಚ್ಚಾಗಿ ಬೆಳೆಸಿಕೊಳ್ಳದೇ ಇರುವ ಹಾಗೆ ಮೊಟಕು ಮಾಡಿ. ಬೋನಾಫೈಡೀಸ್ ಡೌಟ್ ಮಾಡಬೇಕಾಗಿಲ್ಲ. ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಆಗಲಿ, ಫೈನಾನ್ಸ್ ಕಾರ್ಪೋರೇಷನ್ ಆಗಲಿ ಅಲ್ಲಿ ನುರಿತಂಥ ಇಬ್ಬರು ಅಧಿಕಾರಿಗಳು ಈ ಎರಡು ಇಂಡಸ್ಟ್ರೀಸ್‌ನ್ನೂ ಡೆವಲಪ್ ಮಾಡಬೇಕು ಎಂಬ ಸದುದ್ದೇಶದಿಂದ ಕೆಲಸಮಾಡಿದ್ದಾರೆ ಇವೆರಡೂ ಫ್ಯಾಕ್ಟರಿಗಳೂ ಚೆನ್ನಾಗಿ ಅಸ್ತಿತ್ವಕ್ಕೆ ಬಂದು ಇಷ್ಟರಲ್ಲೇ ಪ್ರೊಡಕ್ಷನ್‌ಗೆ ಬರುತ್ತದೆ. As I have admitted, there may be some irregularities in procedure but not illegalityes. ಆದುದರಿಂದ ಇದನ್ನು ಹೆಚ್ಚು ಬೆಳೆಸುವುದು ಬೇಡ. ಇಲ್ಲೇ ಮೊಟಕು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

SRI M. S. KRISHNAN.—It is not murder but abetment to murder.

ಶ್ರೀ ಕೆ. ಎಫ್. ಪಾಟೀಲ್.—ಮರ್ಡರ್ ನಾವು ಮಾಡಿದ್ದಲ್ಲ, ನೀವು ಮಾಡಿದ್ದು.

ಶ್ರೀ ಬಿ. ಎನ್. ಪಾಟೀಲ್.—ಮರ್ಡರ್ ನಾವು ಮಾಡಿದ್ದಲ್ಲ, ನೀವು ಮಾಡಿದ್ದು.

ಶ್ರೀ ಕೋಣಂದೂರು ಲಿಂಗಪ್ಪ.—ಇಡೀ ರಾಜ್ಯದಲ್ಲಿ ಅರ್ಜಿಇಲ್ಲದೆ ಸಾಲ ಎಲ್ಲಿ ಕೊಡುತ್ತಾರೆ ? ಅರ್ಜಿ ಇಲ್ಲದೆ ಬುಲಡೋಜರ್ ಎಲ್ಲಿ ಕೊಡುತ್ತಾರೆ ? ಯಾವುದಾದರೂ ಇಂತಹ ಒಂದು ಉದಾಹರಣೆ ಯನ್ನು ತೋರಿಸಿ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಸ್ಪಷ್ಟೀಕರಣ ಹೇಳಬೇಕಾ ಗಿದೆ. ಮಾನ್ಯ ಸಿದ್ದವೀರಪ್ಪನವರು ಮಾತನಾಡುವಾಗ ಮಾನ್ಯ ನಿಜಲಿಂಗಪ್ಪ ನವರು ಮತ್ತು ಶ್ರೀ

ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಒಂದು ಕೋಟಿ ರೂಪಾಯಿ ಶೇರು ಬಂಡವಾಳವಾಗಿ ಕೊಟ್ಟರು ಎಂದು, ಅದು ಏನು ಆಯಿತೋ ಏನೋ ಎನ್ನುವ ರೀತಿಯಲ್ಲಿ ಮಾತನಾಡಿದರು. ನಾನು ಹೇಳುವುದು ಇಷ್ಟೆ. ನಿಜಲಿಂಗಪ್ಪನವರ ಮತ್ತು ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ ಒಂದು ಕೋಟಿ ರೂಪಾಯಿ ಕೊಟ್ಟಿಲ್ಲ. ಹಿಂದೆ ಒಂದು ಸಾರಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಒಂದು ಕಂಡೀಷನ್ ಹಾಕಿದರು ಅದು ಏನೆಂದರೆ ಡಿಸ್ಟ್ರಿಬ್ಯೂಷನ್ ರೇಟ್ ಕೊಡಿ. ಅದನ್ನು ಕೊಟ್ಟರೆ ಒಂದುಕೋಟಿ ಬಂಡವಾಳ ಹಾಕಿದರೆ ಅದು 10 ಕೋಟಿ ರೂಪಾಯಿ ಸಂಪಾದನೆ ಮಾಡಬಹುದು ಎಂದು, ತೀರ್ಮಾನ ತೆಗೆದುಕೊಂಡರು ಬಂಡವಾಳಕ್ಕೆ ಕೊಟ್ಟಿರುವ ಶೇರು ಒಂದಕ್ಕೆ 5 ರೂಪಾಯಿ. 5 ರೂಪಾಯಿ ಕೊಟ್ಟಿರತಕ್ಕಂಥಾದುದು. 10 ರೂಪಾಯಿ ಕೊಟ್ಟಿಲ್ಲ. ಅದೇ 5 ರೂಪಾಯಿ ಇವತ್ತು ಮಾರ್ಕೆಟಿನಲ್ಲಿ 6 ರೂಪಾಯಿ ಆಗುತ್ತದೆ. ಅದು ಅತ್ಯುತ್ತಮ ಇನ್‌ವೆಸ್ಟ್‌ಮೆಂಟ್. ಈಗ ಏನು ಶೇರು ಬಂಡವಾಳ ಕೊಟ್ಟಿದ್ದಾರೆ ಅದು ಸೇಫ್ ಆಗಿ ಇದೆ ಎಂದು ಹೇಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ, (ಕೋಟೆ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕ ಪ್ರಶ್ನೆಗಳು ಮೂರು. ಒಂದು ಆಗ್ರೋ ಇಂಡಸ್ಟ್ರೀಸ್‌ನಲ್ಲಿ, ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಗದಗ ಕಾಟನ್ ಕೋ ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ಲಿಗೆ ತಮ್ಮ ಶೇರು ಬಂಡವಾಳ ಹಾಕುವುದು ಸರಿಯೇ, ಒಂದು. ಎರಡನೆಯದು ಇದರಲ್ಲಿ ಅವರು ಅನುಸರಿಸಿರತಕ್ಕಂಥಾ ಮಾರ್ಗ ಕ್ರಮಬದ್ಧವಾಗಿದೆಯೇ ಮೂರನೆಯದು ಎಷ್ಟರಮಟ್ಟಿಗೆ ಮಾನ್ಯ ಕೃಷಿ ಮಂತ್ರಿಗಳು ಮಂತ್ರಿಗಳಾಗಿ ತಮ್ಮ ಭಾಗವನ್ನು ಇದರಲ್ಲಿ ಎಷ್ಟು ವಹಿಸಿದ್ದಾರೆ ಮತ್ತು ಅವರ ಪಾತ್ರ ಎಂಥಾದ್ದು ಎಂದು ನಾವು ಈಗ ಪ್ರಶ್ನೆಮಾಡಬೇಕಾಗಿದೆ. ಮೊದಲನೆಯದಾಗಿ ಶ್ರೀಮಾನ್ ಕೆ. ಎಚ್. ಪಾಟೀಲರು ಮಂತ್ರಿಗಳಾಗುವುದಕ್ಕಿಂತ ಮೊದಲಿನಿಂದ ನನಗೆ ಪರಿಚಿತರಾಗಿರುವರು ಅವರು ದಕ್ಷರು ಮತ್ತು ಹಿಡಿದ ಕೆಲಸವನ್ನು ಸಾಧಿಸುವ ಸಾಮರ್ಥ್ಯವುಳ್ಳವರು. ತಮ್ಮ ಕಾರ್ಯದಕ್ಷತೆಯನ್ನು ಎಂದೂ ಸ್ವಂತಕ್ಕೆ ಉಪಯೋಗಿಸಿಕೊಂಡಿಲ್ಲವೆಂದು ಸ್ಪಷ್ಟವಾಗಿ ಹೇಳಬಲ್ಲೆ. ಅವರು ನಮ್ಮ ಪಕ್ಷದಲ್ಲಿ ಇದ್ದವರು ಅದರಿಂದ ಹೇಳುತ್ತಿದ್ದೇನೆ. ಮತ್ತು ಆಮೇಲೆ ಅವರು ಮಂತ್ರಿ ಪದವಿಗೆ ಬರುವುದಕ್ಕೆ ಮುಂದೆ ನಿಜಲಿಂಗಪ್ಪನವರ ಸರ್ಕಾರದ ಮೇಲೆ ಗಧಾ ಪ್ರಹಾರ ಮಾಡುತ್ತಾ ಮಾನ್ಯ ಶ್ರೀ ನಾಡಗೌಡರ ಮೇಲೆ ಅವರ ಪ್ರಭಾವವನ್ನು ಬೀರಿ ಮತ್ತು ಅವರನ್ನು ಎದುರಿಸಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಗದಗ ಕೋ ಆಪರೇಟೀವ್ ಕಾಟನ್ ಮಿಲ್ಸ್‌ನ್ನು ಬಹಳ ಮುಂದಕ್ಕೆತಂದಿದ್ದಾರೆ. ಆಮೇಲೆ ಕೃಷ್ಣಡೈರಿ ಪ್ರಾಜೆಕ್ಟನ್ನು ಮುಂದೆ ತಂದಿದ್ದಾರೆ. ಆಮೇಲೆ ಈಗ ಪ್ರಶ್ನೆ ಬಂದಿರತಕ್ಕದ್ದು ಇಂಥ ಸಮರ್ಥರು ಇಂಥ ಕಾಟನ್ ಕೋ ಆಪರೇಟೀವ್ ಸೊಸೈಟಿಯ ಮೇಲೆ ತಮ್ಮ ಪಾತ್ರವನ್ನು ಯಾವ ರೀತಿಯಿಂದ ಉಪಯೋಗಿಸಿದ್ದಾರೆ ಎಂದು ನಾವು ಯೋಚನೆ ಮಾಡಬೇಕು ಎನ್ನುವ ಪ್ರಸಂಗ ಬಂದಿದೆ. ನಾನು ಚೀಫ್ ಮಿನಿಸ್ಟರ್ ಆಗಿದ್ದರೆ ಅವರ ಕಾರ್ಯದಕ್ಷತೆಯ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ಒಂದು ಪ್ರಶಸ್ತಿ ಕೊಡಬೇಕೆಂದು ರೆಕಮೆಂಡ್ ಮಾಡುತ್ತಿದ್ದೆನು. ಮತ್ತು ಇವರು ತಮ್ಮ ಕಾರ್ಯ ಸಾಧನೆಗೆ ಸ್ವಂತದ್ದು ಯಾವುದನ್ನು ಬಳಸುವುದಿಲ್ಲ. ಇವರು ಯಾವುದಾದರೂ ಕಾರ್ಯವನ್ನು ಸಾಧಿಸಬೇಕೆಂದು ಮನಸ್ಸುಮಾಡಿದರೆ ಅದು ಕ್ರಮವೇ ಅಥವಾ ಅಕ್ರಮವೇ ಎಂಬ ಬಗ್ಗೆ ಮತ್ತು ಯಾವುದಕ್ಕೆ ಪ್ರಾಧಾನ್ಯತೆ ಕೊಡಬೇಕು, ಕೊಡಬಾರದು ಎಂದು ಯೋಚನೆ ಮಾಡುವುದಿಲ್ಲ. ಹಿಂದೆ ಕೆಲಸವನ್ನು ಪೂರೈಸುವ ತನಕ ಬಿಡುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಶ್ರೀಮಾನ್ ನಿಜಲಿಂಗಪ್ಪನವರನ್ನು ಓಡಿಸಬೇಕೆಂದು ಯೋಚನೆ ಮಾಡಿದರು ಎಂದರೆ ಓಡಿಸಲೇಬೇಕು ಆ ರೀತಿಯ ಸ್ವಭಾವದವರು. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೃಷಿ ಉತ್ಪಾದನೆಗೆ ಕೃಷಿ ಮಾಡತಕ್ಕಂಥವರಿಗೆ ಸಾಕಾದಷ್ಟು ಸಹಾಯ ಮತ್ತು ಸಹಕಾರ ಮಾಡತಕ್ಕಂಥ ಸಂಸ್ಥೆಯಾಗಿ ಸ್ಥಾಪಿಸಬೇಕು ಎನ್ನುವ ಉದ್ದೇಶದಿಂದ ಆ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದಾರೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಹಣ ತೆಗೆದುಕೊಂಡು ಗದಗ್ ಕೋ ಆಪರೇಟೀವ್ ಟೆಕ್ಸ್‌ಟೈಲ್ಸ್ ಮಿಲ್ಲಿಗೆ ಕೊಡಬೇಕಾದ ಪ್ರಸಂಗ ಏನು ಇದೆ ಎಂದು ನಾನು ಕೇಳಬೇಕಾಗಿದೆ. ಇದರಲ್ಲಿ ಇನ್ನು ಒಂದು ಮುಖ್ಯವಾದ ಪ್ರಶ್ನೆ ಏನು ಎಂದರೆ ಇಷ್ಟೊಂದು ತೀವ್ರವಾಗಿ ಹದಿನೈದು ಲಕ್ಷ ರೂಪಾಯಿಗಳನ್ನು ಟೆಕ್ಸ್‌ಟೈಲ್ ಮಿಲ್ಲಿಗೆ ಏತಕ್ಕಾಗಿ ಒದಗಿಸಿಕೊಟ್ಟರು ಎಂದು ಯೋಚನೆ ಮಾಡಬೇಕಾಗುತ್ತದೆ. ಇದೇ ರೀತಿಯಲ್ಲಿ ಬೇರೆ ಎಲ್ಲಾ ಕ್ಷೇತ್ರದಲ್ಲೂ ಇಷ್ಟೇ ತೀವ್ರತೆಯಿಂದ ಕೆಲಸಕಾರ್ಯಗಳು ನಡೆಯುತ್ತಿವೆಯೇ ಎಂದು ಯೋಚನೆ ಮಾಡಬೇಕಾಗಿದೆ ಮತ್ತು ಸರ್ಕಾರದವರನ್ನು ಕೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮೂರು ಕೋಟಿ ಜನತೆ ಇದೆ. ಆ ಜನತೆಗೆಲ್ಲಾ ಈ ರೀತಿಯಾಗಿ ಇಷ್ಟು ತೀವ್ರತೆಯಿಂದ ಸಹಾಯ ಮಾಡುತ್ತಿದ್ದಾರೆಯೇ ಎಂದು ಪ್ರಶ್ನೆ ಹಾಕಬೇಕಾಗುತ್ತದೆ. ದಾವಣಗೆರೆ ಶುಗರ್ ಮಿಲ್ಲಿಗೆ ಇಂಟರೆಸ್ಟ್ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಒಂದು ಮೀಟಿಂಗ್ ಪ್ರೊಸಿಡಿಂಗ್ಸ್ ನೋಡಿದರೆ ಗೊತ್ತಾಗುತ್ತದೆ. ಆದ್ದರಿಂದ ಇದು ಸರಿಯಾಗಿ ಇದೆಯೋ ಎಂದು ನೋಡಬೇಕಾಗುತ್ತದೆ.

(ಶ್ರೀ ಟಿ. ಆರ್. ಶಾಮಣ್ಣ)

ಆಮೇಲೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ತೆಗೆದುಕೊಂಡಿರತಕ್ಕ ತೀರ್ಮಾನದ ಕ್ರಮ ಅಕ್ರಮದ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಒಂದು ಪ್ರಭಾವದಿಂದ ಇಷ್ಟು ಬೇಗ ಒಂದು ಕೆಲಸ ಆಯಿತು, ಎನ್ನುವುದರ ಬಗ್ಗೆ ತಮ್ಮ ತೀರ್ಮಾನದಲ್ಲಿ ಹೇಳುತ್ತಾರೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಪ್ರಭಾವಕ್ಕೆ ಒಳಗಾಗಿದೆ ಎಂದು ರಿಪೋರ್ಟಿನಲ್ಲಿರತಕ್ಕದ್ದು ವಾಸ್ತವಾಂಶ, ಇಲ್ಲ ಎಂದು ಹೇಳುವುದಕ್ಕೆ ಖಂಡಿತ ಸಾಧ್ಯವಿಲ್ಲ.

ಎರಡನೆಯದಾಗಿ, ಇದರಲ್ಲಿ ಕೆ. ಎಚ್. ಪಾಟೀಲರ ಪಾತ್ರದ ಬಗ್ಗೆ ನಾನು ಹೇಳಬೇಕಾದರೆ, ಮೊದಲನೆಯದಾಗಿ, ಇವರು ಹೆಚ್ಚಿನ ರೀತಿಯಲ್ಲಿ ಅಗ್ರೋ ಇಂಡಸ್ಟ್ರೀಸ್ ಮತ್ತು ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್, ಈ ಎರಡರ ಸಹಾಯವನ್ನು ಇಟ್ಟುಕೊಂಡು ಇವರು ತಮ್ಮ ಸ್ಥಾನಬಲದಿಂದ ಈ ಟೆಕ್ಸ್‌ಟೈಲ್ ಮಿಲ್ಲಿಗೆ ಹಣವನ್ನು ಉಪಯೋಗಿಸಿದ್ದಾರೆ ಎನ್ನತಕ್ಕಂಥಾದ್ದು. ಇದರ ಬಗ್ಗೆ ಅವರ ಸಾಮರ್ಥ್ಯಕ್ಕೆ ನಾನು ಮೆಚ್ಚಬೇಕಾಗಿದೆ. ನಾನು ಆ ಜಾಗವನ್ನು ನೋಡಿಕೊಂಡು ಬಂದಿದ್ದೇನೆ. ಈ ಮಿಲ್ಲನ್ನು ಬೇರೆ ಯಾರು ಸೃಷ್ಟಿ ಮಾಡಿದ್ದರೂ ಕೂಡ ಆರು ತಿಂಗಳಲ್ಲಿ ಈ ಸ್ಥಿತಿಗೆ ಇದನ್ನು ತರುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಒಂದು ಕಡೆ ಸಿಮೆಂಟ್ ಅಭಾವ ಇದೆ, ಸ್ಟೀಲ್ ಅಭಾವ ಇದೆ, ಮತ್ತು ಬೇರೆ ಅನೇಕ ತೊಂದರೆಗಳು ಇರುತ್ತವೆ. ಇಂಥಾದ್ದರಲ್ಲಿ, ಆರು ತಿಂಗಳಲ್ಲಿ ಒಂದು ದೊಡ್ಡ ಫ್ಯಾಕ್ಟರಿ ತಯಾರು ಆಗುವುದಕ್ಕೆ ಎಷ್ಟು ಪ್ರಭಾವ ಬೀರಿದ್ದಾರೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ತ್ವರಿತವಾಗಿ ನಡೆದಿರತಕ್ಕ ಕೆಲಸದ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಬಹಳ ದಕ್ಷತೆಯಿಂದ ಇವರು ಕೆಲಸ ಮಾಡಿದ್ದಾರೆ.

ಆಮೇಲೆ, ರಿಪೋರ್ಟಿನಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಇದಕ್ಕೆ ಸಹಾಯ ಮಾಡಿರುವ ವಿಚಾರದ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಆದರೆ ಇದೇ ಆಸಕ್ತಿಯನ್ನು ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ನಡೆಯತಕ್ಕಂಥ ಹುಬ್ಬಳ್ಳಿ ಮಿಲ್‌ನ ಬಗ್ಗೆ, ಹಾಗೂ ಬಾಗಲಕೋಟೆ ಕೋ-ಆಪರೇಟೀವ್ ಮಿಲ್‌ನ ಬಗ್ಗೆ ತೆಗೆದುಕೊಳ್ಳದೆ ಇರುವುದಕ್ಕೆ ಏಕೆ ಇವರಿಗೆ ಆಗಲಿಲ್ಲ ? ಹೊಸ ಮಿಲ್ಲನ್ನು ಸೃಷ್ಟಿ ಮಾಡುವುದಕ್ಕೆ ಹೊರಟವರು, ಹಳೆಯ ಮಿಲ್ಲುಗಳನ್ನು ಉದ್ಧಾರ ಮಾಡುವುದಕ್ಕೆ ಅಷ್ಟೇ ಆಸಕ್ತಿ ಇವರಿಗೆ ಇರಲಿಲ್ಲ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗಿದೆ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಎಲ್ಲಾ ವ್ಯವಸ್ಥೆಗಳಲ್ಲಿಯೂ ಕೂಡ ಇದೇ ರೀತಿಯ ಆಸಕ್ತಿಯನ್ನು ತೋರಿಸಿದ್ದಾರೆಯೋ ಎನ್ನುವುದರ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕಾಗಿದೆ.

ಇನ್ನೂ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅಲ್ಲಿ ಒಂದು ಗೆಸ್ಟ್ ಹೌಸನ್ನು ಕಟ್ಟಿದ್ದಾರೆ. ೮೦ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಇದನ್ನು ಕಟ್ಟಿದ್ದಾರೆ. ಅಲ್ಲಿಗೆ ಗವರ್ನ್‌ಮೆಂಟ್ ಇನ್ಸ್‌ಪೆಕ್ಷನ್ ಬಂಗಲೆ ಒಂದು ಮೈಲಿ ದೂರದಲ್ಲಿದೆ. ಜಮೀನನ್ನು ಏನೋ ಸರ್ಕಾರಕ್ಕೆ ಬರೆದು ಕೊಟ್ಟಿದ್ದಾರೆ. ಆದರೆ ಈ ಫ್ಯಾಕ್ಟರಿ ಹತ್ತಿರದಲ್ಲಿ ಇವರ ಪ್ರಿಮಿಸಿಸ್‌ನಲ್ಲಿ. ಸರ್ಕಾರಿ ಇನ್ಸ್‌ಪೆಕ್ಷನ್ ಬಂಗಲೋ ಒಂದು ಮೈಲಿ ದೂರದಲ್ಲಿದ್ದರೂ ಪಿ ಡಬ್ಲ್ಯೂ.ಡಿ. ಖರ್ಚಿನಲ್ಲಿ ಇದನ್ನು ಕಟ್ಟತಕ್ಕ ಔಚಿತ್ಯ ಏನು ಇತ್ತು? ಇದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಇದರಲ್ಲಿ ಮಂತ್ರಿಗಳ ಹಸ್ತಕ್ಷೇಪ ಇಲ್ಲವೇ ? ಎಂದು ನಾನು ಕೇಳಬೇಕಾಗಿದೆ.

ಎರಡನೆಯದಾಗಿ, ಮಾನ್ಯ ಪಾಟೀಲ್ ಅವರು ಗದಗ್‌ದಲ್ಲಿ ಅವರ ಸಾಮ್ರಾಜ್ಯವನ್ನೇ ಕಟ್ಟಿದ್ದಾರೆ. ಗದಗ್‌ಗೆ ಬೇಕಾದಷ್ಟು ಸಹಾಯವನ್ನು ಮಾಡಿದ್ದಾರೆ. ಇದರಲ್ಲಿ ಇವರ ಇಂಟರೆಸ್ಟ್ ಇಲ್ಲ ಎಂದು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇವರಿಗೆ ಈ ಮಿಲ್‌ನಲ್ಲಿ ಇಂಟರೆಸ್ಟ್ ಇದೆ. ಏಕೆಂದರೆ, ಅವರ ಅಣ್ಣನ ಮಗ ಈಗ ತಾನೆ ಬಿ.ಇ. ಪಾಸ್ ಮಾಡಿರತಕ್ಕ ಒಬ್ಬರನ್ನು ಇದಕ್ಕೆ ಚೇರ್ಮನ್ ಆಗಿ ಮಾಡಿದ್ದಾರೆ. ಆದ್ದರಿಂದ ಇವರಿಗೆ ಟೆಕ್ಸ್‌ಟೈಲ್ ಮಿಲ್‌ನಲ್ಲಿ ಇಂಟರೆಸ್ಟ್ ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಅವರ ಅಣ್ಣನ ಮಗ ಆದ ತಕ್ಷಣ, ಅವನನ್ನು ಚೇರ್ಮನ್ ಮಾಡಬಾರದು ಎಂದು ಕಾನೂನಿನಲ್ಲಿದೆಯೋ ?

ಶ್ರೀ ಟಿ. ಆರ್. ಶಾಮಣ್ಣ.—ಆಮೇಲೆ ಇಲ್ಲಿ ಬಂದಿರತಕ್ಕ ಇನ್ನೊಂದು ಪ್ರಶ್ನೆ ಏನೆಂದರೆ, ಟೆಕ್ಸಟೈಲ್ ಮಿಲ್ಲಿಗೆ ಒಟ್ಟು ಬೇಕಾದಂಥ ಹಣ ೨.೩೫ ಕೋಟಿ ರೂಪಾಯಿಗಳು. ೨.೩೫ ಕೋಟಿ ರೂಪಾಯಿಗಳಲ್ಲಿ, ಕೇವಲ ೧ ಲಕ್ಷ ರೂಪಾಯಿಗಳನ್ನು ಸಾರ್ವಜನಿಕರಿಂದ ವಸೂಲು ಮಾಡಿದ್ದಾರೆ. ಅಂದರೆ ಸೊಸೈಟಿ ಮತ್ತು ಇಂಡಿವಿಜುಯಲ್ಸ್‌ನಿಂದ. ಇದಕ್ಕೆ ಬರಬೇಕಾದಂಥ ಹಣವನ್ನು ಎಲ್ಲಾ ಸರ್ಕಾರ ಮತ್ತು ಐ.ಎಫ್.ಸಿ. ಯಿಂದ ತೆಗೆದುಕೊಳ್ಳಬೇಕು ಎಂದು ಹೋಗಿದ್ದಾರೆ. ಒಂದು ವರ್ಷದಲ್ಲಿ ತೆಗೆದುಕೊಂಡಂಥ ಹಣವನ್ನು ವಾಪಸ್ ಕೊಡುತ್ತೇವೆ ಎಂದು ಹೇಳತಕ್ಕಂಥ ವಾದದಲ್ಲಿ, ತಿರುಳಿಲ್ಲ. ಏಕೆಂದರೆ, ಕೇವಲ

೨೧ ಲಕ್ಷ ರೂಪಾಯಿಗಳನ್ನು ಮಾತ್ರ ಸೊಸೈಟಿಯಿಂದ ಮತ್ತು ಇಂಡಿವಿಜುಯಲ್ಸ್ ಇಂದ ವಸೂಲು ಮಾಡಿ, ಸರ್ಕಾರದವರು ಇದಕ್ಕೆ ೩೬ ಲಕ್ಷ ರೂಪಾಯಿಗಳ ಬಂಡವಾಳನ್ನು ಹಾಕಿದ್ದಾರೆ. ೭೬ ಸಾವಿರ ರೂಪಾಯಿಗಳನ್ನು ಗೋಡೌನ್ ಕನ್‌ಸ್ಟ್ರಕ್ಷನ್‌ಗೆ ಸಾಲ ಎಂದು ಕೊಟ್ಟಿದ್ದಾರೆ. ಐ.ಎಫ್.ಸಿ.ಯಿಂದ ಒಂದು ಕೋಟಿ ರೂಪಾಯಿಗಳು ಬರುತ್ತದೆ ಎಂದು ಲೆಕ್ಕ ಹಾಕುತ್ತಿದ್ದಾರೆ. ಫ್ಯಾಕ್ಟರಿ ಸರಿಯಾಗಿ ಆಗ ಬೇಕಾದರೆ, ೨.೩೬ ಕೋಟಿ ರೂಪಾಯಿಗಳು ಬೇಕು. ೨೧ ಲಕ್ಷ ರೂಪಾಯಿಗಳನ್ನು ಸಾರ್ವತ್ರಿಕರಿಂದ ವಸೂಲು ಮಾಡಿ, ೨.೩೫ ಕೋಟಿ ರೂಪಾಯಿಗಳನ್ನು ಬಂಡವಾಳ ಹಾಕಿ ಇದನ್ನು ನಡೆಸಬೇಕಾದರೆ, ಇದರಲ್ಲಿ ಸರ್ಕಾರದ ಪ್ರಭಾವ ಇಲ್ಲದೆ ಇದನ್ನು ನಡೆಸುತ್ತಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—೪೨ ಲಕ್ಷ ರೂಪಾಯಿ ಆಗಿದೆ.

ಶ್ರೀ ಟಿ. ಆರ್ ಶಾಮಣ್ಣ.—ಮಾನ್ಯ ಪಾಟೀಲರು ತಮ್ಮ ಕ್ಷೇತ್ರದ ಬಗ್ಗೆ ಒಂದು ಉಪಕಾರ ಮಾಡಬೇಕು, ಒಳ್ಳೆಯ ಕೆಲಸ ಮಾಡಬೇಕು, ಕ್ಷೇತ್ರವನ್ನು ಅಭಿವೃದ್ಧಿ ಮಾಡಬೇಕು ಎನ್ನುವುದರ ಬಗ್ಗೆ ನಾನು ಆಕ್ಷೇಪ ಮಾಡುವುದಿಲ್ಲ. ನಮ್ಮ ಪ್ರಶ್ನೆ ಏನೆಂದರೆ, ನಾನು ಕಾರ್ಪೋರೇಟರ್ ಆಗಿ, ಒಂದು ಕೊಳಾಯಿಯನ್ನು ಹಾಕಿಸುವಂಥ ಶಕ್ತಿಯನ್ನು ಭಗವಂತ ನನಗೆ ಕೊಡಲಿಲ್ಲ, ಆದರೆ ಇವರು ಎಂಥ ಕೆಲಸ ವಾದರೂ ಹೇಗೆ ಬೇಕಾದರೂ ಮಾಡಿಸುತ್ತೇನೆ, ಎನ್ನತಕ್ಕ ಇವರ ಶಕ್ತಿಯನ್ನು ೩ ಕೋಟಿ ಜನಗಳಿಗೆ ಉಪ ಯೋಗಿಸಬೇಕೇ ಹೊರತು ೩೦ ಸಾವಿರ ಜನಗಳಿಗೆ ಮಾತ್ರ ಉಪಯೋಗಿಸುವುದು ಸರಿಯಲ್ಲ. ಅವರ ದಕ್ಷತೆಯ ಬಗ್ಗೆ ನನಗೆ ಮೆಚ್ಚಿಗೆ ಇದೆ, ಅವರ ಬಗ್ಗೆ ನನಗೆ ಪೂರ್ಣ ಮಮತೆ ಇದೆ, ಆದರೆ ಅವರು ಮಾಡತಕ್ಕ ಕ್ರಮ ಮೆಚ್ಚತಕ್ಕಂಥಾದ್ದು ಆಗಿರಬೇಕು. ಎಲ್ಲರೂ ಮೆಚ್ಚಿ ಬೇಷ್ ಎನ್ನಿಸಿಕೊಳ್ಳುವಂಥಾದ್ದು ಆಗಿರಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಏನು ಮಗ ಎತ್ತುವುದು, ತಿಕ ಚಿಗುಟುವುದು.

SRI M. B. RAMASWAMY.—On a print of order Sir, I have got a submissi n. The hon Member Sri Siddappa has uttered a word which, in the interests of the decency any decorum of the August House, should be expunged.

SRI H. S. SIDDAPPA.—It is a proverb written in so many good books.

SRI M. B. RAMASWAMY.—To maintain the decency and dignity of the House, the word used by Sri Siddappa should not be no record.

MR. DEPUTY SPEAKER.—I have given a ruling. ಇದು ಗಾದೆ ಮಾತು, ಇದಕ್ಕೆ ಇಂಪ್ಯುಟೇಷನ್ ಏನೂ ಇರುವುದಿಲ್ಲ. There are earlier rulings of former Hon. Speakers Srijuths B. V. Baliga and S. D. Kothavale. I have disallowed the point of order.

ಶ್ರೀ ಟಿ ಆರ್. ಶಾಮಣ್ಣ.—ತಮ್ಮ ಸೊಸೈಟಿಯ ೫೪ ನೇ ವಾರ್ಷಿಕ ವರದಿಯಲ್ಲಿ ಈ ರೀತಿ ಹೇಳಿದ್ದಾರೆ. "ರೈತರ ಮಧ್ಯದಲ್ಲಿದ್ದುಕೊಂಡು ಸಹಕಾರಿ ತತ್ವಗಳ ದೀವಟಿಗೆಯನ್ನು ಬೆಳಗುತ್ತಿರುವ ಮತ್ತು ಸಂಘದ ಭದ್ರಬುನಾದಿಗೆ ಕಾರಣರಾಗಿ ಈ ಸಂಘದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿ ಈಗಿದ್ದ ಆಡಳಿತ ವರ್ಗಕ್ಕೆ ಆದರ್ಶಪ್ರಾಯವಾದ ಮಾರ್ಗವನ್ನು ಹಾಕಿಕೊಟ್ಟಿದ್ದಾರೆ ಎಂದು ಇನ್ನು ಏನೇನೋ ಹೇಳಿಕೊಂಡಿದ್ದಾರೆ. ಗದಗ ಕೋಆಪರೇಟಿವ್ ಸೊಸೈಟಿಯಲ್ಲಿ ಶ್ರೀ ಕೆ. ಎಚ್. ಪಾಟೀಲರ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿದ್ದಾರೆ. ಅವರು ಮೆಚ್ಚಿಗೆ ಸೂಚಿಸಲೇಬೇಕು. ಅವರು ಸರಕಾರ ತಪ್ಪು ಮಾಡಿದೆ ಎಂದು ಹೇಳುವುದಿಲ್ಲ. ಮಾನ್ಯ ಪಾಟೀಲರು ರಾಜೀನಾಮೆ ಕೊಡಬೇಕು ಎಂಬ ವಿಚಾರ ಮಾನ್ಯ ಮಿತ್ರರು ಹೇಳಿದ್ದಾರೆ. ಅದರ ಬಗ್ಗೆ ನಾನು ಒತ್ತಾಯಮಾಡಿ ಹೇಳುವುದಿಲ್ಲ. ಇಂಥ ಕೆಲಸಕ್ಕೆ ಇನ್ನು ಮೇಲೆ ಶ್ರೀ ಪಾಟೀಲರು ಕೈಹಾಕಬಾರದು, ಇದಕ್ಕೆ ಬದಲಾಗಿ ನಮ್ಮ ರಾಜ್ಯದ ೩ ಕೋಟಿ ಜನರ ಪ್ರತಿನಿಧಿಯಾಗಿರುವ ಇವರು ಗದಗಿನಮಟ್ಟಿಗೆ ಇಂಥ ಕೆಲಸಗಳನ್ನು ಕೈಕೊಂಡು ಸಹಾಯಮಾಡುವುದಕ್ಕೆ ಬದಲಾಗಿ ಅವರು ಮಂತ್ರಿ ಸ್ಥಾನದಲ್ಲಿರುವುದರಿಂದ ಇಡೀ ದೇಶದ ಜನರ ಹಿತ ಸಾಧಿಸುವಂಥ ಕೆಲಸಗಳನ್ನು ಕೈಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಬಿ. ಜಿ. ಬಣಕಾರ (ಹಿರೇಕೆರೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಹುಲ್ಕೋಟಿ ಕಾಟನ್ ಟೆಕ್ಸ್‌ಟೈಲ್ಸ್ ಮಿಲ್ಲಿಗೆ ೧೫ ಲಕ್ಷ ರೂಪಾಯಿಗಳನ್ನು ಷೇರಿನ ರೂಪದಲ್ಲಿ ಕೊಟ್ಟಿರುವ ಬಗ್ಗೆ ವಾದವಿವಾದ ನಡೆದಿದೆ. ಆದರೆ ಶ್ರೀ ಕೆ. ಎಚ್. ಪಾಟೀಲರು ಏನಾದರೂ ಅಪರಾಧ ಮಾಡಿರುವರೇ. ಅವರೇನಾದರೂ ಕ್ರಿಮಿನಲ್ ಅಪರಾಧ ಮಾಡಿರುವರೇ ಎಂಬುದನ್ನು ಪರಿಶೀಲಿಸಿ ನೋಡಬೇಕು. ಈ ದಿವಸ ಅವರು ರಾಜ್ಯದ ವ್ಯವಸಾಯ ಇಲಾಖೆಯ ಮಂತ್ರಿಗಳು. ನಮ್ಮ ರಾಜ್ಯದ ೩ ಕೋಟಿ ಜನರಲ್ಲಿ ಸೇಕಡ ೮೦ ಜನರು ಒಕ್ಕಲತನ ವನ್ನವಲಂಬಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಕ್ಯಾಷ್ ಕ್ರಾಪ್ ಆದ ಹತ್ತಿ ಬೆಳೆಯು ಅತ್ಯಂತ ಪ್ರಾಮುಖ್ಯವಾದುದು. ನಮ್ಮ ರಾಜ್ಯದಲ್ಲಿ ಬೆಳೆಯುವ ಹತ್ತಿಯನ್ನು ಗುಜರಾತು ಮತ್ತು ಮಹಾರಾಷ್ಟ್ರದವರು ಖರೀದಿಮಾಡಿ ಅಲ್ಲಿ ಬಟ್ಟೆಮಾಡಿ ಮತ್ತೆ ನಮ್ಮ ರಾಜ್ಯಕ್ಕೆ ಅದನ್ನು ಕಳಿಸುವ ಪರಿಪಾಠ ಸಾವಿರಾರು ವರ್ಷಗಳಿಂದಲೂ ಇದೆ. ಇದನ್ನು ಕಂಡು ಅನೇಕರು ನಮ್ಮ ರಾಜ್ಯದಲ್ಲೇ ನೂಲು ಮತ್ತು ಬಟ್ಟೆ ತಯಾರಿಸಬೇಕು, ಇದರಿಂದ ಸರಕಾರಕ್ಕೆ ವರಮಾನ ಬರುವುದು ಎಂದು ಯೋಜಿಸಿ ಇಲ್ಲಿ ಮಿಲ್ಲನ್ನು ಸ್ಥಾಪಿಸಿ ಕೈ ಸುಟ್ಟುಕೊಂಡಿದ್ದಾರೆ. ಹುಬ್ಬಳ್ಳಿಯಲ್ಲಿ ಕೆ.ಸಿ.ಟಿ. ಮಿಲ್ಲನ್ನು ಬಹುಶಃ ಗುಜರಾತಿನವರು ಸ್ಥಾಪಿಸಿದ್ದರು. ಇಲ್ಲೇ ಹತ್ತಿ ಕೊಂಡು ಬಟ್ಟೆ ತಯಾರಿಸಬೇಕೆಂಬುದು ಬಹುಶಃ ಅವರ ಉದ್ದೇಶವಾಗಿತ್ತು. ಆದರೆ ದುರದೃಷ್ಟವಶಾತ್ ಅದರಲ್ಲಿ ನಷ್ಟವಾಗಿದೆ. ಸರಕಾರ ಅದಕ್ಕೆ ಲಕ್ಷಾಂತರ ರೂಪಾಯಿ ಹಣ ಹಾಕಿತು, ಸಾರ್ವಜನಿಕರೂ ಹಣ ತೊಡಗಿಸಿದ್ದರು. ಸುತ್ತಮುತ್ತಲಿನವರು ೧೮ ಲಕ್ಷ ರೂಪಾಯಿಗಳನ್ನು ಷೇರು ರೂಪವಾಗಿ ಇಟ್ಟಿದ್ದರು. ಆದರೆ ಇದರಿಂದ ಪ್ರಯೋಜನವಾಗಲಿಲ್ಲ. ಇದನ್ನು ನೋಡಿ ಮೈಸೂರು ರಾಜ್ಯದಲ್ಲಿ ಕಾಟನ್ ಟೆಕ್ಸ್‌ಟೈಲ್ ಮಿಲ್ಲನ್ನು ಸ್ಥಾಪಿಸುವುದು ಅವಶ್ಯಕ ಎಂದು ಹುಲ್ಕೋಟಿಯಲ್ಲಿ ಒಂದು ಮಿಲ್ಲನ್ನು ಸ್ಥಾಪಿಸಿದರೆ ಅದು ಶ್ರೀ ಪಾಟೀಲರ ತಪ್ಪಲ್ಲ. ಇಡೀ ಮೈಸೂರು ರಾಜ್ಯಕ್ಕೆ ಅನ್ಯಾಯವಾಗುತ್ತಿದೆ, ಹೊರ ರಾಜ್ಯದವರು ಇಲ್ಲಿನ ಹತ್ತಿ ತೆಗೆದುಕೊಂಡುಹೋಗಿ ಆದಾಯ ಪಡೆಯುತ್ತಿದ್ದಾರೆ, ಇಲ್ಲೇ ಅದರ ಉಪಯೋಗಮಾಡಿ ದೇಶಕ್ಕೆ ಅನುಕೂಲಮಾಡೋಣ ಎಂದೂ, ಇಲ್ಲಿನವರಿಗೆ ಇಲ್ಲೇ ಬಟ್ಟೆ ಮಾಡಿ ಒದಗಿಸೋಣ ಎಂದೂ, ಹೊರಗೆ ಹೋಗುವುದನ್ನು ತಪ್ಪಿಸಬಹುದು ಎಂದೂ ಇಂಥ ಉದಾತ್ತವಾದ ಆದರ್ಶವಾದ ಕೆಲಸಕ್ಕೆ ಕೈಹಾಕಿ ಹುಲ್ಕೋಟಿಯಲ್ಲಿ ಮಿಲ್ಲನ್ನು ಸ್ಥಾಪಿಸಿ ಅದಕ್ಕೆ ಪ್ರೋತ್ಸಾಹ ಕೊಟ್ಟಿರುವುದು ಗದಗ ಹುಲ್ಕೋಟಿಯವರಿಗೆ ಮಾತ್ರವಲ್ಲದೆ ದೇಶಕ್ಕೇ ಅನುಕೂಲವಾಗಿದೆ. ಈ ಮಿಲ್ಲಿನಲ್ಲಿ ಬಿಜಾಪುರ, ಧಾರವಾಡ ಮುಂತಾದ ಕಡೆಗಳವರೂ ಷೇರುಗಳನ್ನು ಪಡೆದಿದ್ದಾರೆ. ರೈತರು ಬೆಳೆಯುವುದಕ್ಕೆ ಯೋಗ್ಯ ದರ ದೊರೆಯಬೇಕು, ಯೋಗ್ಯ ರೀತಿಯಲ್ಲಿ ಖರೀದಿ ಮಾಡುವವರು ಬೇಕು, ಹೆಚ್ಚು ದರ ಕೊಟ್ಟು ಖರೀದಿ ಮಾಡಿದರೆ ಸಂಸ್ಥೆಗೆ ಅನುಕೂಲವಾಗುವುದು, ರೈತರಿಗೂ ಅನುಕೂಲವಾಗುವುದು ಎಂದು ಈ ಮಿಲ್ಲನ್ನು ಸ್ಥಾಪಿಸಿ ಉತ್ತೇಜನ ನೀಡಿರುವುದಕ್ಕೆ ಸಂತೋಷಪಡಬೇಕು. ಇಂಥ ಒಂದು ಘನವಾದ ಉದ್ದೇಶದಿಂದ ಈ ಮಿಲ್ಲಿಗೆ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ತಪ್ಪೇ ? ಇದನ್ನು ವಿಚಾರಮಾಡಿದರೆ ಕಾರ್ಪೊರೇಷನ್ ಮಾಡಿರುವುದು ಉತ್ತಮವಾದ ಕೆಲಸವೆಂದು ವ್ಯಕ್ತವಾಗುವುದು. ಯಾವ ಸಂದರ್ಭದಲ್ಲಿ ಹೇಗೆ ಮಾಡಿದ್ದಾರೆಂಬುದನ್ನು ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವುದು ಸೂಕ್ತ. ಇಂದು ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಜರ್ಸ್‌ಗೆ ಒಂದು ಕೋಟಿ ರೂಪಾಯಿ, ದಾವಣಗೆರೆ ಸಕ್ಕರೆ ಕಂಪೆನಿಗೆ ೨೮ ಲಕ್ಷ ರೂಪಾಯಿ ಕೊಟ್ಟಂತೆ ಗದಗ ಮಿಲ್ಲಿಗೆ ೧೫ ಲಕ್ಷ ಕೊಟ್ಟಿದ್ದಾರೆ. ಇತರ ಸಂಸ್ಥೆಗಳಿಗೆ ೧ ಕೋಟಿ, ೨೫ ಲಕ್ಷ ಕೊಟ್ಟಿರುವಾಗ ಹುಲ್ಕೋಟಿ ಮಿಲ್ಲಿಗೆ ೧೫ ಲಕ್ಷ ರೂಪಾಯಿ ಕೊಟ್ಟಿರುವುದು ತಪ್ಪಲ್ಲ.

ಇದು ಅಗ್ರೋ ಇಂಡಸ್ಟ್ರಿಯಲ್ಲ ಎಂದು ಹೇಳುವುದು ತಪ್ಪು. ಇಂದು ಫರ್ಟಿಲೈಜರ ಕಂಪನಿಯು ಅತ್ಯಾವಶ್ಯಕವಾಗಿದೆ. ರೈತರಿಗೆ ಗೊಬ್ಬರ ಮುಖ್ಯವಾಗಿ ಬೇಕಾಗಿದೆ. ಉತ್ತಮವಾದ ಬೆಳೆ ತೆಗೆಯಲು ಸಾಕಷ್ಟು ಗೊಬ್ಬರ ದೊರಕಿಸಿಕೊಡಲು ೧ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದು ತಪ್ಪಲ್ಲ. ಇದೇ ಪ್ರಕಾರ ಹುಲ್ಕೋಟಿ ಮಿಲ್ಲಿಗೆ ಕೊಟ್ಟಿರುವುದು ತಪ್ಪಲ್ಲ.

ಈ ವಿಚಾರದಲ್ಲಿ ಶ್ರೀ ಪಾಟೀಲರು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆಯೋ, ಹಸ್ತಕ್ಷೇಪ ಮಾಡಿದ್ದಾರೆಯೆ, ಮಾಡಿದ್ದರೆ ಯಾರ ಸಲುವಾಗಿ ಮಾಡಿದ್ದಾರೆ ಎಂದು ನೋಡಿದರೆ ಅಂಥಾದ್ದೇನೂ ಕಂಡು-ಬರುವುದಿಲ್ಲ. ಹಿಂದೆ ಟಿ. ಸಿದ್ದಲಿಂಗಯ್ಯನವರು ಮುಂತಾದವರು ರಾಜೀನಾಮೆ ಕೊಟ್ಟಿರಬಹುದು. ಇದು ವೈಯಕ್ತಿಕ ಪ್ರಶ್ನೆಯಲ್ಲ. ಶ್ರೀ ಪಾಟೀಲರು ಈ ರಾಜ್ಯದ ಮಂತ್ರಿಗಳಾಗಿ ಈ ಕೆಲಸಮಾಡಿದ್ದಾರೆ. ಇಂದು ಒಂದು ಮಿಲ್ಲನ್ನು ಉತ್ತಮಸ್ಥಿತಿಗೆ ತಂದು ತನ್ಮೂಲಕ ರೈತರಿಗೆ ಸಹಾಯಮಾಡಲು ಜನತೆಗೆ ಸಹಾಯಮಾಡಲು ಮಂತ್ರಿಗಳಾಗಿ ಪಾಟೀಲರು ಈ ಕೆಲಸ ಮಾಡಿದ್ದಾರೆ. ಇದು ನ್ಯಾಯವಾದ ಕೆಲಸ ಎಂದು ಹೇಳಬಹುದು. ವೈಯಕ್ತಿಕವಾಗಿ ಅವರು ಸಹಾಯಮಾಡಿದ್ದರೆ ಅದು ತಪ್ಪು ಎಂದು ಹೇಳಬಹುದು. ಸ್ವಜನ ಪಕ್ಷಪಾತ ಮಾಡಿದ್ದರೆ ಅವರು ಮಾಡಿರುವುದು ಸರಿಯಲ್ಲ ಎಂದು ಹೇಳಬಹುದು. ನಿಜವಾಗಿಯೂ ಮಂತ್ರಿಗಳು ಯೋಗ್ಯವಾದ ಕೆಲಸ ಮಾಡಿದ್ದಾರೆ. ಅವರು ತಮ್ಮ ಸ್ವಾರ್ಥಕ್ಕಾಗಿ ಏನೂ ಮಾಡಿಲ್ಲ. ಅವರು

ಶ್ರದ್ಧೆವಹಿಸಿ ಆಸಕ್ತಿವಹಿಸಿ ಒಂದು ವರ್ಷದಲ್ಲಿ ಕಾರ್ಯಚರಣೆ ಪ್ರಾರಂಭವಾಗುವಂತೆ ಶ್ರಮಿಸಿರುವುದಕ್ಕೆ ಅವರನ್ನು ಹೊಗಳಬೇಕೇ ಅಥವಾ ತೆಗಳಬೇಕೇ ಎಂಬದನ್ನು ವಿಚಾರಮಾಡಬೇಕು.

ಕಬ್ಬಿಣ ಮತ್ತು ಉಕ್ಕನ್ನು ಒದಗಿಸಿದ ಸಂಬಂಧದಲ್ಲಿ ಟೀಕೆ ಮಾಡಿದ್ದಾರೆ. ಇದಕ್ಕೆ ಕೊಡಬೇಕಾದ ಬೆಲೆ ಕೊಡಲಾಗಿದೆ. ಇಡೀ ರಾಜ್ಯದ ರೈತರಿಗೆ ಉಪಯೋಗವಾಗುವುದಕ್ಕೆ ಕೊಟ್ಟಿದ್ದಾರೆ. ೨೫೦ ರೂಪಾಯಿನಂತೆ ಕೊಡಲಾಗಿದೆ ಎಂದಿದ್ದಾರೆ. ಲ್ಲಿ ದರವೇನಿದೆ ಅದನ್ನು ಕೊಟ್ಟಿದ್ದಾರೆ. ಟ್ರಸಿಫ್ ಸಾಗಾಟದ ಬಗ್ಗೆ ಹೇಳಿದ್ದಾರೆ. ಬುಲಡೋಜರ ಸಹಾಯ ಮಾಡಿದ್ದಾರೆ ಎಂದು ಪ್ರಸ್ತಾಪಿಸಿದ್ದಾರೆ. ಪಾಟೀಲರು ಯಾರ ಸಲುವಾಗಿ ಇದನ್ನು ಮಾಡಿದ್ದಾರೆ? ಅವರ ಅಣ್ಣ ತಮ್ಮಂದಿರ ಸಲುವಾಗಿ ಮಾಡಿರುವರೇ? ಇಡೀ ರಾಜ್ಯಕ್ಕೆ ಉಪಯೋಗವಾಗುವ ಮಿಲ್ಲಿನ ಸಲುವಾಗಿ ಮಾಡಿದ್ದಾರೆ. ಬುಲಡೋಜರ ಸರಬರಾಜಿನ ಬಗ್ಗೆ ವರದಿಯಿದೆ. ದೇವರಾಜ ಎನ್ನುವವರು ೪ ಎಕರೆಗೆ ಬೇಕೆಂದು ಕೇಳಿದರೆ ಕೊಡಲಿಲ್ಲ ಎಂದು ಹೇಳಿದ್ದಾರೆ. ಜಗ ಮಿಲ್ಲಿಗೆ ಕೊಟ್ಟಿದ್ದರಲ್ಲಿ ತಪ್ಪೇನೂ ಇಲ್ಲ. ಹಿಂದೆ ನ್ಯಾಷನಲ್ ಇನಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗಿಗೆ ಕೊಟ್ಟಿರುವ ಉದಾಹರಣೆಯಿದೆ. ಯಾವುದೇ ಸಾರ್ವಜನಿಕ ಸಂಸ್ಥೆಗೆ ಸಾರ್ವಜನಿಕರಿಗೆ ಉಪಯೋಗವಾಗುವ ಸಂದರ್ಭವಿದ್ದಾಗ ಸರಕಾರ ಈ ರೀತಿಯಲ್ಲಿ ಸಹಾಯ ಮಾಡಿದರೆ ತಪ್ಪೇ?

Nothing is an offence which is done in good faith. Whether he has acted in good faith or with good intention ಎಂಬುದನ್ನು ಮುಖ್ಯವಾಗಿ ನೋಡಬೇಕು. ಮುಖ್ಯವಾಗಿ ಅವರ ಉದ್ದೇಶವನ್ನು ನೋಡಬೇಕು ಬೇರೆ ಮ್ಯಾಲಫೈಡ್ ಇಂಟೆನ್‌ಷನ್ ಇದ್ದರೆ ಅರ್ಥವಾಗುವುದು. ಇಂದು ಮ್ಯಾಲಫೈಡ್ ಇಂಟೆನ್‌ಷನ್ ಏನೂ ಇಲ್ಲ. ಕ್ರಿಮಿನಲ್ ಇಂಟೆನ್‌ಷನ್ ಅಥವಾ ಸೆಲ್ಫಿಷ್ ಇಂಟೆನ್‌ಷನ್ ಸಹ ಇಲ್ಲ. ಇದನ್ನು ಗಮನಿಸಬೇಕು.

ಆಮೇಲೆ ಅರ್ಜಿ ಬೇಕಾಗಿತ್ತು ಎಂದು ಹೇಳಿದರು. ಬುಲಡೋಜರಿಗೆ ಅರ್ಜಿ ಬೇಕು ಎಂದು ಹೇಳಿದರು. ಏಕೆ ಬೇಕಾಗಿತ್ತು? ೯-೨-೧೯೭೩ರಲ್ಲಿ ಛೇರ್ಮನ್ನರಿಗೆ ಅರ್ಜಿ ತಲ್ಪಿದೆ. ಒಂದುವೇಳೆ ಅರ್ಜಿಯಿಲ್ಲದಿದ್ದರೆ ಫೋನ್ ಮಾಡುತ್ತಿದ್ದರು. ಫೋನ್‌ನಲ್ಲಿ ಕೊಡಿ, ಬಾಡಿಗೆ ಕೊಡುತ್ತೇವೆ ಎಂದು ಹೇಳಬಹುದು. ಇದರಲ್ಲಿ ತಪ್ಪೇನು? ಆಮೇಲೆ ಬಿಲ್ಲು ಮಾಡಬಹುದಾಗಿತ್ತು. ಮೊನ್ನೆ ಬರಗಾಲ ಬಂದಾಗ ಬೀಜದ ಕಾಳಿನ ಸರಬರಾಯಿ ಸಂಬಂಧದಲ್ಲಿ ಅನೇಕರು ಹಣ ಮಾಡಿದರು, ಇದನ್ನು ನೋಡಿ ಇಲ್ಲಿಂದ ಕಳಿಸಿದರು ಆಗ ಯಾರಾದರೂ ಅರ್ಜಿ ಕೊಟ್ಟಿದ್ದರೇ? ಇಲ್ಲ. ಮುಖ್ಯವಾಗಿ ಉದ್ದೇಶ ನೋಡಬೇಕು. ಅನೇಕರು ಗೊಬ್ಬರವಿಲ್ಲವೆಂದು ಹೇಳುತ್ತಾ ಇದ್ದರು. ಅಂಥ ಸಂದರ್ಭದಲ್ಲಿ ತಕ್ಷಣ ಕಳಿಸುವರು.

ಕೆಲಸವನ್ನೇನೋ ಮಾಡಿಸಿದ್ದಾರೆ. ಆದರೆ ಅದನ್ನ ಅವರು ಪುಗಸಾಟೆಯೇನೂ ಮಾಡಿಸಿಲ್ಲ. ಅದಕ್ಕೆ ಯೋಗ್ಯ ಬೆಲೆಯನ್ನು ಕೊಟ್ಟಿದ್ದಾರೆ.

ಆದರೆ ಇಲ್ಲಿ ಮಾತನಾಡಿದ ಕೆಲವು ಮಾನ್ಯ ಸದಸ್ಯರುಗಳು ಆ ಮಿಲ್ಲಿಗೆ ಅಷ್ಟು ಹಣವನ್ನು ಕೊಡುವುದಕ್ಕೆ ಕೋ ಆಪರೇಟಿವ್ ಆಕ್ಟಿನಲ್ಲಿ ಅವಕಾಶವಿಲ್ಲದಿದ್ದರೂ ಕೊಟ್ಟು ಆ ಆಕ್ಟನ್ನ ಅವರಿಗೆ ಅಧಿಕಾರವಿಲ್ಲದಿದ್ದರೂ ಅದನ್ನು ಅವರು ಹಣ ಕೊಟ್ಟಿದ್ದಕ್ಕೆ ತಕ್ಕಂತೆ ತಿದ್ದುಪಡಿ ಮಾಡಿದ್ದಾರೆಂದು ಹೇಳಿದರು. ಆದರೆ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ಆಕ್ಟ್ ಸೆಕ್ಷನ್ 121 ರಲ್ಲಿ ಹೀಗೆ ಹೇಳಿದೆ :-

> "The State Government may by general or special order published in the official gazette, exempt any Co-operative Society or any clause of Societies from any of the provisions of this Act or may direct that such provisions shall apply to such Society or class of Societies with such modifications as may be specified in the Order"

ಈ ಸೆಕ್ಷನ್ ಪ್ರಕಾರ ಅವರು ಆ ಆರ್ಡರನ್ನು ಹೊರಡಿಸಿದ್ದಾರೆಯೇ ವಿನಾ ಅವರು ಯಾವ ವಿಧದಿಂದಲೂ ಕಾನೂನು ಬಾಹಿರವಾದ ಆರ್ಡರನ್ನು ಹೊರಡಿಸಿರುವುದಿಲ್ಲ. ಇನ್ನು ನಮ್ಮ ಕೆಲವು ಸದಸ್ಯರು ಆ ಕಾಟನ್ ಟೆಕ್ಸ್‌ಟೈಲ್ಸ್ ಮಿಲ್ಲು ಆಗ್ರೋಬೇಸ್ಡ್ ಇಂಡಸ್ಟ್ರೀಸ್ ಆಗುವುದಿಲ್ಲ ಎಂದು ಹೇಳಿದರು. ಅದರ ಬಗ್ಗೆ ಹೇಳುವುದಾದರೆ ನಮ್ಮ ಆಕ್ಟ್ ಆಫ್ ಪಾರ್ಲಿಯಮೆಂಟ್ ಎಂದು ಆಕ್ಟಿದೆ. ಅದರಲ್ಲಿ ಹೀಗೆ ಹೇಳಿದೆ :—

> "The Parliment has passed an Act called National Co-operative Development Corporation Act. 1962 (No. 26

(ಶ್ರೀ ಬಿ. ಜಿ. ಬಣಕಾರ್)

> of 1962) According to Seetin 2 under Clause (a) Sub-clause (iii of the Act uner definitions, raw cotton, whether ginned or unginned and cotton seed comes under agricultural produce."

ಆದುದರಿಂದ ಅವರು ಹೇಳಿದಂತೆ ಆ ಕಾಟನ್‌ಟೆಕ್ಸ್‌ಟೈಲ್ಸ್ ಮಿಲ್ಸ್ ಆಗ್ರೋಬೇಸ್ಡ್ ಇಂಡಸ್ಟ್ರೀಸ್‌ನಲ್ಲೇ ಬರುತ್ತದೆ. ಹಾಗಿರುವಾಗ ಅದು ರೈತನಿಗೆ ಸಂಬಂಧಪಟ್ಟಿದ್ದಲ್ಲ, ಆಗ್ರೋಬೇಸ್ಡ್ ಇಂಡಸ್ಟ್ರಿಯಲ್ಲಿ ಬರುವುದಿಲ್ಲ ಎಂದು ಹೇಳುವುದು ಅಷ್ಟು ಉಚಿತವಾದುದಲ್ಲ. ಈ ದಿವಸ ಆ ಗದಗಿನಲ್ಲಿರತಕ್ಕಂಥ ಒಂದು ಕಾಟನ್ ಕೋ ಅಪರೇಟಿವ್ ಟೆಕ್ಸ್‌ಟೈಲ್ ಮಿಲ್ಲಿನಷ್ಟು ದೊಡ್ಡ ಮಿಲ್ಲು ನಮ್ಮ ರಾಜ್ಯದಲ್ಲಿ ಬೇರೆಲ್ಲಿಯೂ ಇರುವುದಿಲ್ಲ. ಅದು ಒಂದನೇ ನಂಬರ್ ಮಿಲ್ಲು. ಅಲ್ಲಿ ಅಷ್ಟು ದೊಡ್ಡ ಪ್ರಮಾಣದಲ್ಲಿ ಹತ್ತಿ ವ್ಯಾಪಾರ ಮಾಡತಕ್ಕ ಜನರೂ ಮತ್ತು ಉತ್ತಮ ದರ್ಜೆ ಹತ್ತಿ ಬೆಳೆಯುತಕ್ಕ ರೈತರೂ ಅಲ್ಲಿದ್ದಾರೆ. ಹತ್ತಿ ಬೆಳೆಗೆ ಅದು ಬಹಳ ಉತ್ತಮ ಪ್ರದೇಶ ಅಲ್ಲಿ ಬಹಳ ಉತ್ತಮವಾದ ಕಾಟನ್ ಜಿನ್ನಿಂಗ್ ಸೊಸೈಟಿಗಳೂ ಕೆಲಸ ಮಾಡುತ್ತಿವೆ. ಆ ಗದುಗಿನ ಭಾಗದ ಜನರು ಈ ಅರಳೇ ವ್ಯವಹಾರದಲ್ಲಿ ಬಹಳ ಐಡಿಯಲ್ಲಾಗಿ, ಆದರ್ಶ ವರ್ತಕರಾಗಿ, ಸಹಕಾರದ ಸಾಮ್ರಾಟರಾಗಿ ಕೆಲಸಮಾಡುತ್ತಿದ್ದಾರೆ. ಅದನ್ನು ನೋಡಿ ನಾವೆಲ್ಲರೂ ಹರ್ಷಪಡಬೇಕಾಗಿದೆ. ಹಾಗಿದ್ದರೂ ಅದನ್ನೆಲ್ಲಾ ಮರೆತು ಆಗಲೇ ಯಾರೋ ಒಬ್ಬ ಸದಸ್ಯರು ಮಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತೆಂದು ಹೇಳಿದರಲ್ಲಾ ಹಾಗೆ ಇಲ್ಲಿ ಯಾವುದೋ ಕಾರಣವನ್ನಿಟ್ಟುಕೊಂಡು ಶ್ರೀ ಕೆ. ಎಚ್. ಪಾಟೀಲರನ್ನು ರಾಜೀನಾಮೆ ಕೊಡಿ ಎಂದು ಹೇಳುವುದು ಸರಿಯಾದ್ದಲ್ಲ. ಅಂಥದ್ದಕ್ಕೆ ಇಲ್ಲಿ ಅವಕಾಶವೇ ಇಲ್ಲ. ಅವರು ಇಲ್ಲಿ ಯಾವ ಪ್ರತಿಫಲವನ್ನೇ ಆಗಲಿ ತಮ್ಮ ಮನೆಗೆ ಮಾಡಿಕೊಂಡಿಲ್ಲ. ಆದರೆ ಅವರು ಮಾಡಿರತಕ್ಕ ಕೆಲಸ ಏನಿದೆ ಅದು ದೇಶಕ್ಕೆ ಒಂದು ಸಫಲವಾದದ್ದೇ ಅಲ್ಲವೇ ಎಂಬುದನ್ನು ನೋಡಬೇಕು. ಇಲ್ಲಿ ಈಗ ಇದರ ಚರ್ಚೆ ಹೇಗಿದೆ ಎಂದರೆ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಆದ ತೀರ್ಮಾನವನ್ನು ಹೈಕೋರ್ಟಿನಲ್ಲಿ ವಿಚಾರ ಮಾಡಿ ಶ್ರೀ ಕೆ. ಎಚ್. ಪಾಟೀಲರು ನಿರಪರಾಧಿಗಳು, ಅವರೇನೂ ತಪ್ಪನ್ನು ಮಾಡಿಲ್ಲ ಅವರು ಮಾಡಿರತಕ್ಕ ಕೆಲಸ ಏನಿದೆ ಅದು ಸಂಪೂರ್ಣವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ್ದಾಗಿರುವುದರಿಂದ ಅವರು ಮೇಲೆ ಯಾವ ಅಪರಾಧವೂ ಇಲ್ಲ ಎನ್ನುವಂತಿದೆ ಎಂದು ಹೇಳಿ ಅಧ್ಯಕ್ಷರಿಗೆ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು) :— ಮಾನ್ಯ ಅಧ್ಯಕ್ಷರೇ ; ಈಗ ಸಭೆಯ ಮುಂದಿರತಕ್ಕ ಪಿ. ಯು. ಸಿ. ವರದಿಯನ್ನೂ ಮತ್ತು ಇಲ್ಲಿಯ ತನಕ ಭಾಷಣ ಮಾಡಿದ ಸದಸ್ಯರು ಹೇಳಿದ್ದನ್ನೂ ನಾನು ಮನಸ್ಸಿಟ್ಟು ಕೇಳಿ ಅರ್ಥಮಾಡಿಕೊಂಡಿದ್ದೇನೆ.

ನಾವೀಗ ಈ ಎಲ್ಲ ವಿಷಯಗಳನ್ನು ಒತ್ತಟ್ಟಿಗಿಟ್ಟು ದೇಶದ ಪರಿಸ್ಥಿತಿಯೇನಿದೆ ಎಂಬುದನ್ನು ನೋಡಬೇಕಾಗಿದೆ. ಆದರೆ ಒಂದು ವಿಚಾರದಲ್ಲಿ ಎಲ್ಲ ಪಕ್ಷಗಳ ಧೋರಣೆಯೂ ಒಂದೇ ಆಗಿದೆ. ಅಂದರೆ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬೆಳೆಯಬೇಕು, ಇರತಕ್ಕ ಕೈಗಾರಿಕೆಗಳು ಇನ್ನೂ ಅಭಿವೃದ್ಧಿಯಾಗಬೇಕು. ನಮ್ಮ ರಾಜ್ಯದ ವ್ಯವಸಾಯವನ್ನು ಇನ್ನೂ ಹೆಚ್ಚಿನ ಪ್ರಗತಿಪಥದಲ್ಲಿ ತೊಡಗಿಸಬೇಕು, ದೇಶದ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಇನ್ನೂ ಹೆಚ್ಚಿನ ಕೈಗಾರಿಕೆಗಳನ್ನು ಬೆಳೆಸಬೇಕು, ರಾಜ್ಯದಲ್ಲಿ ಅಲ್ಲಲ್ಲೇ ದೊರೆಯತಕ್ಕ ಕಚ್ಚಾ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕಬೇಕು, ದೇಶದಲ್ಲಿರತಕ್ಕ ಬಡತನ ತೊಲಗಬೇಕು ಎಂಬ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯ ಪಡರು. ಆದರೆ ಇಂಥ ಕಾರ್ಯಗಳನ್ನು ಮಾಡುವಾಗ ಮಾನ್ಯ ಕೆ. ಎಚ್. ಪಾಟೀಲರು ಬಹುಶಃ ಮಂತ್ರಿಗಳಾಗಿ ಕೆಲಸ ಮಾಡದೆ ಒಬ್ಬ ಸಮಾಜ ಸೇವಕನಂತೆ ಕೆಲಸ ಮಾಡಿದ್ದಾರೆ. ಆದರೆ ಅವರು ಬಹಳ ಬುದ್ಧಿವಂತರು. ಹಿಂದೆ ಇದೇ ವಿಚಾರಕ್ಕೆ ನಾವು ಅವರ ಮನೆಯ ಮುಂದೆ ಉಪವಾಸವ್ರತವನ್ನು ಹಿಡಿದು ಕುಳಿತಿದ್ದಾಗ ಈಗ ಕರೆದಿರುವ ಅಧಿವೇಶನವನ್ನು ಆ ದಿವಸವೇ ಕರೆದಿದ್ದರೆ ಆಗ ನಾವು ಇನ್ನೂ ಈ ಬಗ್ಗೆ ಹೆಚ್ಚು ಟೀಕೆಗಳನ್ನು ಮಾಡುತ್ತಿದ್ದೆವು. ಆದರೆ ಈ ದಿವಸ ಆ ಪರಿಸ್ಥಿತಿ ಹೊರಟು ಹೋಗಿದೆ. ಇಂದಿನ ಪರಿಸ್ಥಿತಿಯನ್ನು ನೋಡುವಾಗ ಒಂದು ರೀತಿಯಲ್ಲಿ ಅವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕ ಪ್ರಸಂಗವಿದೆ ಎಂದು ಹೇಳಬಹುದು. ದೇಶದಲ್ಲಿ ಹೀಗೆ ಕೆಲಸ ಮಾಡತಕ್ಕ ದಕ್ಷ ಜನರು ಬೇಕು. ಸರ್ಕಾರದ ಕಾನೂನಿನ ತಲೆಯಮೇಲೇ ನಡೆಯುತ್ತೇನೆಂದರೆ ಅವರಿಗೆ ಇಷ್ಟು ಶೀಘ್ರವಾಗಿ ಇಷ್ಟು ದೊಡ್ಡ ಬೃಹದಾಕಾರದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಹಿಂದೆ ಈ ವಿಧಾನಸೌಧವನ್ನು ಕಟ್ಟಿದಾಗಲೂ ಶ್ರೀ ಕೆ. ಹನುಮಂತಯ್ಯನವರ ಬಗ್ಗೆ ಹೀಗೆ ಟೀಕೆಗಳು ಬಂದಿದ್ದವು. ಆದರೆ ಇಲ್ಲಿ ಶ್ರೀ ಕೆ. ಎಚ್. ಪಾಟೀಲರ ವೈಯಕ್ತಿಕ ಯಾವುದೂ ಇಲ್ಲದಿದ್ದರಿಂದ ಇದರಲ್ಲಿ ಅವರದೇನೂ ತಪ್ಪಿಲ್ಲ. ನಾನೂ

ಕೂಡ ಆ ಗದುಗಿನ ಸುತ್ತ ಮುತ್ತ ಕೆಲವು ಪ್ರದೇಶಗಳಲ್ಲಿ ಹೋಗಿ ತಿರುಗಿಕೊಂಡು ಅದನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಬಹಳ ಸೊಗಸಾಗಿ ರೈತರು ಹತ್ತಿಯನ್ನು ತ[illegible]ವಾಗಿ ಬೆಳೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ಗದುಗಿನಲ್ಲಿ ಅದರ ಸುತ್ತಮುತ್ತಲೂ ಅನೇಕ ಜನ ನೇಕಾರರಿದ್ದಾ[illegible] ಅವರೆಲ್ಲರ ಹಿತದೃಷ್ಟಿಯಿಂದ ಇವರು ಕೆಲಸ ಮಾಡಿದ್ದಾರೆ. ಇದರಲ್ಲಿ ಕೆಲವು ಕಾನೂನಿನ ವಿಚಾರದಲ್ಲಿ [illegible]ರಬಹುದು. ಆದರೆ ಅದನ್ನು ಮೀರಿ ಕೆಲಸ ಮಾಡದೆ ಇದ್ದಿದ್ದರೆ ಆ ಬೃಹದಾಕಾರದ ಕೆಲಸ ಇಷ್ಟು ಬೇಗ [illegible]ತ್ತಿರಲಿಲ್ಲ. ಆದರೆ ವಿರೋಧ ಪಕ್ಷದ ಪ್ರವೃತ್ತಿ ಯಾವಾಗಲೂ ಒಳ್ಳೆಯದಿದ್ದರೂ ಅದನ್ನು ಕೆಟ್ಟದ್ದು [illegible]ವಾದ ಮಾಡುವುದು ಅದರ ಸ್ವಭಾವ ಅನ್ನುವುದಕ್ಕೆ ಅವಕಾಶ ಇಲ್ಲದಿರಲೆಂದು ನಾನು ಇಲ್ಲಿ ಕೊಸದ ಗು[illegible]ಮರ್ಶೆಯಿಂದ ಮಾತನಾಡುತ್ತಿದ್ದೇನೆ. ಸರ್ಕಾರ ಯಾವುದಾದರೂ ಒಂದೆರಡು ಒಳ್ಳೆ ಕೆಲಸ ಮಾಡಿದ್ದರೆ [illegible] ಒಳ್ಳೆಯ ಮಾತನ್ನು ಹೇಳುವುದು ನನ್ನ ಸ್ವಭಾವ. ಆದರೆ ಇಲ್ಲಿ ಒಂದು ವಿಷಯ ಬರುತ್ತದೆ. ಈ [illegible] ಕೆಲಸವನ್ನು ಮಾನ್ಯ ಕೆ. ಎಚ್. ಪಾಟೀಲರು ಯಾವ ಆಸಕ್ತಿ ವಹಿಸಿ ಎಷ್ಟು ಬೇಗ ಮಾಡಿದ್ದಾರೋ ಅಷ್ಟೇ ಆಸಕ್ತಿ ವಹಿಸಿ ದೇಶದ ಇತರೇ ಕೆಲಸಗಳನ್ನೂ ಮಾಡಿದ್ದರೆ ಈ ದಿವಸ ಅವರ ಮೇಲೆ ಈ ಟೀಕೆಗಳು ಬ[illegible]ವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಆದರೆ ಅವರು ಅರಣ್ಯ ಸಚಿವರಾಗಿ ಕೆಲಸಮಾಡುತ್ತಿದ್ದಾರೆ. ಅವ್ರ ನಮ್ಮ ಮುಂದೆ ನಮ್ಮ ತಿಪಟೂರಿನ ಒಂದು ಅರಣ್ಯ ಖಾತೆಗೆ ಸಂಬಂಧಪಟ್ಟ ವಿಷಯ ಒಂದು ಜಮೀನಿನ ವಿಷಯ ತೀರ್ಮಾನವಾಗದೆ ಹಾಗೇ ಉಳಿದಿದೆ. ಅದನ್ನೂ ಕೂಡ ಅವರೇಕೆ ಇಷ್ಟೇ ತ್ವರಿತವಾಗಿ ಮಾಡಲಿಲ್ಲ ? ಮಾನ್ಯ ಸಚಿವರು ಗದುಗ ತಾಲ್ಲೂಕು ಒಂದಕ್ಕೇ ಅವರು ಸಚಿವರಲ್ಲ ಅವರು ಇಡೀ ರಾಜ್ಯಕ್ಕೆ ಸಚಿವರಾಗಿದ್ದಾರೆ. ಆ ಗದುಗಿನ ಜನರೆಷ್ಟೋ ಇವರಿಗೆ ಇನ್ನುಳಿದ ರಾಜ್ಯದ ಜನರೂ ಅಷ್ಟೆ ಎಂಬ ಅಭಿಮಾನ ಇವರಲ್ಲಿರಬೇಕು. ಆದರೆ ಆ ಮನೋಭಾವ ಇವರಿಗೆ ಬರಲಿಲ್ಲ. ಮೊನ್ನೆ ನೂಲಿನ ವಿಷಯದಲ್ಲಿ ಇಲ್ಲಿ ಮಾತನಾಡುತ್ತ ಮಾನ್ಯ ಕೈಗಾರಿಕಾ ಸಚಿವರಾದ ಕೃಷ್ಣಾರವರು ನೂಲನ್ನು ನಾವು ಮದ್ರಾಸ್ ರಾಜ್ಯದಿಂದ ತರಿಸಬೇಕಾಗಿದೆ, ನಮಗೆ ಸಾಕಷ್ಟು ಪ್ರಮಾಣದಲ್ಲಿ ಅದು ಸಿಕ್ಕುತ್ತಿಲ್ಲ ಎಂದು ಹೇಳಿದರು. ರಾಜ್ಯದಲ್ಲಿ ನಮಗೆ ಅಂಥ ಕಷ್ಟವಿದ್ದಾಗ ಇಲ್ಲಿ ಒಂದು ಮಿಲ್ಲು ಸ್ಥಾಪನೆಯಾದುದಕ್ಕೆ ನಾವು ಅವರಿಗೆ ಅಭಿನಂದನೆ ಸಲ್ಲಿಸಬೇಕು. ಅಲ್ಲಿ ಈ ದಿವಸ 800 ಜನರಿಗೆ ಉದ್ಯೋಗ ಸಿಕ್ಕಿದೆ. ಅನೇಕ ರೈತರಿಗೆ ಅನುಕೂಲವಾಗಿದೆ. ಇದನ್ನು ಆ ನ್ಯಾಷನಲ್ ಡೆವಲಪ್‌ಮೆಂಟ್ ಕಮೀಷನ್ನಿನವರು ಅಗ್ರೋ ಬೇಸ್ಡ್ ಇಂಡಸ್ಟ್ರಿಯಲ್ಲಿ ಬರುತ್ತೆಂದು ಹೇಳಿದ್ದಾರೆ. ಮೇಲಾಗಿ ನಾವು ಅದರಲ್ಲಿ ತೊಡಗಿಸಿರುವ ಹಣಕ್ಕೇನೂ ಲೋಪವಿಲ್ಲ. ನಮ್ಮ ಮಾನ್ಯ ದೇವರಾಜ ಅರಸರ ಮಂತ್ರಿಮಂಡಲವಿದ್ದ ಕಾಲದಲ್ಲಿ ನಮ್ಮ ದೇಶದಲ್ಲಿ ಇಂಥ ಒಂದು ಬೃಹದಾಕಾರವಾದ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ವಿರೋಧ ಪಕ್ಷದ ಸದಸ್ಯನಾಗಿ ಸ್ವಾಗತ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ : ವಿರೋಧಪಕ್ಷಗಳ ಪರವಾಗಿ ಅವರಿಗೆ ಸ್ವಾಗತ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ ; ನಾನು ವೈಯಕ್ತಿಕವಾಗಿ ಅವರಿಗೆ ಈ ದೆಸೆಯಿಂದಲಾದರೂ ಸ್ವಾಗತವನ್ನು ಬಯಸುತ್ತೇನೆ ಅಂತೂ ಅವರು ಇನ್ನು ಮುಂದೆ ಸತತವಾಗಿ ಒಳ್ಳೆಯ ಕೆಲಸ ಮಾಡಲಿ ಎಂದು ಎಚ್ಚರಿಕೆಯನ್ನು ಕೊಡುತ್ತಾ, ನನಗೆ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI DODDATHIMMIAH (Golur) —Mr. Deputy Speaker Sir, we are discussing the report submitted to this House by the Public Undertakings Committee. This Committee has been duly elected by this August House and it has submitted a report and has expressed certain opinion. I congratulate the members of the committee for their frank and bold opinions which they have expressed in the report. I particularly congratulate those members who belong to the Ruling Party and who, without fear or favour, have expressed their frank opinions and arrived at certain conclusions. Sir, this Committee is the creature of this August House and it has every right to express its opinion and it has rightly expressed its opinion. But it is for the House to judge, how far the conclusions arrived at by the Committee and the opinions expressed are justifiable and how far they are correct.

(SRI DODDATMMAIAH)

The Agro Industries Corporation has invested about Rs. 15 lakhs as share amount in the Gadag Co-operative Textile Mill. This Co-operative Textile Mill is not a commercial venture, it is a co-operative venture and the policy of the Government is to encourage the cooperative movement and as far as possible to assist them. So, the question is now whether the investment made by the Agro Industries Coporation is right or just. That is a question which some of the hon. members have posed, and the Committee has expressed certain observations that the Agro Industries Coporation ought not to have invested the money in this Cooperative Textile Mill, which is not an agro-based industry. Sir, the committee is of the opinion that the Co-operative Textile Mill is or a Sppinning Mill is not the agro based industry. But now the hon. members of this House have sufficiently proved that under the N. C. D. C Act, it is recognised that cotton and the Textile come under the agro industries. The Committee ought to have got it clarified by the Government or by the concerned officers whether the Textile Mills come under the agro industries or not. The Committee unfortunately has not done it

There is another observation made by the Committee that the Corporation has taken action hastily, and they have not studied the project report and without the project report, they have taken a decision to invest money in the Mill. Sir, as the Hon. Members know that without the Project Report, the Government of India cannot sanction letter of intent for that Spinning Mill and it was deposed by the witness that there were consultation for considerably long time between the Federation of the All India Spinning Mills on the one side and Agro Industries Corporation on the other side and the Textile Co-operative Mill on another side. So, naturally after consultations informally, they must have come to a decision and quickly disposed of the transaction and they have finally agreed to invest money of Rs. 15 lakhs in that Textile Mill. Because the Committee is of the opinion that the act of the Agro Industries Corporation is wrong, therefore, they call that all the transactions have been pushed through in indecent haste. Supposing in the opinion of the Committee the act of the Agro Industries Corporation was a good one, naturally they would have appreciated it. Therefore the question of indecent haste does not arise in this transaction.

Another observation, they have made is that the Chairman has not properly scrutinised the project report and other papers and he has passed an order to invest Rs. 15 lakhs in that Mill. But as we all know Sir, the Chairman of the Corporation is one of the senior most IAS Officers of our State who served in Delhi and also the State Government for many long years, and I do not think that he has committed such an irregalarly and that without scrutinising the papers he will have passed orders for the investment of the amount.

Another observation made is that the Agro Industries Coporation has unnecessarily taken upon itself the manufacture of trusses. The trusses were made in the Agricultural Engineering Unit which was under the Directorate of the Agriculture and there was not sufficient work for that work shop and it was lying idle actually. Because it came under the Agro Industries Corporation and because there was no work, they entrusted the manufacture of trusses to that workshop. Of course, as Mr. Kagodu Thimmappa pointed outs there must not have been an order by the Textile Mill that the truss s should be manufactured. Now the point here is ; the trusse, were manufactured and supplied at a very high rate. That has resulted in the loss to the Society and gain to the Agro Industries Corporation. This aspect, our hon. friends, have completely forgotten it. Locally the trusses were munufactured at Rs. 260 each bu the Agro Industries Corporation have charged Rs. 300 each. For the transport, they have paid much higher rate. There for the society has incurred loss but the Agro Industries Corporation has gained. Therefore in this way, I do not think there is any loss to the Agro Industries Coporation or tothe Government.

5. 00. P. M.

About the bull-dozer, my hon. friend Sri Kagodu Thimmappa stated that it was given without any application of anything of that sort, and that the bull dozer work was over before the application was sent, It may be true. It was stated that there was an application for sending this bull-dozer and the application is out-dated. I feel that somebody has played mis chief in the office to bring discredit to the Minister concerned or the organisation. I do not think that an officer of the status of senior I. A. S, would have tampered with the date and attempted to show that it was out dated. I do not playedmise in it Therefore, I say that somebody in the office must have believ chief and Tried to bring discredit to the Minister Government in their interest to finish the work as quickly as possible and in the interest of doing it efficiently should not give room for irregularities and criticism by the public and this august House.

I really appreciate the work that has been done by Sri K. H. Patil I am told that a lot of societies have been brought up and are flourishing well under his leadership in Gadag. He has built up this big Industry in this backward area, which is an asset to Mysore State. support the action taken by the Government in this respect.

ಶ್ರೀ ಕೋಣದೂರು ಲಿಂಗಪ್ಪ (ತೀರ್ಥಹಳ್ಳಿ).— ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬೆಂಗಳೂರು, ಸಂಸ್ಥೆಯ ವ್ಯವಹಾರದ ಬಗ್ಗೆ ವಿಚಾರ ಮಾಡಿ ವರದಿ ಕೊಟ್ಟಿರತಕ್ಕಂತಹ ಪಬ್ಲಿಕ್ ಅಂಡರಟೇಕಿಂಗ್ಸ್ ಕಮಿಟಿಯ ಅಧ್ಯಕ್ಷರಾದ ಶ್ರೀಮಾನ್ ಭಾಸ್ಕರ ಶೆಟ್ಟರಿಗೆ ಮತ್ತು ಆ ಕಮಿಟಿಯ ಇತರ ಸದಸ್ಯರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು ಸಲ್ಲಿಸುತ್ತೇನೆ. ಅದರ ಅಧ್ಯಕ್ಷರಾದಂತಹ ಶ್ರೀಮಾನ್ ಭಾಸ್ಕರ ಶೆಟ್ಟರು ನಾಲ್ಕು ವರ್ಷಗಳ ಸಮಾಜ

(ಕೋಣಂದೂರು ಲಿಂಗಪ್ಪ)

ವಾದಿಗಳಲ್ಲ; ಅವರು ಅಜನ್ಮ ಸಮಾಜವಾದಿಗಳು. ಯಾವುದೇ ಒಂದು ಬಂಧನಕ್ಕೊಳಗಾಗದೆ ನಿರ್ವ್ಯಾಜ್ಯ ದೃಷ್ಟಿಯಿಂದ ವರದಿಯನ್ನು ಸಲ್ಲಿಸಿದರು ಅಧ್ಯಕ್ಷರಿಗೆ ಮತ್ತು ಸದಸ್ಯರುಗಳಿಗೆ ನಾನು ಹೃತ್ಪೂರ್ವಕವಾಗಿ ಅಭಿನಂದಿಸಿ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ಸ್ವತಂತ್ರ ಭಾರತದ ರಾಜಕೀಯ ಇತಿಹಾಸವನ್ನು ನೋಡಿದರೆ ಕೆಲವು ಘಟನೆಗಳು ಜ್ಞಾಪಕಕ್ಕೆ ಬರುತ್ತವೆ; ಮೊಟ್ಟಮೊದಲನೆಯದಾಗಿ ಪಂಜಾಬಿನ ಪ್ರತಾಪ ಸಿಂಗ್ ಕೈರಾನ್‌ರವರು ಅವರ ರಾಜ್ಯಕ್ಕೆ ಮಾಡಿದಂತಹ ಉಪಕಾರ ಮತ್ತು ಸೇವೆ ಎಂದೆಂದಿಗೂ ಯಾರೂ ಮರೆಯಲಾರದಂತಹವುಗಳು. ಆದರೆ ಯಾವ ಕಾರಣಕ್ಕೆ ಅವರು ಗುಂಡಿಗೆ ಬಲಿಯಾಗಿ ಸಾವನ್ನು ಅಪ್ಪಿದರು ಎಂಬುವುದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಹಾಗೆ ನಮ್ಮ ಕೃಷಿ ಸಚಿವರಾದ ಮಾನ್ಯ ಕೆ ಎಚ್ ಪಾಟೀಲರು ಗದಗ್ ಧಾರವಾರ ಅಥವಾ ಕರ್ನಾಟಕದ ಜನತೆಗೆ ಉಪಕಾರ ಮಾಡಿಲ್ಲ ವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ನಾವು ಗದಗ್ ಭಾಗದ ಅಥವಾ ಧಾರವಾರ ಭಾಗದ ಜನರಿಗೆ ಅಥವಾ ರೈತರಿಗ ವಿರೋಧಿಗ ಲ್ಲ. ಅವರಿಗೆ ಉಪಕಾರ ಮಾಡುವುದಕ್ಕೆ ಏನು ಕೆಲಸ ಮಾಡಿದರೂ ನಾವು ಮೆಚ್ಚುತ್ತೇವೆ. ಹುಲಕೋಟೆಯಲ್ಲಿ ಏನು ಮಿಲ್ ಪ್ರಾರಂಭ ಮಾಡಿದ್ದಾರೆ ಅದು ನಿರ್ವಿವಾದ ವಿಚಾರ. ಅಲ್ಲಿಯ ಜನರಿಗೆ ಅಥವಾ ರೈತರಿಗೆ ಯಾವ ವಿಧವಾದ ಸೇವೆಯನ್ನು ಸಲ್ಲಿಸಬಾರದು ಎಂಬುದು ನಮ್ಮ ವಾದವಲ್ಲ. ಏಕೆಂದರೆ ಈಗಾಗಲೇ ೨೫ ವರ್ಷಗಳಿಂದಲೂ ಆ ಭಾಗದಲ್ಲಿ ಏನೂ ಕೆಲಸ ಆಗದಿದ್ದು ದಕ್ಕೆ ವಿಷಾದ ವ್ಯಕ್ತಪಡಿಸಬೇಕಾಗಿದೆ. ಈಗಿನ ಗ ಬಗ್ಗೆ ಯಾವ ತರದ ದ್ವೇಷವೂ ನನಗೆ ಇಲ್ಲ.

ಆದರೆ ಆದ ಕ್ರಮದ ಬಗ್ಗೆ ಮಾತ್ರ ನಮ್ಮ ಆಕ್ಷೇಪ. ಇದರ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಸಿದ್ದವೀರಪ್ಪನವರು ಸ್ವಲ್ಪ ಹೊತ್ತಿನ ಮೊದಲು ಮಾತನಾಡುತ್ತಾ ಕೆ.ಎಚ್. ಪಾಟೀಲರಿಗೆ ಗುರಾಣಿಯಾಗಿ ಬಂದು ಪ್ರತಿಪಾದನೆ ಮಾಡಿದರು. ಮಾನ್ಯ ಸಿದ್ದವೀರಪ್ಪನವರು ಏನು ವಾದವನ್ನು ಮುಂಡನೆ ಮಾಡಿ ದರು ಅದನ್ನು ನಾವು ನಿರೀಕ್ಷಿಸಿರಲಿಲ್ಲ ಅವರು ಜ್ಞಾನವೃದ್ಧರು ಮತ್ತು ವಯೋವೃದ್ಧರಾಗಿದ್ದಾರೆ. ಅವರು ಇದರಲ್ಲಿ 'ಇಲ್ಲಿಗ್ಯಾಲಿಟಿ ಇದೆಯೇ. ಇರ್‍ರೆಗ್ಯುಲ್ಯಾರಿಟಿ ಇದೆಯೇ ಎಂದು ಕೇಳಿದರು. ಅಲ್ಲದರೆ ಇದರಲ್ಲಿ ಹಣ ಅಪವ್ಯಯವಾಗಿದೆಯೇ ಎಂದು ಕೇಳಿದರು, ನಿಜ. ಅವರ ಈ ಮಾತನು ಕೇಳಿದಾಗ ನನಗೆ ಒಂದು ಹಳೆಯ ಕತೆ ನೆನಪಿಗೆ ಬರುತ್ತದೆ ತಂದೆ ತಾಯಿಗೆ ಒಬ್ಬ ತರುಣ ಮಗನಿದ್ದ. ತಂದೆ ತಾಯಿಗಳು ವಯೋವೃದ್ಧರಾಗಿದ್ದರು ಮನೆಯಲ್ಲಿ ಏನೋ ಮಾತುಕತೆಯಾಗಿ ಮಗ ತಂದೆ ತಾಯಿ ಯನ್ನು ಕೊಂದು ತಾನಾಗಿಯೇ ನ್ಯಾಯಾಲಯಕ್ಕೆ ಬಂದು ನಾನು ಅನಾಥ, ನನ್ನನ್ನು ರಕ್ಷಿಸಿ ಎಂದು ಕೇಳಿಕೊಂಡನಂತೆ. ಹಾಗೆಯೇ ಇವರು ಮಾಡಿದ ಕೆಲಸ ಅಕ್ರಮವಾಗಿರುವುದರಿಂದ ಅವರ ವಿಚಾರಣೆ ಮಾಡದೆ ಅಕ್ರಮವೇಕೆ ಕ್ರಮವಾಗಿದೆ ಎಂದು ಹೇಳುತ್ತಿದ್ದಾರೆ ಸರ್ಕಾರದ ದೃಷ್ಟಿಯಲ್ಲಿ ಮತ್ತು ಕಾಂಗ್ರೆಸ್ಸಿನ ದೃಷ್ಟಿಯಲ್ಲಿ ಅಕ್ರಮವೆ ಅಕ್ರಮವಾಗಿರಬಹುದು. ಅದರಲ್ಲೂ ಹಿರಿಯ ಮಾಜಿ ಉಪಸಚಿವರಾ ಗಿದ್ದ ಪ್ರಭಾಕರವರು ನಿನ್ನೆ ಮಾಡಿದ ಭಾಷಣವನ್ನು ಕೇಳಿದಾಗ ಹಳೆಯ ಕಾಲದ ಕಾಂಗ್ರೆಸ್ಸ್ ಹೀಗೆ ಎಂದು ತೋರುತ್ತದೆ ಅದರೆ ಒಟ್ಟಿನ ಅಕ್ರಮದಲ್ಲಿ ಇವರಿಗೆ ಕ್ರಮವಾಗಿರುವುದರಿಂದ ನಾವು ಸಾರ್ವಜನಿಕ ಗಮನಕ್ಕೆ ಇದನ್ನು ತರುವುದು ನಮ್ಮ ಕರ್ತವ್ಯವಾಗಿದೆ. ಇದರಲ್ಲಿ ಕ್ರಮಬದ್ಧವಾಗಿ ಯಾವುದೂ ನಡೆದಿಲ್ಲ. ಕ್ರಮತಪ್ಪಿ ಹೋದ ಮನುಷ್ಯನನ್ನು ಅಲ್ಲಿ ಇಟ್ಟುಕೊಂಡು ಮಾಡಿದ್ದು ಕ್ರಮವಾಗಿದೆ ಎಂದು ಹೇಳುವುದು ಸರಿಯಾದು ದಲ್ಲ: ಪ್ರಜಾಪ್ರಭುತ್ವದ ಸುಸಂಸ್ಕೃತ ನಡವಳಿಕೆಯ ದೃಷ್ಟಿಯಿಂದ ಯಾರ ಮೇಲೆ ಆರೋಪ ಬರುತ್ತದೆ ಯಾರ ಮೇಲೆ ಅಕ್ರಮದ ಆರೋಪ ಬರುತ್ತದೆ, ಅಂಥವರು ತಮ್ಮ ಸ್ಥಾನವನ್ನು ಬಿಟ್ಟು ಹೋಗತಕ್ಕದ್ದು ತಕ್ಕ ಪ್ರಾಯಶ್ಚಿತ್ತ. ಈ ದೃಷ್ಟಿಯಿಂದ ನಾವು ಅವರು ರಾಜಿನಾಮೆ ಕೊಡಬೇಕೆಂದು ಕೇಳಿದ್ದೇವೆಯೇ ಹೊರತು ಬೇರೆ ದೃಷ್ಟಿಯಿಂದ ಇಲ್ಲ ಹಾಗೆಯೇ ಇಂಡಸ್ಟ್ರೀಸ್ ಬಗ್ಗೆ ನಾನು ವ್ಯಾಖ್ಯಾನವನ್ನು ಮಾಡುವು ದಕ್ಕೆ ಹೋಗುವುದಿಲ್ಲ. ಹಾಗೆಯೇ ಪಾಲಿಸಿ ಪ್ರಶ್ನೆಯನ್ನು ಪಿ ಯು. ಸಿ. ಕಮಿಟಿಯವರು ಚರ್ಚೆ ಮಾಡ ಬಹುದೇ, ಬಿಡಬಹುದೇ ಎಂಬುದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ಈಗಿನ ಆಧಿಕಾರ ದಲ್ಲಿರತಕ್ಕಂತಹ ಸರ್ಕಾರ ದುಂಷ್ಕ್ರಾ ಭ ಷ್ಟಾ, ಶಾ, ಆಯೋಗ್ಯರು ಯಾರಿದ್ದಾರೆ, ಅವರನ್ನು ರಕ್ಷಣೆ ಮಾಡತಕ್ಕ ಕನ್ನಡ, ಪಾಲಿಸಿಯನ್ನು ಇಂಗ್ಲೀಷ್ ಪಾಲಿಸಿಯನ್ನಾಗಿ ಅನುಸರಿಸಿಕೊಂಡು ಹೋಗುತ್ತಿ ದ್ದಾರೆ. ಅದರ ಬಗ್ಗೆ ನಾನು ಕೇಳುವುದಿಲ್ಲ. ಮುಖ್ಯವಾಗಿ ಇದರಲ್ಲಿ ತಮ್ಮ ಉತ್ತರ ಆರಂಭವಾಗುವ ಮುಂದೆ ಈ ಕಾರ್ಖಾನೆ ಆರಂಭವಾಗುವುದಕ್ಕೆ ಲೆಟರ್ ಆಫ್ ಇಂಟೆಂಟ್ ಇದೆಯೇ, ಲೈಸನ್ಸ್ ಇದೆಯೇ, ಇದ್ದರೆ ಅದರ ಕಾಪಿ ಕೊಡಬೇಕು. ಆ ಮೇಲೆ ಇಷರ ಶ್ಯಾರನ್ನು ಯಾವ್ಯಾವ ದಿನ ಪರ್ಚೇಸ್ ಮಾಡಿದರು? ಮತ್ತು ಇದರ ಸರ್ಕಾರೀ ಡೈರೆಕ್ಟರ್ಸ್ ಮತ್ತು ಪ್ರೈವೇಟ್ ಡೈರೆಕ್ಟರ್ ಯಾರು ಎಂಬುವರ ಒಂದು ಲಿಸ್ಟ್ ಕೊಡಬೇಕು. ಹಾಗೆಯೇ ಹಿಂದೆ ಇದ್ದಂತಹ ಡೈರೆಕ್ಟರನ್ನು ವರ್ಗಮಾಡಿದ ತಾರೀಕನ್ನು ಸಹ ಕೊಡಬೇಕು.

ಮುಖ್ಯವಾಗಿ ಶ್ರೀಮಾನ್ ಕಾಗೋಡುತಿಮ್ಮಪ್ಪನವರು ಈ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಶ್ರೀಮಾನ್ ಸಿದ್ದವೀರಪ್ಪನವರು ಪರ್ಸನಲ್ ಇಂಟರೆಸ್ಟ್ ಇದ್ದುದರಿಂದೆ ಶ್ರೀಮಾನ್ ಸಿದ್ದಲಿಂಗಯ್ಯನವರು ರಾಜೀನಾಮೆಯನ್ನು ಕೊಟ್ಟರು ಎಂದು ಹೇಳಿದರು. ಶ್ರೀಮಾನ್ ಕೆ.ಎಚ್. ಪಾಟೀಲ್ ಅವರು ನನಗೆ ಪರಮ ಮಿತ್ರರು, ಅವರ ಬಗ್ಗೆ ನನಗೆ ಅಭಿಮಾನ ಇದೆ. ಬೇರೆ ದೃಷ್ಟಿಯಿಂದ ಅವರಿಗೂ ನನಗೂ ಬಾಂಧವ್ಯ ಕೂಡ ಇದೆ. ಶ್ರೀಮಾನ್ ಕೆ. ಎಚ್. ಪಾಟೀಲ್ ಅವರಿಗೆ ಅವರ ಕುಟುಂಬದ ಇಂಟರೆಸ್ಟ್ ಇದೆ. ಅದು ಸ್ವಂತ ಇಂಟರೆಸ್ಟ್ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನಾನು ಒಂದು ವಿಷಯವನ್ನು ಮುಂಡನೆ ಮಾಡುತ್ತೇನೆ. ಡೈರೆಕ್ಟರುಗಳ ಪ್ರಮೋಟರ್‌ಗಳ ಲಿಸ್ಟ್ ನನ್ನಲ್ಲಿ ಇದೆ. ಆದರಲ್ಲಿ ನಾನು ಕೆಲವು ಹೆಸರುಗಳನ್ನು ಹೇಳುತ್ತೇನೆ. ಆದು ಈ ರೀತಿ ಇದೆ ಶ್ರೀಮಾನ್ ಡಿ. ಆರ್ ಪಾಟೀಲ್ ಆವರು ಶ್ರೀಮಾನ್ ಕೆ ಎಚ್. ಪಾಟೀಲರ ಸಂಬಂಧೀಕರಲ್ಲವೇ? ಸುಭಾಷ್ ಗೌಡರ ಕೃಷ್ಣಗೌಡ ಪಾಟೀಲ್ ಅವರು ಇವರ ಸಂಬಂಧಿಕಾರಲ್ಲವೇ? ಎಂ.ಬಿ ಮಲ್ಲಿಮುನಿ, ಪದ್ಮಾವತಿ ವೈಫ್ ಕೃಷ್ಣಗೌಡ ಪಾಟೀಲ್, ಲಿಂಗನಗೌಡ ಪಾಟೀಲ್ ವೆಂಕನಗೌಡ ಕೃಷ್ಣಗೌಡ ಪಾಟೀಲ್ ಬೊಮ್ಮನಗೌಡ ಪಾಟೀಲ್ ಎಂ. ಕೆ ಸಿಂಧೆ, ಡಿ. ಆರ್. ಪಾಟೀಲ್ ಆಫ್ ಹುಲಕೋಟಿ. ಪಿ.ಎಲ್. ಪಾಟೀಲ್, ಎಸ್. ಕೆ. ಪಾಟೀಲ್ ಇವರುಗಳೆಲ್ಲರೂ ಅವರ ಸಂಬಂಧೀಕರಲ್ಲವೆ?

ಈ ರೀತಿ ಅವರ ಕುಟುಂಬಕ್ಕೆ ಸಂಬಂಧಪಟ್ಟ ಸದಸ್ಯರು ಆರ್ಧಭಾಗ ಡೈರೆಕ್ಟರು, ಪ್ರಮೋಟರ್ಸ್ ಇರತಕ್ಕ ಸಂಸ್ಥೆಯ ಬಗ್ಗೆ ಶ್ರೀಮಾನ್ ಕೆ. ಎಚ್, ಪಾಟೀಲರಿಗೆ ಸ್ವಂತ ಇಂಟರೆಸ್ಟ್ ಇಲ್ಲ ಸ್ವಂತ ಆಸಕ್ತಿ ಇಲ್ಲ ಎನ್ನುವುದನ್ನು ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಮಂಡಿಸುವುದಾದರೆ ಇದಕ್ಕೆ ಅವರು ಯಾವರೀತಿಯ ವಿವರಣೆಯನ್ನು ಕೊಡುತ್ತಾರೆ ಎಂದು ನಾನು ಅವರನ್ನು ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಸೀಜರನ ಪತ್ನಿ ಸಂಶಯಾತೀತಳಾಗಿರಬೇಕು ಎಂದು ಹೇಳಿದ್ದಾರೆ ಅದ್ದರಿಂದ ಅವರು ಇದಕ್ಕೆ ಯಾವರೀತಿಯ ವಿವರಣೆಯನ್ನು ಕೊಡುತ್ತಾರೆ ಎಂದು ನಾನು ಕೇಳುತ್ತೇನೆ,

ಇನ್ನು ಬುಲ್ಡೋಜರ್ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ

ಉಪಾಧ್ಯಕ್ಷರು.— ನಿಮ್ಮ ಗೆಳೆಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಬಗ್ಗೆ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ,

ಶ್ರೀ ಕೋಣಂದೂರು ಲಿಂಗಪ್ಪ,— ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಈ ಸಭೆಯ ಮೇಜಿನ ಮುಂದೆ ಇಟ್ಟಿರುವ ವರದಿಯಲ್ಲಿ ಪ್ರಸ್ತಾಪ ಮಾಡಿರುವ ಕೆಲವು ವಿಚಾರಗಳನ್ನು ಇಲ್ಲಿ ನಾನು ಓದುತ್ತೇನೆ, ಅದು ಈ ರೀತಿ ಇದೆ,

Proceedings of 19-1-73. visit of the Hon. Minister for Agriculture and Forest regarding fabrication of Trusses.

The Hon. Minister for Agriculture paid a visit to the work stop on 19th January 1973 and had d scussions with the officers of he Corporation regarding the fabrication of trusses"

ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಪರೀಕ್ಷೆ ಮಾಡತಕ್ಕುದು, ಅವರಿಗೆ ಯಾವತರಹ ಕಾಗದ ಪತ್ರಗಳೂ ಇರಲಿಲ್ಲ ಎನ್ನುವುದಕ್ಕೆ ಸಾಕಷ್ಟು ದಾಖಲೆಗಳು ಇವೆ. ಮಾನ್ಯ ಮಂತ್ರಿಗಳ ಇನ್‌ಸ್ಟ್ರಕ್ಷನ್ ಮೇಲೆ ಈ ಎಲ್ಲಾ ಕೆಲಸಗಳೂ ನಡೆದಿವೆ ಎನ್ನುವುದಕ್ಕೆ ಸಾಕಷ್ಟು ಆಧಾರ ಇದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಈಗ ಏನು ಕೋಟ್ ಮಾಡಿದರು ಅದು ನಮಗೆ ಕೊಟ್ಟಿರುವ ೩ ಪುಸ್ತಕಗಳಲ್ಲಿ ಇಲ್ಲ. ಈ ಪುಸ್ತಕಗಳಲ್ಲಿ ಇಲ್ಲದೇ ಇರುವುದನ್ನು ಮಾನ್ಯ ಸದಸ್ಯರು ಕೋಟ್ ಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಈಗ ಮೂರು ಪುಸ್ತಕಗಳಿಗೆ ಸಂಬಂಧಪಟ್ಟ ಡಾಕ್ಯುಮೆಂಟಿನಿಂದ ಓದುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳತಕ್ಕ ರೆಕಾರ್ಡ್ ನಮ್ಮಲ್ಲಿ ಇಲ್ಲ. ಅವರು ಹೇಳುವುದು ಈ ಪುಸ್ತಕಗಳಲ್ಲಿ ಇಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ನಾನು ಓದುತ್ತಿರುವ ರೆಕಾರ್ಡನ್ನು ಮಾನ್ಯ ಉಪಾಧ್ಯಕ್ಷರ ಅವಗಾಹನೆಗೆ ಬೇಕಾದರೆ ಆ ಮೇಲೆ ಕಳುಹಿಸುತ್ತೇನೆ.

ಉಪಾಧ್ಯಕ್ಷರು.—ತಾವು ಓದುತ್ತಿರುವ ವಿಷಯ ಎಲ್ಲಿಂದ ಬಂತು ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಅವುಗಳು ಸುಳ್ಳು ಇವೆಯೇ ?

ಉಪಾಧ್ಯಕ್ಷರು.—ಇದು ಸುಳ್ಳು ಸತ್ಯದ ಪ್ರಶ್ನೆ ಅಲ್ಲ. ತಾವು ಹೇಳುವುದು ಸತ್ಯವಿದ್ದರೂ ಅಷ್ಟು ಇದರಲ್ಲಿ ಫಿಟನ್ ಆಗಬೇಕು. ಅದನ್ನು ಅಡ್ಮಿಟ್ ಮಾಡುವುದಕ್ಕೆ ಸ್ಕೋಪು ಇರಬೇಕು.

ಶ್ರೀ ಕೋಣಂದೂರು ಲಿಂಗಪ್ಪ.— ಇದಕ್ಕೆ ಸಂಬಂಧಪಟ್ಟ ವಿಷಯವನ್ನು ನಾನು ತಮಗೆ ಕೊಡುತ್ತೇನೆ. ಈ ಟ್ರಸಸ್ ಅನ್ನು ತಯಾರು ಮಾಡುವುದರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಅನುಸರಿಸಿದ ರೀತಿ ನೀತಿ ಏನಿದೆ ಇದರಿಂದ ನಮಗೆ ಗೊತ್ತಾಗುತ್ತದೆ, ಅವರು ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು. ಇನ್ನೊಂದು ಮಾತನ್ನು ಹೇಳುವುದಾದರೆ ಈ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯ ರಿಪೋರ್ಟ್ ಏನಿದೆ ಇದು ಯಾವುದಕ್ಕೆ ಸಾಕ್ಷಿಯಾಗಿದೆ ಎಂದರೆ ಶ್ರೀಮಾನ್ ಕೆ. ಎಚ್ ಪಾಟೀಲರು ದುರ್ರಾಳಿತ ದುರಂಧರರು ಎಂದು ಹೇಳುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಯಾವತರಹದ ಅನುಮಾನವೂ ಇಲ್ಲ ಎಂದು ಈ ವರದಿಯಲ್ಲಿ ಕಾಣುತ್ತದೆ ಈ ವರದಿಯನ್ನು ಪರಾಂಬರಿಸಿದರೆ ಶ್ರೀಮಾನ್ ಕೆ. ಎಚ್. ಪಾಟೀಲರು ಯಾವ ರೀತಿಯಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ, ಇದರಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎನ್ನುವುದರ ಬಗ್ಗೆ ಬೇಕಾದಷ್ಟು ಇದೆ. ಶ್ರೀಮಾನ್ ಕೆ. ಎಚ್. ಪಾಟೀಲರ ಟ್ರಸಸ್ ಆದ ಮೇಲೆ ಬಿಲ್ ಬಂದಿದೆ. ಆ ಬಿಲ್ಲಿನಲ್ಲಿ ಬಹಳ ಹಣವನು ದುರುಪಯೋಗ ಮಾಡುವುದಕ್ಕೆ ಹೊರಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ವರ್ಕ್ಸ್ ಷಾಪ್ ಓವರ್ ಹೆಡ್ ಇಂಟರೆಸ್ಟ್ ಆನ್ ಕ್ಯಾಪಿಟಲ್, ಅಡ್ಮಿನಿಸ್ಟ್ರೇಷನ್ ಚಾರ್ಜಸ್, ಲೂಬ್ರಿಕೇಶನ್ ಅಫ್ ಮೆಷೀನ್ಸ್ ಪ್ರಾಫಿಟ್ಸ್ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಮಂತ್ರಿಗಳು ಹೇಳಿದ್ದಾರೆ ಎಂದು ಹೇಳಿ ಅವರ ಒಂದು ಇನ್‌ಫ್ಲುಯೆನ್ಸಿಗೆ ಒಳಗಾಗಿ ಸರಿಯಾದ ಚಾರ್ಜ್ ಮಾಡದೆ ಕಡಿಮೆ ರೇಟಿನ ಬಿಲ್ಲನ್ನು ಕಳುಹಿಸುವುದರ ಮೂಲಕ ಸರ್ಕಾರಕ್ಕೆ ನಷ್ಟವಾಗಿದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು.

ಇನ್ನು ಬಹಳ ಮುಖ್ಯವಾದ ವಿಚಾರವೆಂದರೆ, ಕಾರ್ಪೊರೇಷನ್ನಿನ ರೆಜಲೂಷನ್ ಆಗುವುದಕ್ಕೆ ಮುಂಚೆಯೇ ಇದರ ಸ್ಯಾಂಕ್ಷನ್ ಆಗಿತ್ತು. ಯಾವ ತರಹದ ಲೆಟರ್ ಆಫ್ ಇಂಟೆಂಟ್ ಆಗಲೀ, ಪ್ರಾಜೆಕ್ಟ್ ರಿಪೋರ್ಟ್ ಆಗಲಿ ಇರಲಿಲ್ಲ. ಆದರೂ ಸಹ ನಾನು ಮೊದಲೇ ಹೇಳಿದಂತೆ ಸರ್ಕಾರೀ ಅಧಿಕಾರಿಗಳು ಇವರ ಒಂದು ಹಸ್ತಕ್ಷೇಪ ಮತ್ತು ಪ್ರಭಾವಕ್ಕೆ ಒಳಗಾಗಿ ಕೆಲಸ ಮಾಡಿದ್ದಾರೆಂಬುದಕ್ಕೆ ಸಾಕಷ್ಟು ರುಜು ವಾತುಗಳು ಇದರಲ್ಲಿ ಇವೆ. ಆದ್ದರಿಂದ ಈ ಒಂದು ವರದಿಯನ್ನು ಅವಲೋಕನ ಮಾಡಿದಾಗ ಒಂದು ಅಂಶ ಎದ್ದು ಕಾಣುವುದೇನೆಂದರೆ, ಹೋಗಿರತಕ್ಕಂಥ ಕ್ರಮ ಸರಿಯಾಗಿಲ್ಲ ಎಂಬುದು. ಮಾನ್ಯ ಕೆ. ಎಚ್ ಪಾಟೀಲರು ಬಹಳ ದಕ್ಷರು, ಬಹಳ ವೇಗವಾಗಿ ಕೆಲಸ ಮಾಡಿದ್ದಾರೆ ಅದಕ್ಕಾಗಿ ಬಹಳ ಜನ ಅವರ ಬಗೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ವ್ಯಕ್ತಪಡಿಸಿಲಿ, ಸಂತೋಷ ಈ ಒಂದು ಕಾರ್ಖಾನೆ ಆಗುವುದರ ಬಗ್ಗೆ ನನ್ನ ವಿರೋಧವೂ ಸಹ ಏನೂ ಇಲ್ಲ. ಆದರೆ ಮಾಡಿದ ಕ್ರಮ ಸಂಪೂರ್ಣವಾಗಿ ಕ್ರಮ ಮೀರಿ ಹೋಗಿರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಯಾವುದೇ ಅಸಂಸ್ಕೃತ ಭಾಷೆಯನ್ನು ಈ ವಿಷಯದಲ್ಲಿ ಉಪಯೋಗ ಮಾಡುವುದಕ್ಕೆ ಹೋಗದೆ ರಾಜೀನಾಮೆ ಕೊಡುವುದು ಅತ್ಯಂತ ಅವಶ್ಯಕವೆಂದು ಹೇಳುತ್ತೇನೆ.

ಉಪಾಧ್ಯಕ್ಷರು. —ತಮ್ಮ ಸಮಯ ಮುಗಿಯಿತು ,

ಶ್ರೀ ಕೋಣಂದೂರು ಲಿಂಗಪ್ಪ.— ನಮಗೆ ಈಗ ಒದಗಿಸಿರುವ ೩ ಪುಸ್ತಕಗಳನ್ನು ಬಿಟ್ಟು ಬೇರೆ ಯಾವುದೇ ಆಧಾರ ಇಟ್ಟುಕೊಂಡು ಹೇಳಬಾರದೆಂದು ತಾವು ಹೇಳಿದಿರಿ. ಆದರೂ ಇರತಕ್ಕಂಥ ಆಧಾರಗಳನ್ನೇ ನೋಡುವುದಾದರೂ ಸಹ ಪ್ರತಿಯೊಂದು ವ್ಯವಹಾರದಲ್ಲಿಯೂ ಅಕ್ರಮ ನಡೆದಿದ್ದೆ, ಸರ್ಕಾರೀ ಅಧಿಕಾರಿಗಳನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ, ಅಷ್ಟೇ ಅಲ್ಲ, ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಹಣದ ದುರುಪಯೋಗವಾಗಿದೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ, ಮಾನ್ಯ ಕೆ. ಎಚ್. ಪಾಟೀಲರು ನಮ್ಮ ರಾಜ್ಯದ ಅರಣ್ಯ ಸಚಿವರಾಗಿದ್ದಾರೆ ಅವರು ಸಚಿವರಾದ ನಂತರ ಎಲ್ಲ ಸವಲತ್ತುಗಳು ಸರ್ಕಾರದಿಂದ ಸಿಕ್ಕಿವೆ. ಸರ್ಕಾರದ ವತಿಯಿಂದ ಪೋನಿನ ಸೌಲಭ್ಯ ಸಿಕ್ಕಿದೆ, ಇದರ ಜೊತೆಗೆ ಈ ಕಾರ್ಪೊರೇಷನ್ನಿನ ಮೂಲಕ ಕೂಡ ಒಂದು ಪೋನು ಇದೆ. ಇದರ ನಂ. ೨೪೮೮೩, ಈ ಪೋನ್ ಮಾನ್ಯ ಕೆ. ಎಚ್. ಪಾಟೀಲರ ಹೆಸರಿನಲ್ಲಿದೆ. ಇದರ ಜೊತೆಗೆ ಸರ್ಕಾರದ ಕಡೆಯಿಂದ ಇವರ ಸಹಾಯಕ್ಕಾಗಿ ಸ್ಟೆನೋಗ್ರಾಫರ್ಸ್ ಇದ್ದರೂ ಸಹ ಕಾರ್ಪೊರೇಷನ್ನಿನ ಖರ್ಚಿನಿಂದ ಮತ್ತೊಬ್ಬ ಸ್ಟನೋಗ್ರಾಫರನ್ನು ಇಟ್ಟುಕೊಂಡಿದ್ದಾರೆ, ಇದು ಅವ್ಯವಹಾರವಲ್ಲವೇ ? ಅದು ಅಕ್ರಮ ನಡೆವಳಿಕೆಯಲ್ಲವೆ ? ಇದೊಂದೇ ಕಾರಣ ಸಾಕು, ಇವರು ರಾಜೀನಾಮೆ ಕೊಡುವುದಕ್ಕೆ ;

ಉಪಾಧ್ಯಕ್ಷರು.—ತಾವು ಮುಗಿಸಿಬಿಡಿ.

ಶ್ರೀ ಕೋಣಂದೂರು ಲಿಂಗಪ್ಪ.— ಇನ್ನೂ ಕೆಲವು ವಿಷಯಗಳನ್ನು ಹೇಳುವುದಕ್ಕೆ ತಾವು ನನಗೆ ಅನುಮತಿ ಕೊಟ್ಟಿದ್ದರೆ ಇವರು ಎಷ್ಟೊಂದು ಅವ್ಯವಹಾರ ನಡೆಸಿದ್ದಾರೆಂಬುದನ್ನು ಈ ಸಭೆಯ ಗಮನಕ್ಕೆ ಮನದಟ್ಟು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ನಾನು ಹೇಳದಿದ್ದರೂ ಸಹ ವಿಷಯವೆಲ್ಲಾ ನನಗೆ ಮನದಟ್ಟಾಗಿದೆ, ಮಾನ್ಯ ಸಭೆಗೆ ಮನದಟ್ಟಾಗಿದೆ, ಮತ್ತು ಮಾನ್ಯ ಕೆ. ಎಚ್. ಪಾಟೀಲ್ಲರಿಗೆ ಮನದಟ್ಟಾಗಿದೆ. ಈ ತಪ್ಪಿಗೆ ಪ್ರಾಯಶ್ಚಿತವೆಂದರೆ ಮಾನ್ಯ ಸಚಿವರು ತಮ್ಮ ಪದವಿಗೆ ರಾಜೀನಾಮೆ ಕೊಡುವುದೊಂದೇ ದಾರಿ, ಅದರಂತೆ ಅವರು ರಾಜೀನಾಮೆ ಕೊಡುತ್ತಾರೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪ್ರಭುರಾಜ್ ಪಾಟೀಲ್—(ಯಲಬುರ್ಗಾ) ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರ ಮೂರು ಅಪಾದನೆಗಳನ್ನು ಈ ಸಭೆಯ ಮುಂದೆ ಇರಿಸಿದ್ದಾರೆ. ಮೊದಲನೆಯದೆಂದರೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ಅವರ ಕಕ್ಷೆಗೆ ಮೀರಿ ಆಗ್ರೋ ಬೇಸ್ಟ್ ಅಲ್ಲದ ಸಂಸ್ಥೆಯಲ್ಲಿ ಹಣ ತೊಡಗಿಸಿದ್ದಾರೆಂಬುದು. ಎರಡನೆಯದೆಂದರೆ, ಇಂಡೀಸೆಂಟ್ ಹೇಸ್ಟ್ ಆದ ಕಾರ್ಯಕ್ರಮವಾಗಿದೆ ಎಂದು. ಮೂರನೆಯದಾಗಿ, ಸಂಬಂಧಪಟ್ಟ ಮಂತ್ರಿಗಳಿಂದ ಅಧಿಕಾರ ದುರುಪಯೋಗವಾಗಿದೆ ಎಂಬುದು. ಈ ಮೂರು ಅಪಾದನೆಗಳು ಈ ಸಮಿತಿಯವರ ವರದಿಯ ಆಧಾರವನ್ನು ಅವಲಂಬಿಸಿದೆ ಸಾರ್ವಜನಿಕ ಉದ್ಯಮ ಸಮಿತಿಯ ಸದಸ್ಯನಾಗಿ ಒಂದೆರಡು ಮಾತುಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಈ ಪ್ರಸ್ತುತ ವಿಷಯ ಈ ಸಮಿತಿಯ ಮುಂದೆ ವಿಚಾರಣೆಗೆ ಬಂದಾಗ ದುರ್ದೈವದಿಂದ ನಾನು ಶಸ್ತ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಬೇಕಾಯಿತು. ಆದಕಾರಣ ನಾನು ಈ ವಿಚಾರಣೆಯಲ್ಲಿ ಭಾಗವಹಿಸುವುದಕ್ಕಾಗಲಿಲ್ಲ. ಆದರೂ ಕೂಡ ನನಗೆ ಪ್ರಥಮ ಅವಕಾಶ ಸಿಕ್ಕಿದಾಗ, ಅಂದರೆ ತಾ|| ೧೫-೬-೧೯೭೩ ರಂದು ನಡೆದ ಮೀಟಿಂಗ್‌ನಲ್ಲಿ ಭಾಗವಹಿಸಿದಾಗ, ನೀವು ನಡೆಸಿದ ವಿಚಾರಣೆ ನಿಯಮಗಳಿಗೆ ಅನುಸಾರವಾಗಿ ಆಗಿಲ್ಲ ಎಂದು ಹೇಳಿದೆ. ಮತ್ತು ನನಗೆ ತಿಳಿದಂತಹ ವಿಷಯಗಳನ್ನು ಹೇಳಿದೆ, ನನ್ನ ಮಾತಿನ ತಾತ್ಪರ್ಯವಾದರೂ ಇಷ್ಟೆ. ಈ ಸಮಿತಿಯ ಚೇರ್‌ಮನ್ ಆದಂತಹ ಮಾನ್ಯ ಭಾಸ್ಕರಶೆಟ್ಟಿ ಅವರ ವ್ಯಕ್ತಿತ್ವದ ಬಗ್ಗೆ, ಯೋಗ್ಯತೆಯ ಬಗ್ಗೆ ನನಗೆ ಸಾಕಷ್ಟು ಆದರವಿದೆ ಆದರೆ ಪ್ರಸ್ತುತ ವಿಷಯದಲ್ಲಿ ಎಲ್ಲೋ ಅಚಾತುರ್ಯವಾಗಿದೆ ಎಂದು ನಾನು ನಿರ್ವಿವಾದವಾಗಿ ಹೇಳಬಲ್ಲೆ. ಮೊಟ್ಟ ಮೊದಲನೆಯದಾಗಿ ನಮ್ಮ ಸಮಿತಿಯು ಎರಡು ವಿಷಯಗಳಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ನಡೆದಿದೆ ಎಂದು ಭಾವಿಸುತ್ತೇನೆ. ಮೊದಲನೆಯದಾಗಿ ಸ್ಪೀಕರ್ ಅವರು ಮಾನ್ಯ ದೇವೇಗೌಡರಿಗೆ ಆಶ್ವಾಸನೆ ಕೊಟ್ಟಂತೆ ಈ ವಿಷಯನ್ನು ನಾನು ವಿಚಾರಿಸುತ್ತೇನೆಂದು ಹೇಳಿದರೆ ಹೊರತು ಪಿ.ಯು.ಸಿ.ಗೆ ರೆಫರ್ ಮಾಡುತ್ತೇನೆಂದು ಹೇಳಲಿಲ್ಲ. ಮುಂದೆ ಅವರು ಈ ವಿಷಯನ್ನು ವಿಚಾರಣೆ ಮಾಡಿ ಒಂದು ವರದಿಯನ್ನು ಕೊಡಿ ಎಂದು ಸಾರ್ವಜನಿಕ ಉದ್ಯಮ ಸಮಿತಿಯವರನ್ನು ಕೇಳಿಕೊಳ್ಳಲಿಲ್ಲ. ಮತ್ತು ರೆಫರ್ ಕೂಡ ಮಾಡಲಿಲ್ಲ. ಅದಕ್ಕಾಗಿ ಈ ಸಮಿತಿಗೆ ವಿಚಾರಣೆ ಮಾಡತಕ್ಕ ಹಕ್ಕು ಹುಟ್ಟಲಿಲ್ಲ ಎಂಬುದು ನನ್ನ ಮೊದಲನೆಯ ವಾದ. ಎರಡನೆಯದಾಗಿ ಇದು ಆಗ್ರೋ ಬೇಸ್ಟ್ ಇಂಡಸ್ಟ್ರಿ ಹೌದೇ ಅಥವಾ ಅಲ್ಲವೇ ಎಂಬ ಬಗ್ಗೆ ತೀರ್ಮಾನ ತೆಗೆದು ಕೊಳ್ಳುವಲ್ಲಿ ನಮ್ಮ ಸಮಿತಿಯು ತನ್ನ ಅಧಿಕಾರ ಕಕ್ಷೆಯನ್ನು ಮೀರಿ ವರ್ತಿಸಿದೆ ಎಂಬುದು ನನ್ನ ವಾದ. ಈಗತಾನೆ ಮಾನ್ಯ ಸಿದ್ದವೀರಪ್ಪನವರು ಮಾತನಾಡುತ್ತಾ ಹೇಳಿದರು, ಇದು ಪಾರ್ಲಿಮೆಂಟ್ ಆಕ್ಟ್‌ನಲ್ಲಿದೆ ಎಂದು. ಮಾನ್ಯ ಮುಖ್ಯಮಂತ್ರಿಗಳು ಸಹ ಮೊದಲನೆಯ ತಮ್ಮ ವಾದವನ್ನು ಇದರ ಬಗ್ಗೆ ಮಂಡಿಸುತ್ತಾ, ಇದು ಸರ್ಕಾರದ ನಿಯಮಕ್ಕೆ ಸಂಬಂಧಿಸಿದ ವಿಷಯ ಎಂದು ಹೇಳಿದ್ದಾರೆ. ಈ ವಿಷಯವನ್ನು ನಮ್ಮ ಸಮಿತಿಯವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಇದು ಆಗ್ರೋ ಬೇಸ್ಟ್ ಇಂಡಸ್ಟ್ರಿ ಹೌದೇ ಅಥವಾ ಇಲ್ಲವೇ ಎಂಬ ಬಗ್ಗೆ ನಮ್ಮ ಸಮಿತಿಯವರೇ ಈ ರೀತಿ ಹೇಳಿದ್ದಾರೆ.

> "The Chairman of the Corporation further stated that the phrases" agro-based industry "has not been defined. In the circumstances, the committe are of the opinion that a textile mill cannot be considered an agro-based industry."

ಈ ರೀತಿ ನಮ್ಮ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆಯೇ ಹೊರತು ಇದಕ್ಕೆ ಏನಾದರು ಆಧಾರ ಇದೆಯೋ ಎಂಬುದನ್ನು ವ್ಯಕ್ತಪಡಿಸಲಿಲ್ಲ.

(ಶ್ರೀ ಪ್ರಭುರಾಜ ಪಾಟೀಲ್)

ಇದಕ್ಕಾಗಿ ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರು ಪಾರ್ಲಿಮೆಂಟು ಆಕ್ಟನ್ನು ತೋರಿಸಿ ಅದರಲ್ಲಿ ಆಗ್ರೋಬೇಸ್ಡ್ ಇಂಡಸ್ಟ್ರೀ ಯಾವುದು ಎನ್ನುವ ವಿಷಯವನ್ನು ಸರಕಾರವೇ ಹೇಳಬೇಕಾಗಿದೆ. ಬೇರೆ ಯಾರೂ ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ. ಇದರ ಬಗ್ಗೆ ನಮ್ಮ ವಿರೋಧ ಪಕ್ಷದವರು ಅಗ್ರೋ ಬೇಸ್ ಇಂಡಸ್ಟ್ರೀ ಯಾವುದು ಎಂದು ಇಲ್ಲಿ ಹೇಳಲು ಒತ್ತಾಯಪಡಿಸಲಿಕ್ಕೆ ಆಗುವುದಿಲ್ಲ. ನಮ್ಮ ಮಾನ್ಯ ಮಂತ್ರಿಗಳು ಅಗ್ರೋ ಬೇಸ್ಡ್ ಇಂಡಸ್ಟ್ರಿ ಯಾವುದು ಎಂದು ಸ್ಪಷ್ಟ ಪಡಿಸಿದ ಮೇಲೆ ಮತ್ತೆ ಈ ವಿಷಯದ ಮೇಲೆ ಕೈ ಹಾಕಬಾರದಾಗಿತ್ತು. ಅಲ್ಲದೆ ಇದರ ಬಗ್ಗೆ ವಿವರಗಳನ್ನು ಪಡೆಯಲು ಸಮಿತಿಯವರು ಮಂತ್ರಿಗಳನ್ನು ಕೇಳಿ ಅವರಿಂದ ವಿವರಣೆ ಪಡೆಯಬಹುದಾಗಿತ್ತು. ಯಾವಾಗ ಒಂದು ಆಪಾದನೆಯನ್ನು ಮಾಡಬೇಕಾದರೂ ಅಂತಹ ಆಪಾದನೆ ಬರುವವರಿಂದ ವಿವರಣೆಯನ್ನು ಕೇಳಲು ಆಸ್ಪದ ಕೊಡಬೇಕಾಗಿತ್ತು. ಕಾಯಿದೆ ದೃಷ್ಟಿಯಿಂದ ನೋಡುವಾಗಲೂ ಇದು ನ್ಯಾಚ್ಯುರಲ್ ಜಸ್ಟಿಸ್ ಆಗುತ್ತದೆ. ಆದುದರಿಂದ ಕಾಯಿದೆ ದೃಷ್ಟಿಯಿಂದ ಇದಕ್ಕೆ ಮನ್ನಣೆ ಇದೆ ಎಂದು ಅವರೂ ಒಪ್ಪಿಕೊಳ್ಳುತ್ತಾರೆ. ಆರೋಪಿಗೆ ಅವನ ವಿವರಣೆಯನ್ನು ಹೇಳಲು ಆಸ್ಪದ ಕೊಡಬೇಕು. ಇಲ್ಲಿ ಒಬ್ಬರು ಮಂತ್ರಿಗಳ ಮೇಲೆ ಹೇಳುವಾಗ ಅವರಿಗೆ ಇದರ ಬಗ್ಗೆ ವಿವರಣೆ ಕೊಡಲು ಆಸ್ಪದ ಕೊಡಬೇಕಾಗಿತ್ತು.

೫-೩೦ ಪಿ.ಎಂ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಇದರಲ್ಲಿ ಒಬ್ಬರು ಸದಸ್ಯರಾಗಿದ್ದವರು. ರೂಲ್ಸ್‌ನಲ್ಲಿ ಇದು ಸ್ಪಷ್ಟವಾಗಿದೆ.

"A Minister is not called upon to give evidence before the Committee."

ಇದು ನಮ್ಮ ಹಿಂದಿನ ವರದಿ. ಮಾನ್ಯ ಸದಸ್ಯರು ಸರಿಯಾಗಿ ಓದಿಕೊಂಡು ಇಲ್ಲಿ ಹೇಳಬೇಕು. ನಮಗೂ ಅವರ ಮೇಲೆ ಅಪಾರ ಗೌರವವಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಪ್ರಭುರಾಜ ಪಾಟೀಲ್.—ಮಾನ್ಯ ಚೇರ್ಮನ್ನರವರು ಇಲ್ಲಿ ಹೇಳಿದ ಪ್ರಕಾರ ನಾವು ಅವರಿಂದ ಯಾವ ರೀತಿಯಿಂದಲಾದರೂ ವಿವರಣೆಯನ್ನು ಕೇಳಬಹುದಾಗಿತ್ತು. ಅವರನ್ನು ಕರಿಸಿಯೇ ಕೇಳಬೇಕೆಂದು ಹೇಳುತ್ತಿಲ್ಲ. ಅವರಿಂದ ವಿವರಣೆಯನ್ನು ಪಡೆದು ಇದರ ಬಗ್ಗೆ ಮುಂದೆ ಯಾವ ರೀತಿ ಮಾಡಬಹುದು ಎಂದು ಯೋಚನೆ ಮಾಡಲು ಅವಕಾಶವಿತ್ತು. ಮಂತ್ರಿಗಳನ್ನು ಕರೆಯಬಾರದು ಎಂದಿದ್ದರೂ ಅವರಿಂದ ಬೇಕಾದ ವಿವರಣೆಗಳನ್ನು ಪಡೆಯಲು ಅಥವಾ ಕ್ಲಾರಿಫಿಕೇಷನ್‌ಗಳನ್ನು ಪಡೆಯಲು ಅನೇಕ ಮಾರ್ಗಗಳಿವೆ, ಆದರೆ ಇದರಲ್ಲಿ ಸಾಕಷ್ಟು ಆಸ್ಪದ ಕೊಡಲಿಲ್ಲ, ಇದರಿಂದಾಗಿ ಅವರು ಇಲ್ಲಿ ವಿವರಗಳನ್ನು ಕೊಡಲಾಗಲಿಲ್ಲ ಎಂದು ಹೇಳಬಯಸುತ್ತೇನೆ.

ಪ್ರಸ್ತುತ ಇಲ್ಲಿ ಆಗ್ರೋ ಬೇಸ್ಡ್ ಇಂಡಸ್ಟ್ರಿ ಎಂದು ಹೇಗೆ ನಿರ್ಣಯ ಮಾಡಿದರು ಇದನ್ನು ಇಂಡೀಸೆಂಟ್ ಹೇಸ್ಟ್ ಆಗಿ ಏಕೆ ಮಾಡಿದರು ಎಂದು ಇವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಈ ವರದಿಯ ಪ್ಯಾರಾ ೧೩ ರಲ್ಲಿ ಹೀಗೆ ಹೇಳುತ್ತಾರೆ,

This subject was considered by the Board on the very next day, *i.e.* 22nd December 1972........

ಹಿಂದೆ ಇವರ ಬಗ್ಗೆ ಒಂದೇ ರೆಸಲ್ಯೂಷನ್ ಕೂಡ ಪಾಸು ಮಾಡಿದ್ದಾರೆ. ಆ ರೆಸಲ್ಯೂಷನ್ ಈ ರೀತಿ ಇದೆ

"It was resolved to invesr a sum of Rs. 15, 00, 000 subject to availability of finances, examination of the project report and other relevant data............"

ಇನ್ನು ಇದರ ರೆಲವೆಂಟು ಡ್ಯಾಟಾ ಯಾವ ರೀತಿಯಾಗಿ ಕೊಡಬೇಕು ಮತ್ತು ಇದರ ಫೈನಾನ್ಸಸ್ ಯಾವ ರೀತಿ ಇರಬೇಕು ಎನ್ನುವುದರ ಬಗ್ಗೆ ಒಂದು ರೆಸಲ್ಯೂಷನ್ ಕೂಡ ಪಾಸು ಮಾಡಿದ್ದಾರೆ, ಮುಂದೆ ಸರಕಾರದವರು ಇತರ ನಿಯಮದ ಪ್ರಕಾರ ನೋಟಿಫಿಕೇಷನ್ ಮುಖಾಂತರ ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಇದು ಪುಟ ೪ ರಲ್ಲಿದೆ.

"The Government (D.H.P.C. Department) issued Notification No. DPC 14-CIM 73 on 3rd February 1973 permitting investment upto Rs. 15 lakhs in all Co-operative textile mills........."
ಇದು ಸರಕಾರದ ವಾದವನ್ನು ಚೆನ್ನಾಗಿ ಪುಷ್ಟೀಕರಿಸುತ್ತದೆ. ಮುಂದೆ ಪುಟ ೬ ರಲ್ಲಿ ಅಗ್ರಿಕಲ್‌ಚರು ಇಂಡಸ್ಟ್ರೀಸ್‌ಗಳ ಬಗ್ಗೆ ಹೀಗೆ ಹೇಳಿದ್ದಾರೆ.

> "The Project Report is stated to have been prepared by the technical consultants of the All India Federation of Co-operative Spinning Mills........"

ಟೆಕ್ನಿಕಲ್ ಪ್ರಾಜೆಕ್ಟ್ ರಿಪೋರ್ಟು ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ಇವೆಲ್ಲವನ್ನೂ ನೋಡಿ ಇಲ್ಲಿ ಹಣ ತೊಡಗಿಸುವಾಗ ಇವನ್ನು ಅವಸರವಾಗಿ ಇಂಡೀಸೆಂಟ್ ಜೇಸ್ಟಾಗಿ ಮಂತ್ರಿಗಳು ಮಾಡಿದರು ಎಂದು ಮಾನ್ಯ ಮಂತ್ರಿಗಳು ಮಾಡಿರುವ ಅಕ್ರಮ ಎಂದು ಹೇಳಲಿಕ್ಕಾಗುವುದಿಲ್ಲ. ಕಾಯಿದೆ ಪ್ರಕಾರ ಕೆಲಸಗಳನ್ನು ಮಾಡುವಾಗ ಇಲ್ಲಿನ ಜನರಲ್ ಮ್ಯಾನೇಜರಿಗೆ ಬೇಗ ಕೆಲಸಗಳನ್ನು ಮಾಡಲು ಸೂಚನೆಗಳನ್ನು ಕೊಟ್ಟರೆ ಅದೇನೂ ತಪ್ಪಾಗುವುದಿಲ್ಲ, ಆದಷ್ಟು ಬೇಗ ಕಾರ್ಯ ಪೂರ್ತಿ ಮಾಡಬೇಕು ಎಂದು ಹೇಳಿದರೆ ಅದು ಅದಕ್ಷತೆಯಾಗುವುದಿಲ್ಲ. ಅವರ ಕರ್ತವ್ಯ ಮಾಡುವುದರಲ್ಲಿ ಈ ರೀತಿ ಮಾಡಿದರೆ ಅದು ಅಕ್ರಮವಾಗುವುದಿಲ್ಲ, ಕೆಲವು ವೇಳೆ ಕೆಲಸಗಳನ್ನು ಮಾಡುವಾಗ ಬಹಳ ಚುರುಕಿನಿಂದ ನಮ್ಮ ಮಂತ್ರಿಗಳು ಕೆಲಸ ಮಾಡಿದರೆ ಅದು ಅಕ್ರಮವಾಗುವುದಿಲ್ಲ. ನಮ್ಮ ಮಂತ್ರಿಗಳು ಅನೇಕ ಕಡೆಗಳಲ್ಲಿ ಇದೇ ರೀತಿ ಅನೇಕ ಕಾರ್ಯಕ್ರಮಗಳನ್ನು ಮಾಡಿ ಕೆಲಸಗಳನ್ನು ಪೂರೈಕೆ ಮಾಡಲು ಸಹಾಯ ಮಾಡಿದ್ದಾರೆ, ಈಚೆಗೆ ಬೀಜಗಳನ್ನು ರೈತರಿಗೆ ಹಂಚುವಾಗ ಎರಡು ತಿಂಗಳಲ್ಲೇ ಆದಷ್ಟು ಹೆಚ್ಚು ರೈತರಿಗೆ ಉಪಯೋಗವಾಗಬೇಕೆಂದು ಬೀಜಗಳನ್ನು ರೈತರಿಗೆ ಹಂಚಿದ್ದಾರೆ. ಇದುವರೆಗೆ ಸಳೆದ ಮೂರು ತಿಂಗಳಲ್ಲಿ ನಮ್ಮ ರಾಜ್ಯಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಬೆಳೆಬಾಳುವ ಬೀಜಗಳನ್ನು ಈಗಾಗಲೇ ಹಂಚಿದ್ದಾರೆ. ಇಂತಹ ಅನೇಕ ಉಪಯೋಗವಾಗುವಂತಹ ಕಾರ್ಯಗಳನ್ನು ನಮ್ಮ ಮಂತ್ರಿಗಳು ವ್ಯವಸಾಯ ಇಲಾಖೆಯಲ್ಲಿ ಮಾಡಿದ್ದಾರೆ. ಇದನ್ನು ಬೇಗನೆ ಮಾಡಬೇಕೆಂದು ಮಾಡಿದರೆ ಇದನ್ನು ಅಕ್ರಮ ಎಂದು ಹೇಳಲಿಕ್ಕೆ ಬರುವುದಿಲ್ಲ, ಇಂತಹ ಒಳ್ಳೆಯ ಕೆಲಸಗಳನ್ನು ಬೇಗನೆ ಮಾಡಿ ರೈತರಿಗೆ ಸಹಾಯ ಮಾಡಿರುವುದಕ್ಕಾಗಿ ಅವರಿಗೆ ನಮ್ಮ ಅಭಿನಂದನೆಗಳನ್ನು ನಾವು ಸಲ್ಲಿಸಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್ ಕಬಾಡಿ : (ಬಳ್ಳೊಳ್ಳಿ)

ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಆಡಳಿತದ ವರದಿ ಪ್ರಕಾರ ಸಾಕಷ್ಟು ಆರೋಪಣೆಗಳನ್ನು ಈಗಾಗಲೇ ಸದಸ್ಯರುಗಳು ಮಾಡಿದಾರೆ. ಇದರಲ್ಲಿ ಮಾನ್ಯ ಮಂತ್ರಿಗಳ ಮೇಲೆ ಮಾಡಿರುವ ಆರೋಪಗಳು ಬಯಲಿಗೆ ಬಂದು ಸಾಬೀತಾಗಿವೆ. ಇದೊಂದು ಲೆಜಿಸ್ಲೇಚರು ಕಮಿಟಿ, ಇದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನಾವು ಕೊಡಬೇಕಾಗುತ್ತದೆ ಎನ್ನುವ ಮಾತನ್ನು ನಾನು ತಿಳಿದು ಕೊಂಡಿದ್ದೇನೆ. ಆದರೆ ಒಬ್ಬ ಮಂತ್ರಿಗಳು ಮಂತ್ರಿಮಂಡಲದಲ್ಲಿದ್ದಾಗ ಎಂದರೆ ಈ ಹಿಂದೆ ನಮ್ಮ ಮಂತ್ರಿಮಂಡಲದಲ್ಲಿದ್ದ ಶ್ರೀಮಾನ್ ಕಿತ್ತೂರವರ ಮೇಲೆ ಯಾವ ಆರೋಪಗಳೂ ಇಲ್ಲದೇ ಇದ್ದರೂ ಅವರನ್ನು ಮಂತ್ರಿಮಂಡಲದಿಂದ ತೆಗೆಯಲಾಯಿತು, ಇದರ ಬಗ್ಗೆ ಸರಕಾರದವರಲ್ಲಿ ಒಂದು ಪ್ರಶ್ನೆ ಕೇಳಿದಾಗ ಸರಕಾರದ ಅಭಿಪ್ರಾಯ ಯಾವ ರೀತಿ ಬಂತು ಎಂದರೆ ಇದಕ್ಕೆ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರು ಉತ್ತರ ಕೊಡುತ್ತಾ ಸೀಸರನ ಹೆಂಡತಿ ಅನುಮಾನಾತೀತವಾಗಿರಬೇಕು ಎಂದು ಏನು ಅನ್ನುತ್ತಾರೋ ಹಾಗೆ ಮಾನ್ಯ ಮಂತ್ರಿಗಳಾದ ಶ್ರೀ ಕಿತ್ತೂರ ಬಗ್ಗೆನು ಆಯಿತು ಎಂದು ಹೇಳಿದರು. ಅವರ ಸಂಶಯಾತೀತರಾಗಿದ್ದರೂ ಅವರನ್ನು ತೆಗೆಯಲಾಯಿತು. ಇಲ್ಲಿ ನಮ್ಮ ಮಾನ್ಯ ವ್ಯವಸಾಯ ಮಂತ್ರಿಗಳು ಮಾಡಿರುವ ಅವ್ಯವಹಾರಗಳು ಸಾಬೀತಾಗಿದ್ದು ಮತ್ತು ಇವರ ಮೇಲೆ ಬಂದಿರುವ ಆರೋಪಗಳು ನಿಜವಾಗಿವೆ ಎಂದು ಎಲ್ಲರಿಗೂ ತಿಳಿದಿರುವಾಗ ಮಾನ್ಯ ವ್ಯವಸಾಯ ಮಂತ್ರಿಗಳು ಇಲ್ಲಿ ರಾಜೀನಾಮೆ ಕೊಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ ಆ ರೀತಿ ಮಾಡುವವರೆಂದು ಆಶಿಸುತ್ತೇನೆ. ಇಷ್ಟು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI M. R. JAYARAM (Devanahalli):—Mr. Deputy Speaker the report of the Public Undertakings Committee on the working of Mysore State Agro-Industries Corporation is before us.

(SRI M. R. JAYARAM)

Some of the main points that we see today is that the amount pail by the Corporation to the Co-operative society, about 15 lakhs is proper and whether purpose of the loan was to help an agro based industry. Here I woulde like to make one point very clear, that the Public Undertaking C mm ttee cannot go into the fact because it is policy decision of the Government. It is not a decision by Sri K. H. Patil, but it is decision of the Government And the Public Undertakings Committee cannot in any way deviate from this policy and give its verdict.

Secondly, they have pin-pointed on the Minister and said that it has been very indecent heste As our Hon Minister Sri Siddaveerappa has already mentioned, it should have been undue hasty instead of in decent haste. We must understand that to start a co-operative institution within the course of one year and to bring it to this tage, it is rather very very difficult and I feel it is probably the first of its kind in whole of India. Sir, in a private industry today, even big industrialist like TATAS or BIRLAs they take three to four years to get the project report prepared and then collecting finances. But here, a co-operative institution coming up, collecting such huge amounts by way of shares and doing it in dynamic speed, only shows how our Government is interested in bringing up the co-operative sector and develop co-operative sector. I feel that it is one step in fulfilling our promise made to the people that we are going to usher in a socialistic pattern of society. This is only the first step and it is an indication that we are going to do some more industries in the co-operative sector. Therefore, I feel there is not much force in what our friends have said. These things should not be judged by the letter of the law but by the results and the beneficial results it will produce for the common man They have to think of this in the larger perspective of the good of the common man. It is going te help the development of that particular area which is a very backword area and the people of that area are bound to welcome this venture. All these things have to be considered before we try to pass our judgement on this issue. Therefore Sir, my humble submission is even some of our friends on the opposite have offered consructiive criticism and they have appreciated this point very cleary. My submission is that whatever action that is taken by the Government is correct and with this I close duly thanking the chair for giving me an opportunity to speak.

MR. DEPUTY SPEAKER :—Mr. Bangarappa is not here Sri Byre-Gowda may speak request him to note the time limitation

† ಶ್ರೀ ಸಿ. ಬೈರೇ ಗೌಡ (ವೇಮಗಲ್) ಅಧ್ಯಕ್ಷರೇ, ಈ ಹೊತ್ತು ಮತ್ತು ನಿನ್ನೆಯ ದಿವಸ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಸಮಿತಿಯ ವರದಿಯನ್ನು ಈ ಮನೆ ಪರಿಶೀಲಿಸುತ್ತಿದೆ. ಈ ಸಂದರ್ಭದಲ್ಲಿ ಈ

ಸಮಿತಿಯ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನಾನು ಹೃತ್ಪೂರ್ವಕವಾಗಿ ವಂದಿಸಬೇಕಾದ್ದು ನನ್ನ ಕರ್ತವ್ಯ ಕಾರಣವೇನೆಂದರೆ ಹಿಂದೆ ಅನೇಕಾನೇಕ ಈ ತರಹ ಅಕೃತ್ಯಗಳು ನಡೆದಿರಬಹುದು. ಆದರೆ ಅಂದು ಇದ್ದಂಥ ಸಮಿತಿಗಳು ಧೈರ್ಯವಾಗಿ ಕೆಲಸ ಮಾಡತಕ್ಕವುಗಳಾಗಿರಲ್ಲಿಲ್ಲ. ಅಂಥ ಅವಕಾಶವನ್ನು ಈಗಿನ ಸಮಿತಿ ಉಪಯೋಗಿಸಿ ಕೊಂಡು ಧೈರ್ಯವಾಗಿ ಸತ್ಯವನ್ನು ನೇರವಾಗಿ ಮೈಸೂರು ರಾಜ್ಯದ ಜನತೆಯ ಮುಂದೆ ಇಟ್ಟಿರುವುದಕ್ಕೆ ನಾನು ಮತ್ತೊಮ್ಮೆ ಅವರನ್ನು ವಂದಿಸುತ್ತೇನೆ.

ಮೊದಲನೆಯದಾಗಿ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ವಿಚಾರ. ಅದನ್ನು ಕೊಡಬೇಕಾಗಿದ್ದರೆ ವ್ಯವಸಾಯಕ್ಕೆ ಅನುಬಂಧವಾಗಿರುವ ಉದ್ಯಮದಲ್ಲಿ ತೊಡಗಿಸಿದ್ದಾರೆಯೋ ಇಲ್ಲವೇ ಎನ್ನುವ ಪ್ರಶ್ನೆ ಇದೆ. ಹತ್ತಿ ಗಿರಣಿ ಕೂಡ ಅಗ್ರಿಕಲ್ಚರಲ್ ಬೇಸ್ಡ್ ಇಂಡಸ್ಟ್ರಿ ಎಂದು ಹೇಳುವುದಾದರೆ ಅಂಗಡಿ ಬೀದಿಯಲ್ಲಿ ಮಾರತಕ್ಕ ಜಿಲೇಬಿ, ಮೈಸೂರು ಪಾಕ್ ಮುಂತಾದ ಸಿಹಿ ಪದಾರ್ಥಗಳು ತಯಾರಿಸಲು ಎಣ್ಣೆ ಅಥವಾ ತುಪ್ಪ ಬೇಕು ಮತ್ತು ರವೆ, ಮೈದಾ ಮುಂತಾದ ಪದಾರ್ಥಗಳು ಬೇಕು. ಇವೆಲ್ಲ ಅಗ್ರಿಕಲ್ಚರಲ್‌ಪ್ರಾಡಕ್ಟ್ಸ್ ಈ ರೀತಿಯಾಗಿ ಆಲೋಚನೆ ಮಾಡುವುದಾದರೆ ಸಿಹಿ ತಿಂಡಿಗಳನ್ನು ತಯಾರು ಮಾಡುವವರಿಗೆ ಹಣವನ್ನು ಕೊಟ್ಟು ಸಹಾಯ ಮಾಡಬೇಕಾಗುತ್ತದೆ ಆ ಪರಿಸ್ಥಿತಿಯಲ್ಲಿ ಸರ್ಕಾರವಿದೆಯೇ ಎಂದು ನಾನು ಕೇಳುತ್ತೇನೆ ಹುಲಕೋಟಿ ಕಾರ್ಖಾನೆಯ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಹುಲಕೋಟಿಯಲ್ಲಿ ಕಾಟನ್ ಮಿಲ್ ಬರಬಾರದು, ಅಲ್ಲಿನ ಕಾರ್ಮಿಕರಿಗೆ ಮತ್ತು ರೈತರಿಗೆ ಅನುಕೂಲವಾಗಬಾರದು ಎಂದು ಹೇಳತಕ್ಕವನಲ್ಲ. ಹುಲಕೋಟಿಯಲ್ಲಿ ಮಾತ್ರವಲ್ಲ, ಪ್ರತಿಯೊಂದು ಊರಿನಲ್ಲಿ ಕೂಡ, ಸಾಧ್ಯವಾದರೆ ಪ್ರತಿಯೊಂದು ಮನೆಯಲ್ಲಿ ಕೂಡ ದೊಡ್ಡ ದೊಡ್ಡ ಕೈಗಾರಿಕೆಗಳು ಆಗತಕ್ಕದ್ದು ಈ ದೇಶದ ಹಿತದೃಷ್ಟಿಯಿಂದ ಉತ್ತಮ. ಸರ್ಕಾರ ರೈತರಿಗೆ ಮುಖ್ಯವಾಗಿ ಬೇಕಾಗಿರತಕ್ಕ ಬಿತ್ತನೆ ಬೀಜ, ಸೀಮೆ ಗೊಬ್ಬರ ಇವುಗಳನ್ನು ಒದಗಿಸಬೇಕು. ಸರ್ಕಾರ ಸೀಮೆ ಗೊಬ್ಬರವನ್ನು ರೈತರಿಗೆ ಒದಗಿಸುವುದರಲ್ಲಿ ವಿಫಲವಾಗಿದೆ. ಈ ಕೆಲಸದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೂಡ ವಿಫಲ ೫೦ ಕೆ. ಜಿ. ಇರತಕ್ಕ ಒಂದು ಮೂಟೆ ಯೂರಿಯಾ ಗೊಬ್ಬರದ ಬೆಲೆ ಇಂದು ೧೨೫ ರೂಪಾಯಿ ಇದೆ. ಕಾಳಸಂತೆಯಲ್ಲಿ ಈ ಬೆಲೆಗೆ ಮಾರಾಟವಾಗುತ್ತಿರಬೇಕಾದರೆ ಇದು ಎಂಥ ವಿಪರ್ಯಾಸವೆಂದು ಕೇಳುತ್ತೇನೆ. ರೈತರಿಗೆ ಬೇಕಾಗಿರತಕ್ಕ ವಸ್ತುಗಳನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಯೋಗ್ಯ ಬೆಲೆಯಲ್ಲಿ ಒದಗಿಸುತ್ತಿಲ್ಲ. ಯಾರೋ ಒಬ್ಬರ ಸ್ವಪ್ರತಿಷ್ಠೆಗೋಸ್ಕರ ಹುಲಕೋಟಿ ಮಿಲ್ಲಿಗೆ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗೊಬ್ಬರದ ವಿಚಾರದಲ್ಲಿ ತುಮಕೂರಿನಲ್ಲಿ ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರವರನ್ನು ಘೇರಾವೊ ಮಾಡಿದ್ದರು. ಕೋಲಾರದಲ್ಲಿ ನನಗೂ ಅಂಥ ಪರಿಸ್ಥಿತಿ ಒದಗಿ ಬಂದಿತ್ತು. ಪರಿಸ್ಥಿತಿ ಹೀಗಿರುವಾಗ ಸರ್ಕಾರದ ಡೈರೆಕ್ಷನ್ ಮೇಲೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ೧೫ ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿದ್ದಾರೆ.

ಟ್ರಸಸ್ ತಯಾರು ಮಾಡುವುದರಲ್ಲಿ ಸಾಕಷ್ಟು ನಷ್ಟವಾಗಿದೆ. ೪೨ ಟ್ರಸಸ್ ಮಾಡಬೇಕಾಗಿದ್ದರೆ ಸಾಕಷ್ಟು ನಷ್ಟವಾಗಿದೆ. ಟ್ರಸಸ್ ಬೆಲೆಯನ್ನು ನಿಗದಿ ಮಾಡುವಾಗ ಯಾವರೀತಿ ವರ್ಕ್ ಷೀಟ್ ಕ್ಯಾಲ್ಕುಲೇಟ್ ಮಾಡಿ ಕೊಟ್ಟಿದ್ದಾರೆ ಅದೇ ರೀತಿ ಬೇರೆ ವಿಚಾರಗಳಲ್ಲಿ ಮಾಡುತ್ತಿದ್ದಾರೆಯೋ ? ಕಾರ್ಪೊರೇಷನ್ನಿಂದ ವೆಲ್‌ಡಿಗಿಂಗ್ ಮೆಷೀನ್ಸ್, ಬ್ಲಾಸ್ಟರ್ಸ್ ಬುಲ್‌ಡೋಜರ್ಸ್ ಇವುಗಳನ್ನು ರೈತರಿಗೆ ಯಾವ ಯಾವ ದರದಲ್ಲಿ ಕೊಡುತ್ತ ಇದ್ದಾರೆ ಎನ್ನುವುದಕ್ಕೆ ನನ್ನ ಹತ್ತಿರ ಕೆಲವು ಅಂಕಿಅಂಶಗಳಿವೆ. ಅದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ೧೯೭೦ ರಲ್ಲಿ ಹೈಡ್ರಾಲಿಕ್ ೧೨೦ ಎಚ್. ಪಿ ಬುಲ್‌ಡೋಜರ್‌ಗೆ ಒಂದು ಗಂಟೆಗೆ ೪೫ ರೂಪಾಯಿ ಇದ್ದದು ೧೯೭೩ರಲ್ಲಿ ೮೨ ರೂಪಾಯಿ ಆಗಿದೆ. ನಮ್ಮದು ೭೫ ಪರ್ಸೆಂಟ್ ರೈತರಿರುವ ದೇಶ. ದೇಶಕ್ಕೆ ಬೆನ್ನೆಲುಬಾಗಿರುಹವರು ರೈತರು. ಅವರಿಗೆ ಬೇಕಾಗಿರತಕ್ಕ ಸಲಕರಣೆಗಳನ್ನು ಒದಗಿಸುವುದಕ್ಕೆ ೪೫ ರೂಪಾಯಿ ಇದ್ದ ಬುಲ್ ಡೋಜರ್ ಬಾಡಿಗೆಯನ್ನು ೮೨ ರೂಪಾಯಿ ಮಾಡಿದ್ದಾರೆ. ಅದೇ ರೀತಿಯಾಗಿ ವೆಲ್ ಡಿಗಿಂಗ್ ಕೆಲಸಕ್ಕೆ ೧೫೦ ರಿಂದ ೨೦೦ ಅಡಿಗಳವರೆಗಿನ ಆಳಕ್ಕೆ ಒಂದು ಅಡಿಗೆ ೧೯೭೦ರಲ್ಲಿ ೧೨ ರೂಪಾಯಿ ಇದ್ದುದು ಇಂದು ೧೫ ರೂಪಾಯಿ ಆಗಿದೆ.

ಇದೇ ರೀತಿಯಲ್ಲಿ ವೆಲ್ ಬ್ಲಾಸ್ಟಿಂಗ್‌ಗೆ ಒಂದು ಗಂಟೆಗೆ ೫೫ ರೂ ೩೫ ಪೈಸೆ ಇತ್ತು. ಕೇವಲ ೩ ವರ್ಷಗಳಲ್ಲಿ ಇವತ್ತು ೧೦೫ ರೂ. ಆಗಿದೆ ಅದು ಸಾಮಾನ್ಯ ರೈತರಿಗೆ ಆಗಿದೆ. ಆದರೆ ಹುಲುಕೋಟೆಗೆ ಬುಲ್ಡೋಜರ್ ಕೊಟ್ಟರು ಅದು ಕೂಡ ಕಡಿಮೆಗೆ ಚಾರ್ಜ ಮಾಡಿದ್ದಾರೆ, ಲಾರಿಯಲ್ಲಿ ಟ್ರೆಸಸ್ಸ್ ಟ್ರಾನ್ಸ್‌ಪೋರ್ಟ್ ಮಾಡಿದಾಗ ಅವರಿಗೆ ಅನುಗುಣವಾದ ಲೆಕ್ಕ ಮಾಡಿ ಅದಕ್ಕೂ ಕೂಡ ಕಡಿಮೆ ಚಾರ್ಜ್ ಹಾಕಿದ್ದಾರೆ. ಅವರಿಗೆ ಟ್ರೆಸಸ್ಸ್ ಮಾರಬೇಕಾದರೂ ಕೂಡ ಅದಕ್ಕೂ ಕೂಡ ಕಡಿಮೆ ಚಾರ್ಜ್ ಹಾಕಿದ್ದಾರೆ ಮಾನ್ಯ ಮಂತ್ರಿಗಳಿಗೆ ನೇರವಾದ ಪ್ರಶ್ನೆಯನ್ನು ತಮ್ಮ ಮೂಲಕ ಕೇಳುತ್ತೇನೆ. ನೀವು ಹುಲಕೋಟೆ ಸೊಸೈಟಿಗೆ ಏನು ಒದಗಿಸಿದ್ದೀರಿ ಏನು ಕನ್‌ಸೆಷನ್ ಕೊಟ್ಟಿದ್ದೀರಿ ಅದೇ ರೀತಿ ಎಲ್ಲರಿಗೂ ಕೂಡ ಕೊಡಿ ಸಂತೋಷ ರೈತರು ದೇಶದ ಬೆನ್ನೆಲುಬು ರೈತರು ಉತ್ಪತ್ತಿ ಮಾಡುವುದಕ್ಕೆ ಬೇಕಾದ ಸಾಮ

(ಶ್ರೀ ಸಿ. ಬೈರೇಗೌಡ)

ಗ್ರಿಗಳನ್ನು ಆಗ್ರೊ ಬೇಸ್ಡ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹುಲುಕೋಟೆಯ ಸೊಸೈಟಿಗೆ ಹಣ ಸಹಾಯ ಏನು ಒದಗಿಸಿದ್ದೀರಿ ಅದೇ ರೀತಿ ಪ್ರತಿಯೊಬ್ಬ ರೈತನಿಗೂ ಕೊಡುವ ಚೈತನ್ಯ ತಮಗೆ ಇದೆಯೋ ಎಂದು ಕೇಳಬೇಕಾಗಿದೆ. ನಮ್ಮ ಟ್ರಾಕ್ಟರ್‌ನ ಫ್ರಂಟ್ ಮಿಲ್‌ನ ಹಬ್ ಮುರಿದು ಹೋಗಿತ್ತು, ಅದಕ್ಕಾಗಿ ತಾ ೩೦ ನೇ ಆಗಸ್ಟ್ ೧೯೭೩ರಂದು ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಟ್ರಾಕ್ಟರ್ಸ್‌ಗೆ ಬೇಕಾದ ಸ್ಪೇರ್‌ಪಾರ್ಟ್ಸ್‌ನ್ನು ಕೊಂಡುಕೊಂಡಿದ್ದೇನೆ. ಆ ರಸೀಟ್ ನಂಬರ್ ೧೧೯೮೪—ಅದಕ್ಕೆ ಸುಮಾರು ೬೪ ರೂ ೮೫ ಪೈಸೆ ಬಿಲ್ ಆಗಿದೆ. ಅದನ್ನ ತೆಗೆದು ಕೊಂಡು ಹೋಗಿ ನೋಡಿದರೆ ಅದು ನಮ್ಮ ಟ್ರಾಕ್ಟರ್‌ಗೆ ಸಂಬಂಧಪಟ್ಟಂಥ ಸ್ಪೇರ್‌ಪಾರ್ಟ್ ಅಲ್ಲ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಮಾನ್ಯ ಅಧ್ಯಕ್ಷರೇ, ಕೇವಲ ೨೪ ಗಂಟೆಯಲ್ಲಿ ೧೫ ಲಕ್ಷ ರೂಪಾಯಿ ಗಳನ್ನು ಹುಲುಕೋಟೆ ಸೊಸೈಟಿಗೆ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಕೋಲಾರದಲ್ಲಿ ಸಂಕೀರ್ಣ ಬೀಜಗಳ ಉತ್ಪಾದನೆ ಜಾಸ್ತಿಯಾಗಿದೆ ರೈತರು ಬೆಳೆಯುವುದಕ್ಕೆ ಮುಂದೆ ಬರುತ್ತಿದ್ದಾರೆ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ಕೋಲಾರದಲ್ಲಿ ಸೀಡ್ ಪ್ರೊಸೆಸಿಂಗ್ ಯೂನಿಟ್ ಇಲ್ಲ ಎಂದು ಪತ್ರ ಬರೆದಿದ್ದರೆ ಮಂತ್ರಿಗಳು ಉತ್ತರದಲ್ಲಿ ಬರೆದಿದ್ದಾರೆ ಮಂತ್ರಿಗಳ ಉತ್ತರದಲ್ಲಿ " I have your letter of the 28th April 1973 regarding the seedl processing unit at Kolar Taluk. I have asked the Director of Agriculture to send the proposal early." ಹೇಳಿದ್ದಾರೆ. ಇವತ್ತು ಕೂಡ ಸೀಡ್ ಪ್ರೊಸೆಸಿಂಗ್ ಯೂನಿಟ್‌ಗಾಗಲೀ ಸಂಬಂಧ ಪಟ್ಟಿದು ಯಾವುದೂ ಕೂಡ ಇಲ್ಲ.

ಅಧ್ಯಕ್ಷರು :—ಮಿನಿಸ್ಟರ್‌ರವರು ಮಾಡುವುದಿಲ್ಲ ಎಂದು ಹೇಳಿದ್ದಾರೆಯೇ.

ಶ್ರೀ ಸಿ. ಬೈರೇಗೌಡ : ಅಲ್ಲಿಗೆ ೨೪ ಗಂಟೆಯೊಳಗೆ ೧೫ ಲಕ್ಷ ರೂ ಕೊಡುವುದಕ್ಕೆ ಆಗುತ್ತದೆ. ಇಲ್ಲಿ ಕೋಲಾರದಲ್ಲಿ ಸೀಡ್ ಪ್ರೊಸೆಸಿಂಗ್ ಯೂನಿಟ್‌ಗೆ ಮಾಡುವುದಕ್ಕಾಗುವುದಿಲ್ಲವೆ ? ಅಲ್ಲಿ ಎಷ್ಟು ಬೀಜ ಬೆಳೆಯುತ್ತಿದ್ದಾರೆಂಬ ಅಂಕಿಅಂಶಗಳು ಸರ್ಕಾರದಲ್ಲಿ ಇದೆ ಮಂತ್ರಿಗಳಿಗೂ ಗೊತ್ತಿದೆ, ಆದರೂ ಸೀಡ್ ಪ್ರೊಸೆಸಿಂಗ್ ಯೂನಿಟ್ ಮಾಡುವುದಕ್ಕೆ ಆಗುವುದಿಲ್ಲವೇ ? ಆದುದರಿಂದ ನಾನು ಹೇಳುವುದು ಹುಲುಕೋಟೆಯತಕ್ಕ ಸೊಸೈಟಿಗೆ ಯಾವುದೇ ಸೊಸೈಟಿ ಯಾಗಲಿ ಕೊಡಿರಿ. ಪ್ರತಿಯೊಂದಕ್ಕೂ ಕೂಡ ಅಲಾಟ್‌ಮೆಂಟ್ ಮಾಡುವ ರೀತಿಯಲ್ಲಿ ಏರ್ಪಾಡು ಮಾಡಿರಿ. ಆದರೆ ಅದು ನಮ್ಮ ಕ್ಷೇತ್ರ ನಾನು ಆ ಭಾಗದವನು. ನೀವು ಈ ಭಾಗದವರು ಆ ಭಾಗದಲ್ಲಿ ಕೆಲಸ ಆಗಬೇಕು, ಈ ಭಾಗದಲ್ಲಿ ಕೆಲಸ ಆಗಬಾರದು ಎನ್ನುವ ಭಾವನೆ ಬಿಟ್ಟು ಮೈಸೂರು ರಾಜ್ಯದಲ್ಲಿರತಕ್ಕ ಪ್ರತಿಯೊಂದು ಅಂಗಲಕ್ಕೂ ನಾನು ಮಂತ್ರಿಯಾಗಿದ್ದೇನೆ. ಪ್ರತಿಯೊಂದು ವಿಭಾಗದ ಮೇಲೂ ಕೂಡ ಇರತಕ್ಕ ಪ್ರಜೆಯು ಸೌಕರ್ಯ ಪಡೆಯುವುದಕ್ಕೆ ಅರ್ಹರು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಎಂದು ತಮಗೆ ಸೂಚಿಸಿ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಮಾನ್ಯ ತೋರಿರುವುದರಿಂದ ನೀವು ರಾಜೀನಾಮೆ ಖಂಡಿತವಾಗಿ ಕೊಡ ಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಈ ಸದನದಲ್ಲಿ ಎದುರು ಪಕ್ಷದಿಂದ ಮಾತನಾಡಿದಂಥ ಅನೇಕ ಸದಸ್ಯರು ಹಾಗೂ ನಮ್ಮ ಪಕ್ಷದಿಂದ ಮಾತನಾಡಿದಂಥ ಎಲ್ಲ ಸದಸ್ಯರು ಹೇಳಿದ್ದನ್ನು ನಾನು ಈ ಮಧ್ಯೆ ಮಧ್ಯೆ ಸ್ವಲ್ಪ ಕಾಲ ಕೇಳಿದ್ದೇನೆ. ಹೊರಗಡೆ ಹೋದಾಗ ಇಲ್ಲಿ ಏನು ನಡೆದಿದೆ ಎನ್ನುವುದನ್ನು ಕೇಳಿ ತಿಳಿದುಕೊಂಡಿದ್ದೇನೆ, ನಮ್ಮ ಎದುರು ಪಕ್ಷದ ಸದಸ್ಯರೆಲ್ಲರೂ ಮಾತ ನಾಡಿದರು ಇಲ್ಲಿ ಇರಬೇಕಾಗಿತ್ತು ಎಂದು ನನ್ನ ಆಶೆ.

ಶ್ರೀ ವಿ. ಎನ್. ಪಾಟೀಲ್.—ನಿಮ್ಮನ್ನು ಅಭಿನಂದಿಸಿದ ಸ್ನೇಹಿತರೇ !

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಭಾಗದಲ್ಲಿ ರಾಜೀನಾಮೆ ಕೊಡಿ ಎಂದು ಕೇಳಿದವರು ಯಾರೂ ಇಲ್ಲವಲ್ಲ. ಅವರು ಇದ್ದರೆ ಅಲ್ಲವೇ ರಾಜೀನಾಮೆ ಕೊಡುವುದು.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮಲ್ಲಿ ರಾಜೀನಾಮೆ ಕೊಡುವುದು ಅಲ್ಲ ನಿಮಗೆ ಕೊಟ್ಟರೆ ಸಾಕು.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಅನೇಕ ಟೀಕೆಗಳನ್ನು ಮಾಡಿದ್ದಾರೆ. ಟೀಕೆ ಮಾಡಿದ ಮೇಲೆ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕೇಳುವುದು ಒಳ್ಳೆಯದು, ಕೇಳದೆ ಹೋದರೆ ನಮ್ಮದು ಅಭ್ಯಂತರವಿಲ್ಲ. ಜವಾಬ್ದಾರಿಯುತವಾದ ವಿಚಾರ ಮಾತನಾಡುವಾಗ ಜವಾಬ್ದಾರಿಯುತವಾದ ಟೀಕೆ

ಮಾಡುವವರು ಜವಾಬ್ದಾರಿಯಿಂದ ಟೀಕೆ ಪಡೆಯುತಕ್ಕದ್ದು ಸರಿ ಎಂದು ಕಾಣುತ್ತದೆ. ಆದುದರಿಂದ ಅವರು ಇದ್ದು ಉತ್ತರ ಪಡೆದು ಹೋದರೆ ಒಳ್ಳೆಯದೆಂದು ನನ್ನ ಭಾವನೆ. ಏನೇ ಇರಲಿ. ಈ ಮಾಜಿ ಮಂತ್ರಿಗಳಾದ ಶ್ರೀಮಾನ್ ರಾಜಶೇಖರ ಮೂರ್ತಿಗಳವರು ಬಹಳ ದಿವಸಗಳಿಂದ ಮಾತನಾಡಿರಲೇ ಇಲ್ಲ ಇವತ್ತು ಸಿದ್ದ ವೀರಪ್ಪನವರು ಹೇಳಿದ್ದು ಸರಿಯಲ್ಲ ಎಂದು ಒಂದು ಕ್ಲಾರಿಫಿಕೇಷನ್ ಮಾಡುತ್ತಾ ಮಾತನಾಡಿದರು ಎಂದು ನನಗೆ ಕಂಡು ಬಂದಿದೆ. ತಮ್ಮ ಅಪ್ಪಣೆ ಪಡೆದು ಒಂದು ವಿಚಾರ ಹೇಳುತ್ತೇನೆ

ಮಂಗಳೂರು ಕೆಮಿಕಲ್ ಫರ್ಟಿಲೈಜರ್ಸ್ ಕಂಪನಿ ಏನು ಇದೆ ಅದಕ್ಕೆ ಹಿಂದೆ ಹೆಸರು ಮಲಬಾರ್ ಫರ್ಟಿಲೈಜರ್ಸ್ ಎಂದು ಇತ್ತು. ಅದಕ್ಕೆ ಮೆಸರ್ಸ್ ದುಗ್ಗಲ್ ಎಂಟರ್‌ಪ್ರೈಸರ್ಸ್ ಎನ್ನುವವರು ಪ್ರಮೋಟರ್ಸ್ ಆಗಿದ್ದರು. They Promoted Malabar Chemicals in 1967-68. ನಮ್ಮಲ್ಲಿ ಒಂದು ಎಂ.ಎಸ್.ಐ.ಐ.ಡಿ.ಸಿ. ಎನ್ನುವ ಸಂಸ್ಥೆ ಇತ್ತು. ೧೯೬೭ನೇ ಇಸ್ವಿಯಲ್ಲಿ ಎಂ.ಎಸ್.ಐ.ಐ.ಡಿ.ಸಿ. ಕಂಪನಿಗೆ ೨೦ ಲಕ್ಷ ರೂಪಾಯಿ ಕೊಟ್ಟರು. ೬೭೧ನೇ ಇಸ್ವಿಯಲ್ಲಿ ೧೫ ಲಕ್ಷ ರೂಪಾಯಿ ಕೊಟ್ಟರು, ೩-೧-೧೯೭೨ನೇ ಇಸ್ವಿಯಲ್ಲಿ ೫ ಲಕ್ಷ ರೂಪಾಯಿ ೧-೪-೧೯೭೨ರಲ್ಲಿ ೪೦ ಲಕ್ಷ ರೂಪಾಯಿ, ೨೭-೮-೧೯೭೨ ರಲ್ಲಿ ೨೦ ಲಕ್ಷ ರೂಪಾಯಿ ಕೊಟ್ಟರು. ನಮ್ಮಲ್ಲಿ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಇದೆ. ಅವರು ಇದರಲ್ಲಿ ಬಂಡವಾಳ ಹಾಕಿದ್ದಾರೆ. ಅವರು ೩ ಕೋಟಿ ರೂಪಾಯಿ ಷೇರ್‌ನಲ್ಲಿ ೧ ೧/೨ ಕೋಟಿ ರೂಪಾಯಿಗಳನ್ನು ಇದಕ್ಕೆ ಕೊಟ್ಟಿದ್ದಾರೆ. ೧೯೭೧ನೇ ಇಸವಿಯಲ್ಲಿ ೧ ಲಕ್ಷ ರೂಪಾಯಿ, ಮತ್ತೆ ಅದೇ ವರ್ಷದಲ್ಲಿ ವರ್ಷದಲ್ಲಿ ೧೪ ಲಕ್ಷ ರೂಪಾಯಿ ಮತ್ತು ಅದೇ ೧೯೭೦ರಲ್ಲಿ ೬೦ ಸಾವಿರ ರೂಪಾಯಿ ೧೯೭೧ನೇ ಇಸವಿಯಲ್ಲಿ ೧೧ ಲಕ್ಷ ೮೦ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಆಮೇಲೆ ೨೫-೪-೧೯೭೨ರಲ್ಲಿ ೩ ಲಕ್ಷ ೬ ಸಾವಿರ ರೂಪಾಯಿ ಮತ್ತು ಅದೇ ೧೯೭೨ ಲ್ಲಿ ೩೦ ಲಕ್ಷ ರೂಪಾಯಿ ಪುನಃ ೧೯೭೨ರಲ್ಲಿ ೩. ಲಕ್ಷ ರೂಪಾಯಿ ಕೊಟ್ಟಿದ್ದಾರೆ. ೩ ಕೋಟಿ ರೂಪಾಯಿ ಷೇರ್ ಬಂಡವಾಳದ ಪೈಕಿ, ಒಟ್ಟು ೧ ಕೋಟಿ ೫೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಇದರಲ್ಲಿ ಶ್ರೀಮಾನ್ ಸುಬ್ರಹ್ಮಣ್ಯಂ ಎನ್ನುವವರು ಹಿಂದೆ ಛೇರ್ಮನ್ ಆಗಿದ್ದರು. ಆಮೇಲೆ ಪೂಣಚ್ಚ ಬಂದರು. ದುಗ್ಗಲ್ ಮಾತ್ರ ಪ್ರಮೋಟರ್ಸ್ ಆಗಿದ್ದಾರೆ. ೧೯೬೭ ರಿಂದ ೧೯೭೧ನೇ ಇಸವಿವರೆಗೆ ಸುಮಾರು ೬೦ ಲಕ್ಷ ರೂಪಾಯಿಗಳು ಖರ್ಚಾಗಿತ್ತು. ಶ್ರೀಮಾನ್ ದುಗ್ಗಲ್‌ರವರು ಪ್ರಮೋಟ್ ಆಗಿದ್ದಂಥ ಕಂಪನಿ ಎಂಬುದೇನ ಮಲಬಾರ್ ಫರ್ಟಿಲೈಸರ್ಸ್ ಅಸ್ತಿತ್ವಕ್ಕೆ ಬಂತು.

6-00 P.M.

ಶ್ರೀ ಎಂ. ಎಸ್. ಕೃಷ್ಣನ್.—ದುಗ್ಗಲ್ ಕಂಪೆನಿ ಎಂದು ಹೇಳುತ್ತಿದ್ದೀರಿ, ಅದರ ಅರ್ಥ ಏನು ?

SRI D. DEVARAJ URS.—Mr. Duggal with other is the Promoter.

SRI M. S. KRISHNAN.—You are saying only about that aspect.

SRI D. DEVARAJ URS.—He promoted the Company called Malabar Chemicals and Fertilizers. ೬೦ ಲಕ್ಷ ರೂಪಾಯಿ ಇದಕ್ಕೆ ಖರ್ಚಾಯಿತು. Out of that, a sum of Rs. 24.27 lakhs was paid to one C and I Girdler Industrial Corporation Unit, U.S.A. under agreement. Since at that time, that firm was the collaborator. M/s Duggal Enterprises Limited paid up shares of Rs. 40 lakhs which was allotted later. Marketing Federation was paid promotional expenditure of Rs. 7½ lakhs.

ಒಟ್ಟು ೩ ಲಕ್ಷ ಚಿಲ್ಲರೆ. ೬೦ ಲಕ್ಷದಲ್ಲಿ ಉಳಿಕೆ ಹಣ ಸುಮಾರು ೨೮ ಲಕ್ಷ ಎಸ್ಟಾಬ್ಲಿಷಮೆಂಟಿಗೆ ಖರ್ಚಾಯಿತು ಎಂದು ಹೇಳಿದರು. ಒಟ್ಟು ೬೦ ಲಕ್ಷ ರೂಪಾಯಿ ಖರ್ಚಾಯಿತು ಎಂದು ನಾನು ತಿಳಿಯುತ್ತೇನೆ. ನಮ್ಮ ಸಿದ್ದವೀರಪ್ಪನವರೂ ಹೇಳಿದ್ದು ಇದನ್ನೇ. ಅವರು ಅದು ಅಲ್ಲ ಎಂದು ಹೇಳಿದರು. ಅವರು ಫೈಲ್ ನೋಡಿರಲಿಲ್ಲ ಎಂದು ಕಾಣುತ್ತದೆ. ಇದು ನಿಜವೋ ಅಲ್ಲವೋ ಎನ್ನುವುದನ್ನು ಮಾನ್ಯ ಸಭೆಯವರು ತಿಳಿದುಕೊಳ್ಳಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದರ ಸಂಬಂಧ ಗೊತ್ತಾಗಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರು ಹೇಳಿದರು, ಅದಕ್ಕೆ ಇದನ್ನು ಹೇಳಬೇಕಾಯಿತು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದು ಕೈಗಾರಿಕೆಗೋಸ್ಕರ ಹಣ ಕೊಡುವಂಥ ಸಂಸ್ಥೆ ಇದೆ, ಕೊಟ್ಟಿದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಬಾಯಿಂದ ಬಂತಲ್ಲ, ಅದನ್ನೇ ಮಾತನಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಮಲಬಾರ್ ಕೆಮಿಕಲ್ಸ್ ಫರ್ಟಿಲೈಸರ್ಸ್‌ಗೆ ಕೊಟ್ಟರು ನೀವು ಮಂಗಳೂರು ಫರ್ಟಿಲೈಸರ್ಸ್‌ಗೆ ಕೊಟ್ಟಿದ್ದೀರಿ, ವ್ಯತ್ಯಾಸ ಇಷ್ಟೆ. ಅವರು ಜಾಸ್ತಿ ಕೊಟ್ಟಿದ್ದಾರೆ, ನೀವು ಕಡಿಮೆ ಕೊಟ್ಟಿದ್ದೀರಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ವ್ಯವಹಾರದಲ್ಲಿ ಅಧಿಕಾರ ದುರುಪಯೋಗ ನಡೆದಿದ್ದರೆ, ಹಣದ ದುರುಪಯೋಗ ನಡೆದಿದ್ದರೆ ಪ್ರಶ್ನೆ ಮಾಡಬಹುದು, ವಿಚಾರ ಮಾಡಬಹುದು.

ಶ್ರೀ ಡಿ. ದೇವರಾಜ್ ಅರಸ್.—ದುರುಪಯೋಗ ಆಗಿಲ್ಲ ಎನ್ನುವ ವಿಚಾರ ಮಾತನಾಡುವುದಕ್ಕೆ ಬಂದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಆ ಪ್ರಶ್ನೆ ಕೇಳುವುದಕ್ಕೆ ಹೋದರೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯವರು ವರದಿ ಕೊಡಲಿ. ಅದರಲ್ಲಿ ನಿಮ್ಮನ್ನೂ ಒಬ್ಬ ಮೆಂಬರಾಗಿ ಮಾಡೋಣ. ನನಗೆ ಅದರ ಮೇಲೆ ಇಂಟರೆಸ್ಟ್ ಇಲ್ಲ ಎಂದಲ್ಲ.

ಶ್ರೀ ಎಂ ಎಸ್. ಕೃಷ್ಣನ್.—ಮೊದಲನೇ ಪ್ಯಾರಾದಲ್ಲಿ ಹೇಳಿದೆ. ಮಂಗಳೂರು ಫರ್ಟಿಲೈಸರ್ಸ್‌ನು ವಿವರವಾಗಿ ನೋಡಬೇಕು, ಅದಕ್ಕೆ ಟೈಂ ಬೇಕು ಎಂದು ಹೇಳಿದ್ದಾರೆ.

ಶ್ರೀ. ಡಿ. ದೇವರಾಜ್ ಅರಸ್.—ನಮ್ಮ ಕಾಲದಲ್ಲಿ ಆಗಲಿಲ್ಲ ಎಂದು ಹೇಳಿದರು, ಕೊಟ್ಟಿದೆ ಎಂದು ಹೇಳುವುದಕ್ಕೆ ಇಷ್ಟು ಮಾತ್ರ ಹೇಳಿದೆ. ಅವರು ಹಿಂದಿನ ಚೀಫ್ ಮಿನಿಸ್ಟರು ಇದ್ದಾಗ ಕೊಡಲಿಲ್ಲ ಎಂದು ವಗೈರೆ ಹೇಳಿದರು. ಆ ಕಾಲದಲ್ಲೂ ಕೊಟ್ಟಿತ್ತು ಎಂದು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ. ಈ ಉತ್ತರ ಅನಾವಶ್ಯಕ, ಪ್ರಶ್ನೆ ಕೇಳಿದವರು ಇದ್ದರೆ ಸರಿಹೋಗುತ್ತಿತ್ತು, ಈ ಸಂಬಂಧ ನನಗೆ ಗೊತ್ತಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೋಗಿ ಅವರಿಗೆ ಹೇಳಿ.

SRI H. T. KRISHNAPPA —I want to know how it has a bearing on this subject which was discussed all through ?

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಆಗಲೇ ಹೇಳಿದ್ದೇನೆ. ಇನ್ನು ವರದಿ ವಿಚಾರಕ್ಕೆ ಬರುತ್ತೇನೆ. ಪೇಜ್ ೮ ರಲ್ಲಿ ೧.೨೪ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ.

> "From the facts narrated above, the Committee are of the opinion that the Hon'ble Minister for Agriculture has used his position and power to influence the various authorities of the Corporation to invest this amount in the share capital of the Gadag Co-operative Textile Mills Limited."

ಆನರಬಲ್ ಮಿನಿಸ್ಟರ್ ಫಾರ್ ಅಗ್ರಿಕಲ್ಚರ್ ಈ ರೀತಿ ಮಾಡಿಬಿಟ್ಟಿದ್ದಾರೆ. ಏನು ಮಾಡಿದ್ದಾರೆ ? ಬೇರೆ ಬೇರೆ ಜನರ ಮೇಲೆ ಅವರ ಅಧಿಕಾರ ಮತ್ತು ಪ್ರಭಾವವನ್ನು ಬೀರಿ ೧೫ ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿಸಿಬಿಟ್ಟರು ಎಂದು ಆದುದರಿಂದ ಇವರ ವರದಿ ಪ್ರಥಮದಲ್ಲಿ ಶುರು ಮಾಡುವಾಗ Investment in Gadag Co-operative Textile Mills Limited ನ ಮೊದಲನೇ ಪೇಜಿನ ಪ್ರಿಯಾಂಬಲ್ ನಲ್ಲಿ ಹೀಗೆ ಹೇಳಿದ್ದಾರೆ.

"This indecent haste which did not give time even for the transit of the letter at different levels, let alone the time required for proper consideration/evaluation of this important proposal at various stages in the Office of the Corporation appears to be a clear indication of the pressure by the vested, interests at the highest level"

ಶ್ರೀ ಕೋಣಂದೂರು ಲಿಂಗಪ್ಪ.—ವರದಿ ಮುಗಿದ ಮೇಲೆ ಮುನ್ನುಡಿ ಬರೆದಿರುವುದು.

ಶ್ರೀ ಡಿ. ದೇವರಾಜ್ ಅರಸ್.—ನೀವು ಪುಸ್ತಕ ಬರೆಯುವವರಲ್ಲವೇ, ಮುನ್ನುಡಿ ಹೀಗೆ ಬರೆದಿರುವುದು ಸರಿಯೇ ? ಅನಗತ್ಯವಾದ, ಅಸಹ್ಯಕರ ಆತುರತೆ ವ್ಯಕ್ತಪಡಿಸಿದ್ದಾರೆ. ಮತ್ತು ವೆಸ್ಟೆಡ್ ಇಂಟರೆಸ್ಟ್ ಇದೆ ಎಂದು ಹೇಳಿದ್ದಾರೆ. ಆತುರ ಇದೆ, ಅಸಹ್ಯಕರ ಆತುರತೆ ಅಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ಹೇಗೆ ಬೇಕಾದರೂ ಅರ್ಥಮಾಡಿಕೊಳ್ಳಬಹುದು.

ಶ್ರೀ ಡಿ. ದೇವರಾಜ್ ಅರಸ್.—ಹೇಗೆ ಬೇಕಾದರೂ ಅರ್ಥಮಾಡಿಕೊಳ್ಳುವುದಕ್ಕೆ ನಾನು ನಾಗರಾಜ್ ಅಲ್ಲ.

ಶ್ರೀ ವಾಟಾಳ್ ನಾಗರಾಜ್.—ನೀವು ಈಶ್ವರರಾಗಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್,—ಈ ಎರಡು ಮಾತು ಸರಿ ಎಂದು ಕಂಡಾಗ, ತಮ್ಮ ಟೀಕೆ ಸರಿ ಎಂದು ಕಂಡುಬರಬಹುದು. ಅದು ಇಲ್ಲ ಎಂದರೆ ನಿಮ್ಮ ಟೀಕೆಗಳು ಆಧಾರ ರಹಿತವಾದುವು. ಎದುರು ಪಕ್ಷದಲ್ಲಿ ಕೆಲವರು ಇದ್ದದ್ದನ್ನು ಇದ್ದ ಹಾಗೆ ಹೇಳುವಂಥ ಸ್ಥೈರ್ಯವನ್ನು ವ್ಯಕ್ತಪಡಿಸಿದ್ದಾರೆ. ಇದ್ದದ್ದನ್ನು ಇದ್ದ ಹಾಗೆ ಹೇಳುವುದು, ಅವರು ತಿಳಿದುಕೊಂಡಿರುವ ಹಾಗೆ ಎಂದರೆ ಸರ್ಕಾರ ಏನು ಮಾಡಿದರೂ ಟೀಕೆ ಮಾಡಿಬಿಟ್ಟರೆ ಇದ್ದದ್ದನ್ನು ಇದ್ದಹಾಗೆ ಹೇಳುವುದು ಎಂದು ಕೆಲವರು ಸ್ನೇಹಿತರು ತಿಳಿದುಕೊಂಡಿದ್ದಾರೆ. ಎದುರು ಪಕ್ಷದಲ್ಲಿ ಇದ್ದರೂ ಸರ್ಕಾರ ಮಾಡುವುದು ಸರಿಯೆಂದು ಹೇಳುವ ಜನರೂ ಇದ್ದಾರೆ. ಅದು ಮನಸ್ಸಿಗೆ ಸಮಾಧಾನಕರವಾದ ವಿಷಯ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇಲ್ಲೂ ಇದ್ದಾರೆ, ಅಲ್ಲೂ ಇದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಆಮೇಲೆ ಬರುತ್ತೇನೆ, ಈಗ ನಡೆದ ಪ್ರಸ್ತುತ ವಿಚಾರ ಮಾತನಾಡುತ್ತೇನೆ, ನಾನು ಶ್ರೀಮಾನ್ ತಿಮ್ಮಪ್ಪನವರು ಮಾತನಾಡಿದಾಗ ಇರಲಿಲ್ಲ, ಆದರೂ ಅವರು ಹೇಳಿದ್ದು ಏನು ಎಂದು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಕೃಷ್ಣನ್‌ರವರು ಮಾತನಾಡುವಾಗ ನಾನು ಇಲ್ಲಿ ಇದ್ದೆ, ಇನ್ನೂ ಕೆಲವು ಸ್ನೇಹಿತರು ಮಾತನಾಡುವಾಗ ಇಲ್ಲಿ ಇದ್ದೆ. ಒಂದು ಸಮಾಧಾನಕರವಾದ ವಿಚಾರ ಎಂದರೆ ಯಾರೂ ವೈಯುಕ್ತಿಕವಾಗಿ ಮಂತ್ರಿಗಳು ಹಣವನ್ನು ಸ್ವಂತ ಲಾಭಕ್ಕೆ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಿಪೋರ್ಟಿನಲ್ಲಿ ಆ ಬಗ್ಗೆ ಹೇಳಲಿಲ್ಲಾ. ಆದುದರಿಂದ ಇಲ್ಲದೇ ಇರುವುದನ್ನು ಹೇಳುವ ಪ್ರಮೇಯವೇ ಬಂದಿಲ್ಲಾ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಸಮಾಧಾನವಾಗಿದೆ. ಈಗ ಒಂದು ಸ್ಥಿರವಾದ ಹಾಗೆ ಆಯಿತು. ಈ ಹಣ ಅಸಹ್ಯಕರವಾದ ಆತುರತೆಯಿಂದ ಖರ್ಚು ಆಯಿತೋ ಅಥವಾ ಇಲ್ಲವೋ ಎನ್ನುವುದು ಒಂದು ಕಡೆ ಬರುತ್ತದೆ. ಅಥವಾ ಇದು ದುರುಪಯೋಗವಾಗಿದೆಯೋ ಎನ್ನುವುದಾದರೆ ಆ ಹಣ ವೈಯುಕ್ತಿಕವಾದ ಲಾಭಕ್ಕಾಗಿ ದುರುಪಯೋಗವಾಗಿಲ್ಲ ಎಂದು ಹೇಳುವುದನ್ನು ಹೆಚ್ಚು ಶ್ರಮವಹಿಸಿ ಸಾಧನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಆದುದರಿಂದ ತಾವು ಇದನ್ನು ಒಪ್ಪಿರುವುದರಿಂದ ಇದು ಸಮಾಧಾನಕರವಾದ ವಿಚಾರ. ಮತ್ತು ಇದರಲ್ಲಿ ವೆಸ್ಟೆಡ್ ಇಂಟರೆಸ್ಟ್ ಇದೆ ಎಂದರೆ ಯಾವರೀತಿ ವೆಸ್ಟೆಡ್ ಇಂಟರೆಸ್ಟ್ ? ವೆಸ್ಟೆಡ್ ಇಂಟರೆಸ್ಟ್ ಡಿಕ್ಷನರಿ ಪ್ರಕಾರ ಯಾವುದಾದರೂ ಒಂದುರೀತಿಯಾದಂಥ ಇಂಟರೆಸ್ಟ್ ಇರಬೇಕು. ವೈಯುಕ್ತಿಕವಾಗಿ ಇಲ್ಲ ಎಂದಮೇಲೆ ಬೇರೆ ರೀತಿ ಇಂಟರೆಸ್ಟ್ ಇರಬಹುದು. ಸ್ಥಾನಿಕವಾದ ಆಸಕ್ತಿ ಇರಬಹುದು. ಸ್ಥಾನಿಕವಾದ ಆಸಕ್ತಿ ಎಂದರೆ ಶ್ರೀ ಮಾನ್ ಲಿಂಗಪ್ಪನವರು ಹೇಳಿದ ಮಾತಿಗೆ ಬರುತ್ತೇನೆ. ಸ್ಥಾನಿಕವಾದ ಆಸಕ್ತಿ ಎಂದರೆ ನೆಂಟರು, ಬಂಧುಗಳು ಇದ್ದರೆ ಸ್ವಜನರಾಗುತ್ತಾರೆ, ಆಗ ಸ್ವಜನರಿಗೆ ಪಕ್ಷಪಾತ ಮಾಡುವ ದೃಷ್ಟಿಯಿಂದ ಹಾಗೆ ಮಾಡಿದ್ದರೆ ಅದು ತಪ್ಪು ; ಅಪರಾಧ ಎಂದು ಹೇಳುತ್ತೇನೆ. ನಾವು ಈ ರೀತಿಯಾದಂಥ ಟೀಕೆ ಮಾಡುವಾಗ ಈ ಒಂದು ಸಂಸ್ಥೆ ಉದ್ದೇಶ, ಗುರಿ ಏನು ಅದರ ವ್ಯಾಪ್ತಿ ಏನು ಎನ್ನುವುದನ್ನು ತಿಳಿದುಕೊಂಡು ಆ ಟೀಕೆಯನ್ನು ವಿಮರ್ಶೆ ಮಾಡೋಣ ಈಗ ಶ್ರೀ ಮಾನ್ ಲಿಂಗಪ್ಪನವರು ಹೇಳಿದವರೆಲ್ಲಾ ಅವರ ಸಂಬಂಧಿಗಳು ಹೌದು ಅಲ್ಲವೋ ನನಗೆ ಗೊತ್ತಿಲ್ಲ. ಅವರು ಹೇಳುವ ಪ್ರಕಾರ ಅಲ್ಲ. ಇನ್ನು ಬಾದರಾಯಣ ಸಂಬಂಧ ಎಂದು ಇದೆ. ಈಗ ಕೋಣಂದೂರು ಲಿಂಗಪ್ಪನವರು, ಎಸ್.ಎಂ. ಲಿಂಗಪ್ಪನವರು ಮತ್ತೊಬ್ಬ ಲಿಂಗಪ್ಪನವರು ಇದ್ದರೆ ಅವರೆಲ್ಲಾ ಸೇರಿದರೆ ಎಲ್ಲಾ ಲಿಂಗಪ್ಪನವರು ಒಂದೇ ಎನ್ನುವುದು ಇದು ಬಾದರಾಯಣ ಸಂಬಂಧ ಎಂದು ಹೇಳಬಹುದು.

ಶ್ರೀ ಎಚ್‌.ಎಸ್‌. ಸಿದ್ದಪ್ಪ.—ಎಲ್ಲರೂ ಪುಲ್ಲಿಂಗಪ್ಪನವರೇ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಎಲ್ಲರನ್ನೂ ಲಿಂಗಮಯ ಮಾಡುತ್ತಿದ್ದೀರಲ್ಲಾ ಸ್ವಾಮಿ.

ಶ್ರೀ ಡಿ. ದೇವರಾಜ್ ಅರಸ್.—ಎಲ್ಲರೂ ಲಿಂಗಮಯ ಆಗಿಬಿಟ್ಟಿದ್ದಾರೆ. ಹಾಗೆಯೇ ಎಲ್ಲರೂ ಅವರ ಬಾಧುಗಳೇ, ನೆಂಟರೇ, ಸಹೋದರರೇ. ಹಾಗೆಯೇ ಕೃಷ್ಣಪ್ಪ ಗೌಡರು ಭೀಮಪ್ಪ ಗೌಡರು, ರಾಮಪ್ಪ ಗೌಡರು ಇದ್ದರೆ ಅವರೆಲ್ಲಾ ಬಂಧುಗಳೇ. ಅಥವಾ ಪಾಟೀಲ್ ಅನ್ನುವ ಹೆಸರು ತೆಗೆದು ಕೊಂಡರೆ ಎಸ್.ಎಂ. ಪಾಟೀಲ್ ಆರ್ ಎಂ. ಪಾಟೀಲ್ ಆ ರೀತಿ ಇದ್ದರೆ ಎಲ್ಲಾ ಪಾಟೀಲರ ಬಾಧುಗಳೇ. ಒಂದು ರೀತಿಯಲ್ಲಿ ಇದು ಸರಿಯೂ ಹೌದು, ಒಂದು ರೀತಿಯಲ್ಲಿ ಅದಕ್ಕೆ ಅರ್ಥವೂ ಇಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಇದನ್ನು ರುಜುವಾತು ಮಾಡಿಸುವುದಕ್ಕೆ ವಿಚಾರಣೆ ನಡೆಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದೆಲ್ಲಾ ಗೊತ್ತಾಗಲಿ. ಗದಗಿಗೆ ಹೋಗಿ ಕೇಳಿಕೊಂಡು ಬನ್ನಿ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಚಾಚಾಕು, ನನ್ನೇಕು, ಬೆಟೇಕು ಸಂಬಂಧ ಇದ್ದ ಹಾಗೆ

ಶ್ರೀ ಡಿ. ದೇವರಾಜ ಅರಸ್.—ಹಾಗೆ ಬಾದರಾಯಣ ಸಂಬಂಧ ಕಲ್ಪಿಸಿದವರೆಲ್ಲರೂ ಅದಕ್ಕೆ ಸೇರಿದ್ದಾರೆ.

ಈಗ ಕೋಆಪರೇಟಿವ್ ಸೊಸೈಟಿ ಬಗ್ಗೆ ಹೇಳುತ್ತೇನೆ. ಅಧ್ಯಕ್ಷರೇ, ಕಾನೂನಿನಲ್ಲಿ ಏನು ಇದೆ ಎಂದರೆ ಕನಿಷ್ಟ ೧೨ ಜನ ಸೇರಿಬಿಟ್ಟರೆ ಒಂದು ಸೊಸೈಟಿ ಸ್ಥಾಪನೆ ಮಾಡಬಹುದು. ಅದು ೧೨ ಜನರಿಂದ ೧೨ ಲಕ್ಷಕ್ಕೂ ಹೋಗಬಹುದು. ಒಂದು ವೇಳೆ ಶ್ರೀ ಮಾನ್ಯ ಕೊಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಅವರ ಆರ್ಗ್ಯುಮೆಂಟ್ ಸೇಕ್‌ಗೆ ಹೇಳುವುದಾದರೆ ೧೨ ಅಥವಾ ೧೫ ಜನ ಅವರ ಬಾಧುಗಳೇ ಸೇರಿ ಸೊಸೈಟಿಯನ್ನು ಸ್ಥಾಪನೆ ಮಾಡಿ ದುಡ್ಡನ್ನು ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆಯೇ ? ಕಾನೂನು ಪ್ರಕಾರ ಅವರು ಬಾಧುಗಳು ಅಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ಲಿಂಗಪ್ಪನವರು ಅಣ್ಣತಮ್ಮಂದಿ ರಾಗಿದ್ದರೂ ಅವರ ಸಂಸಾರ ಬೇರೆ ಇರಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—೧೨ ಜನರ ಸಮಿತಿ ಮಾಡಿರುವುದು ಪಿರಿಯಾಪಟ್ಟಣ ಸೊಸೈಟಿ ನಮ್ಮ ಕಡೆದು ಎಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲೋ ಕೇಳಿಕೊಂಡು ಬಂದು ಬಾಧುಗಳು ಎಂದು ಹೇಳುತ್ತಾರೆ. ಆದರೆ ಅವರು ಆರೀತಿ ಮಾಡಿರುವುದು ವ್ಯವಹಾರಿಕವೇ ಅಲ್ಲವೇ ಎನ್ನುವ ಮಾತು ಬೇರೆ. ಕಾನೂನು ರೀತ್ಯ ಕೇಳಿದರೆ Technically and legally nobody can say it is wrong. ೧೨ ಜನರ ಮೇಲ್ಪಟ್ಟು ಅಥವಾ ೧೫ ಜನರ ಮೇಲ್ಪಟ್ಟು ಅಣ್ಣತಮ್ಮಂದಿರೇ ಇರಲಿ, ಬೇರೇ ಬೇರೇ ಜನರೇ ಇರಲಿ ಒಟ್ಟಿನಲ್ಲಿ ಸೇರುವುದಕ್ಕೆ ಕಾನೂನಿನಲ್ಲಿ ನಿಷೇಧವಿಲ್ಲ. ಆದರೆ ಗದಗ್ ಕಾಟನ್ ಕೋ ಆಪರೇಟೀವ್ ಸೊಸೈಟಿಯಲ್ಲಿ ನೋಡಿದರೆ ಒಟ್ಟು ಸಂಖ್ಯೆ ೩,೨೦೦ ಜನರಿದ್ದಾರೆ, ಅದರಲ್ಲಿ ೧೪೦ ಸೊಸೈಟಿಗಳು ಸೇರಿವೆ. ಅದರ ವ್ಯಾಪ್ತಿ ಇಡೀ ಧಾರವಾಡ ಜಿಲ್ಲೆಗೆ ಸೇರಿದ ಹಾಗಾಗಿದೆ. ಹೀಗಿದ್ದರೆ ಅವರೆಲ್ಲಾ ನಮ್ಮ ಬಂಧುಗಳು ಆದರೆ ? ಬಹಂಶಃ ೩,೨೦೦ ಜನರಲ್ಲಿ ೩೦೦ ಜನಗಳು ಬಂಧುಗಳು ಇದ್ದರೆ ಅದರಲ್ಲಿ ಏನು ತಪ್ಪೋ ಗೊತ್ತಾಗುವುದಿಲ್ಲ. ಅವರ ಜಾತಿಯವರು ಇರಬಹದು, ಅದರಲ್ಲಿ ರೈತರಾಗಿರುವವರೆಲ್ಲರೂ ಸದಸ್ಯ ರಾಗಿರುವುದಕ್ಕೆ ಅವಕಾಶ ಇದೆ. ಹಾಗೆಯೇ ಲಿಂಗಪ್ಪನವರ ಬಂಧುಗಳು ಆಗಿದ್ದರೆ, ಅವರು ಉಳುಮೆ ಮಾಡುವುದಕ್ಕೆ ಸಾಲ ತೆಗೆದುಕೊಂಡರೆ, ಲಿಂಗಪ್ಪನವರು ಅಸೆಂಬ್ಲಿ ಮೆಂಬರ್ ಆಗಿದ್ದಾರೆ, ಅವರು ಅವರ ಬಂಧುಗಳು ಅದ್ದರಿಂದ ಅವರು ಸಾಲ ತೆಗೆದುಕೊಳ್ಳಕೂಡದು ಎಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ಮಾನ್ ಲಿಂಗಪ್ಪನವರು ಶಾಸನ ಸಭೆಯ ಸದಸ್ಯರಾಗಿ ಅವರ ಪ್ರಭಾವವನ್ನು ಬೀರಿ ಅವರೇ ಎಲ್ಲಾ ಸಾಲವನ್ನೂ ಕೊಡಿಸಿ ಬಿಟ್ಟಿದ್ದಾರೆ ಎಂದು ದೋಷಣೆ ಮಾಡಿದ್ದಾರೆ ನಾನು ಅದನ್ನು ಕೇಳುವುದಕ್ಕೆ ತಯಾರಿಲ್ಲ. ಯಾವಾಗ ದೋಷಣೆಗೆ ಅರ್ಹರಾಗುತ್ತಾರೆ ಎಂದರೆ ಯಾರಿಗೋ ಕೊಡುವ ಹಣವನ್ನು ಅವರಿಗೆ ಕೊಡದ ಹಾಗೆ ಮಾಡಿ ತಮಗೆ ಬೇಕಾದಂಥ ಬಂಧುಗಳಿಗೆ, ಸ್ವಜನರಿಗೆ ಕೊಟ್ಟಿದ್ದರೆ ಆವಾಗ ಅದು ತಪ್ಪಾಗುತ್ತದೆ. ಇನ್ನು ಯಾರಿಗೋ ಕೊಡುವ ಷೇರನ್ನು ಕಿತ್ತುಕೊಂಡು ಇನ್ನು ಯಾರಿಗೂ ಕೊಟ್ಟಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಮೊದಲೇ ಈ ರಿಪೋರ್ಟ್ ಈ ಸದನದಲ್ಲಿ ಬಂದು ಬಿಟ್ಟಿದ್ದರೆ ಇಷ್ಟೊಂದು ಗಡಿಬಿಡಿ ಆಗುತ್ತಿರಲಿಲ್ಲ ಎಂದು ನನಗೆ ಅನಿಸುತ್ತದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಮುಂದೆಯಾದರೂ ಇಂತಹ ರಿಪೋರ್ಟುಗಳು ಇಲ್ಲಿಯೇ ಬಂದುಬಿಡಲಿ.

ಶ್ರೀ ಡಿ. ದೇವರಾಜ ಅರಸ್.—ಇದು ಅನಿವಾರ್ಯವಾಗಿ ಬಂತು. ನಮಗೆ ಗೊತ್ತಾಗಲಿಲ್ಲ. ಇದನ್ನು ಯಾರೂ ಉದ್ದೇಶಪೂರ್ವಕವಾಗಿ ಅವಾಯಿಡ್ ಮಾಡಿದ್ದಲ್ಲಾ. ಅದು ಎಲ್ಲರಿಗೂ ಗೊತ್ತಿದೆ. ಈ ಮನೆಯಲ್ಲಿ ಯಾರೇ ಮಾತನಾಡಿರಲಿ ಹೇಳಿದ್ದೆಲ್ಲವನ್ನೂ ದೂರೀಕರಿಸಿ ಬೀಸಾಡುವಂಥ ಧೋರಣೆಯಿಂದ ಮಾತನಾಡುತ್ತಾ ಇಲ್ಲ ಎಂದು ಸ್ಪಷ್ಟಪಡಿಸಬೇಕಾಗಿದೆ ಆದರೆ ನೀವು ಸ್ವಲ್ಪಮಟ್ಟಿಗೆ ಜವಾಬ್ದಾರಿ ಅರಿತು ಕೊಂಡು ಹೇಳಿದ್ದೀರಿ. ಜವಾಬ್ದಾರಿ ರಹಿತವಾದ ಮಾತುಗಳನ್ನು ಆಡಿದ್ದೀರಿ ಎಂದು ನಾನು ಹೇಳುತ್ತಾ ಇಲ್ಲ. ಈ ಕಾರಣದಿಂದ ನಾನು ಹೇಳುತ್ತೇನೆ. ರಿಪೋರ್ಟ್ ಮೊದಲೇ ಇಲ್ಲಿ ಬಂದು ಬಿಟ್ಟಿದ್ದರೆ ಚೆನ್ನಾಗಿತ್ತು. ಅಲ್ಲಿ ಚರ್ಚೆ ಆಗುವುದಕ್ಕಿಂತ ಮುಂದೆ ಈ ಮನೆಯಲ್ಲೇ ಚರ್ಚೆ ಆಗಿದ್ದರೆ ಅನಾವಶ್ಯಕವಾದ ಈ ಗಾಳಿ, ಧೂಳು, ಏಳಬೇಕಾಗಿರಲಿಲ್ಲ. ಏನೇ ಆಗಲಿ. ಈಗ ರಿಪೋರ್ಟ್ ಬಂತು. ಈಗ ಕೆಲವರು ಈ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲೂ ಶ್ರೀ ಮಾನ್ ಕೃಷ್ಣನ್ ಅವರು ಇಂಜನೀಯರ್ ಆದರೂ ಮ್ಯಾನ್ ಆಫ್ ಸೈನ್ಸ್ ವಿಜ್ಞಾನಶಾಸ್ತ್ರವನ್ನು ಓದಿದವರು. ಹಾಗೆ ವಿಜ್ಞಾನ ಶಾಸ್ತ್ರವನ್ನು ಓದಿದವರಿಗೆ ರೀಸನಿಂಗ್ ಕೆಪಾಸಿಟಿ ಜಾಸ್ತಿ ಇರುತ್ತದೆ. ಹಾಗೆಯೇ ಪಾಲಿಟಿಕ್ಸ್‌ನಲ್ಲೂ ಕೂಡ ರೀಸನಿಂಗ್ ಕೆಪಾಸಿಟಿ ಜಾಸ್ತಿ ಹೆಚ್ಚು ಇದ್ದರೆ ಒಳ್ಳೆಯದು. ತಾವು ವರದಿ ಬರೆಯುವುದಕ್ಕೆ ಭಾಗಿಯಾಗಿರುವುದರಿಂದ ತಾವು ವಾಧಿಸಲೇಬೇಕು ಆದರೂ ಬರೆದು ಆಗಿ ಹೋಗಿದೆ. ಏನು ಬರೆದಿದ್ದೀರಿ ಅದನ್ನು ವಾದಿಸಿಯೇ ತೀರಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆ ತರಹ ವಿಜ್ಞಾನಿ ಅಲ್ಲ, ತಾವು ವಿಜ್ಞಾನಿ ಎಂದು ಹೇಳಿದ ಮೇಲೆ ತಾವು ಅದನ್ನು ಅನೆಲೈಸ್ ಮಾಡಿ ಹೇಳಿದರೆ ಒಳ್ಳೆಯದು.

ಶ್ರೀ ಡಿ ದೇವರಾಜ ಅರಸ್.—ಅನಲೈಸ್ ಮಾಡಿ ಎಂದು ಹೇಳಿದರು. ಅದರಲ್ಲಿ ಮೂರು ವಿಧ. ಒಂದು ಎಕ್ಸ್‌ಪರ್‌ಮೆಂಟಲ್, ಅಬ್ಸರ್‌ವೇಷನ್ ಮತ್ತು ಇನ್‌ಫರೆನ್ಸ್ ಇದೆಲ್ಲವನ್ನು ಬಿಟ್ಟು ಮಾನ್ಯ ಕೃಷ್ಣನ್‌ರವರು ಅಲ್ಲಿ ದಾರಿ ತಪ್ಪಿದ್ದಾರೆ. ಇನ್‌ಫರೆನ್ಸ್ ಬರೆಯುವಾಗ ತಪ್ಪಿದ್ದಾರೆ.

ಶ್ರೀ ಎಂ ಎಸ್. ಕೃಷ್ಣನ್.—ತಾವು ಸೈನ್ಸ್ ಬಗ್ಗೆ ಅಷ್ಟು ಹೇಳುವುದಕ್ಕೆ ಹೋಗಬೇಡಿ ?

ಶ್ರೀ ಡಿ. ದೇವರಾಜ್ ಅರಸ್—ಸ್ವಾಮಿ ನಾನು ಬಿ.ಎಸ್.ಸಿ. ಸ್ಟೂಡೆಂಟ್ ಆಗಿದ್ದೇನೆ ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದಿದ್ದೇನೆ ನಿಮ್ಮ ಇನ್‌ಫರೆನ್ಸ್ ದಾರಿ ತಪ್ಪಿಹೋಗಿದೆ. ಅದರಲ್ಲಿ ಒಬ್ಬರು ಒಂದು ರೀತಿ ಇನ್‌ಫರೆನ್ಸ್‌ಗೆ ಬಂದಿರುತ್ತಾರೆ ಇನ್ನೊಬ್ಬರು ಇನ್ನೊಂದು ರೀತಿ ಇನ್‌ಫರೆನ್ಸ್‌ಗೆ ಬರುತ್ತಾರೆ. ತಮ್ಮ ಅಭಿಪ್ರಾಯದಲ್ಲಿ ಇರುವ ಇನ್‌ಫರೆನ್ಸ್ ಸರಿಯಾದುದು ಅಲ್ಲ. ಆದ್ದರಿಂದ ನಿಮ್ಮ ಇನ್‌ಫರೆನ್ಸ್ ಸರಿ ಹೇಗೆ ಸರಿಯಿಲ್ಲ ಎಂದು ಹೇಳುತ್ತೇನೆ. ತಾವು ಫ್ಯಾಕ್ಟ್ಸ್ ಕಲೆಕ್ಟ್ ಮಾಡುವುದರಲ್ಲಿ ಮೊದಲೇ ತಳಹದಿ ಹಾಕುವುದರಲ್ಲಿ ತಪ್ಪು ಹಾಕಿದ್ದೀರಿ. ಪ್ರತಿಯೊಂದೂ ತಪ್ಪು ಆಗಿ ಉದ್ದಕ್ಕೂ ಹಾಗೆಯೇ ಬಂದಿದೆ. ವೆಸ್ಟೆಡ್ ಇಂಟರೆಸ್ಟ್ ಎಂದರೆ ಯಾವುದು ಎಂದು ಹೇಳಿದ್ದಾರೆ. ಇದು ಆಗ್ರೋ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟದ್ದು ಅಲ್ಲವೇ ಅಲ್ಲ ಎಂದು ಹೇಳಿದಮೇಲೆ ದುಡ್ಡು ಕೊಡುವುದಕ್ಕೆ ಸವಲತ್ತು ಮತ್ತು ಮಾಡುವುದಕ್ಕೆ ಕಾರಣ ಎಂಬುದೇ ವೆಸ್ಟೆಡ್ ಇಂಟರೆಸ್ಟ್ ಎಂದು ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅದೇ ಬೀಜಾಪುರ ಟೆಕ್ಸ್‌ಟೈಲ್ ಮಿಲ್ಲಿಗೆ ಏತಕ್ಕೆ ಕೊಟ್ಟಿಲ್ಲ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೂ ಕೊಟ್ಟಿದ್ದಾರೆ ಸ್ವಾಮಿ, ನಾಳೆ ಬೇಕಾದರೆ ವಿವರ ಕೊಡುತ್ತೇನೆ. ನಾನು ತಮಗೆ ಒಂದು ಭರವಸೆ ಕೊಡುವುದು ಏನು ಎಂದರೆ ನಿಮ್ಮ ಕ್ಷೇತ್ರಕ್ಕೆ ಎಷ್ಟು ಅವಸರವಾಗಿ ಕೊಟ್ಟಿದ್ದೀರಿ ಅದೇ ನಮ್ಮ ಕ್ಷೇತ್ರಕ್ಕೆ ಕೊಡುತ್ತೀರಾ ಎಂದು ಶ್ರೀ ಮಾನ್ ಮಂಜುನಾಥ್‌ರವರು ಕೇಳಿದರು. ಇನ್ನು ಕೆಲವರು ನಮ್ಮಲ್ಲಿ ಭೂಮಿ ಬೇಗ ಹಂಚಿಲ್ಲ, ನೀವು ಬೇಗ ಮಾಡಿಕೊಡಬೇಕು ಎಂದು ಹೇಳಿದರು. ಅವನ್ನು ಮಾಡಿಕೊಡೋಣ. ಆದರೆ ನಾನು ಹೇಳುವುದು ಇಷ್ಟೇ ಅವರಿಗೆ ಅಷ್ಟು ಬೇಗ ಅನುಕೂಲಗಳನ್ನು ಕೊಡುತ್ತೀರಿ ನಮಗೆ ಕೊಡುವುದಿಲ್ಲವೆಂದು ಹೇಳಿದರೆ ಅದು ಏತಕ್ಕೆ ನಿಧಾನವಾಯಿತು ಎಂಬುದು ನಿಮಗೆ ಗೊತ್ತಾಗಬೇಕಾದರೆ ತಾವು ಬನ್ನಿ ಚರ್ಚೆಮಾಡಿ ಅದಕ್ಕೆ ಸೂಕ್ತ ವಿವರ ಕೊಡೋಣ. ನೀವು ನಿಮ್ಮ ಕ್ಷೇತ್ರದ ಬಗ್ಗೆ ಕಳಕಳಿಯಿಟ್ಟುಕೊಂಡು ಮುಂದೆ ಬಂದರೆ ಎಷ್ಟು ಬೇಗ ಬೇಕೋ ಅಷ್ಟುಬೇಗ ಸಹಾಯ ಮತ್ತು ಸಹಕಾರವನ್ನು ಎಲ್ಲಾ ಸಂಸ್ಥೆಗಳಿಂದ ಕೊಡಿಸೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಏನು ಸ್ವಾಮಿ ವೈಯಕ್ತಿವಾಗಿ ಸಹಾಯ ಮಾಡುತ್ತೇವೆಂದು ಹೇಳಿ ಅವರ ಒಲವನ್ನು ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಡಿ. ದೇವರಾಜ್ ಅರಸ್.—ತಾವು ಭೂಮಿ ಕೊಡಲಿಲ್ಲ ಎಂದು ಹೇಳುತ್ತೀರಿ ? ಇನ್ನೊಬ್ಬರು ಇನ್ನೊಂದು ಮಾಡಲಿಲ್ಲ ಎಂದು ಹೇಳುವವರು ಇದ್ದಾರೆ. ಆದ್ದರಿಂದ ಯಾವುದನ್ನೂ ಎಷ್ಟು ಆತುರವಾಗಿ ಮಾಡಬೇಕೆಂದು ತಿಳಿದುಕೊಂಡು ಮಾಡೋಣ. ಆದರೆ ಈ ಸಂಸ್ಥೆ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಅಲ್ಲ ಎಂದು ಹೇಳುವುದನ್ನು ನಾವು ಬಹುಮಟ್ಟಿಗೆ ಒಪ್ಪಿಕೊಳ್ಳೋಣ. ಆದರೆ ಇಷ್ಟು ಆತುರವಾಗಿ ಏತಕ್ಕೆ ಮಾಡಬೇಕಾಗಿತ್ತು ಎಂಬುದನ್ನು ಈ ಸಭೆಯಲ್ಲಿ ನಾವು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ಆದರೆ ಶ್ರೀ ಮಾನ್ ಎಂ ಎಸ್. ಕೃಷ್ಣನ್‌ರವರು ಬಹಳ ಸಾಧನೆಮಾಡಿದರು ಅದನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಆದರೆ ಅದರಿಂದ ರಿಸಲ್ಟ್ ಬಂದಿಲ್ಲ.

ಶ್ರೀ ಎಂ. ಎಸ್, ಕೃಷ್ಣನ್,—ಇನ್ನು ಒಂದು ವಿಷಯದಲ್ಲಿ ಶ್ರೀ ಮಾನ್ ಕೆ. ಎಚ್, ಪಾಟೀಲ್ ಮತ್ತು ಮಾನ್ಯ ಸಿದ್ದವೀರಪ್ಪನವರು ಒಂದು ನೋಟಿಫಿಕೇಷನ್ ಓದಿದರು........

ಶ್ರೀ ಡಿ. ದೇವರಾಜ್ ಅರಸ್,—ಸ್ವಾಮಿ ನಾನು ಹೇಳುವುದನ್ನು ಕೇಳಿ ಹೇಳುತ್ತೇನೆ.........

ಶ್ರೀ ಮಾನ್ ಕೃಷ್ಣನ್‌ರವರು ತಮ್ಮದು ಒಂದು ಚತುರತೆ ಏನು ಎಂದರೆ ಕತೆಯಲ್ಲಿ ಮೂಲ ಓದುವದವನ್ನು ಬಿಟ್ಟು ಬಿಟ್ಟು ಕೊನೆಗೆ ಬಂದುಬಿಟ್ಟರು, ಇದರ ಮೊದಲನೆ ಪ್ಯಾರವನ್ನು ಓದೋಣ, ಪ್ರಥಮ ಪ್ಯಾರದಲ್ಲಿ ಏನು ಶುರು ಆಗುತ್ತದೆ, ಅದನ್ನು ಓದೋಣ ಸ್ವಾಮಿ ? What I read, the Hon. Members may kindly note : "The Act provided for the incorporation and regulation of a Corporation for the purpose of development of Agricultural Produce and certain other commodities on Co-operative principles and for matters connected therewith." ಇದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡರೆ ಬಾಕಿ ಎಲ್ಲಾ ಅರ್ಥವಾಗುತ್ತದೆ, ಇದನ್ನು ಅಪಾರ್ಥ ಮಾಡಿಕೊಂಡರೆ ಬಾಕಿ ಎಲ್ಲಾ ಅಪಾರ್ಥವಾಗುತ್ತದೆ, ತಾವು ಇದನ್ನು ಓದಿದ್ದೀರಿ, ಅದರಿಂದ ಅಪಾರ್ಥವಾಗತಕ್ಕಂಥದ್ದನ್ನು ಹೇಳಿದ್ದೀರಿ. ಡೆವಲಫ್‌ಮೆಂಟ್‌ಲ್ ಎಂದರೆ, ಅಗ್ರಿಕಲ್ಚರ್ ಪ್ರಾಡಕ್ಟ್ಸ್ ಎಂದರೆ, ವ್ಯವಸಾಯದ ಉತ್ಪತ್ತಿ ಆಗದ ಅಗ್ರಿಕಲ್ಚರ್ ಪ್ರೊಡ್ಯೂಸ್ ಎಂದರೆ ಹೀಗೆ ಎ.ಬಿ.ಸಿ.ಡಿ, ಹೇಳಿದೆ ....

ಶ್ರೀ ಎಚ್. ಟಿ. ಕೃಷ್ಣಪ್ಪ,—ಹೋಟೆಲ್ ಇಂಡಸ್ಟ್ರೀಸ್ ಕೂಡಾ ಇದಕ್ಕೆ ಸೇರುತ್ತದೆಯೇ ಸ್ವಾಮಿ?

ಶ್ರೀ ಡಿ. ದೇವರಾಜ್ ಅರಸ್,—ನಿಮ್ಮ ಮನಸ್ಸಿನಲ್ಲಿ ಇಲ್ಲ ಎಂದು ಬರೆಯುವುದಕ್ಕೆ ಹೊರಟರೆ ಅಗ್ರಿಕಲ್ಚರ್ ಪ್ರೊಡ್ಯೂಸ್ ವ್ಯವಸಾಯದಿಂದ ಉತ್ಪತ್ತಿ ಆದ ಯಾವುದೇ ವಸು ಡೆವಲಫ್‌ಮೆಂಟಲ್ ಪ್ರೊಡ್ಯೂಸ್ ಅಲ್ಲ ಎನ್ನುವ ಮಾತನ್ನು ಹೇಳಿದೆ,

ಅಗ್ರಿಕಲ್‌ಚರಲ್ ಪ್ರಡ್ಯೂಸ್ ಎಂದರೆ ಏನು?

6-30 p. m.

Section 2 of the National Co-operative Development Corporation Act, 1962 reads thus.

"2. In this Act, unless the context otherwise requires.—

(a) "agricultural produce" means any of the following classes of commodities, namely.— ಎಂದು ಉದ್ದಕ್ಕೂ ಹೇಳಿಕೊಂಡು ಹೋಗಿದ್ದಾರೆ.

(i) foodstuffs, including edible oil seeds;
(ii) cattle fodder, including oil-cakes and other concentrates,
(iii) raw cotton, whether ginned or unginned and cotton seeds,
(iv) raw jute; and
(v) vegetable oils.

Sri M. S. KRISHNAN.— What the hon. Chief Minister has read out is correct, But I would like to bring to his notice item (e) of Section 2 of the NCDS Act which reads as follows.—

(e) "notified commodity" means any commodity (other than agricultural produce) which the Central Government may, by notification in the Official Gazette, declare to be a notified commodity for the purposes of this Act, being a commodity with respect to which Parliment has power to make laws by virtue of entry 33 in List III in the Seventh Schedule to the Constitution."

The soaps, kerosene, textile, cement etc., are all notified commodities which are not agricultural produce according to this Act. I would also like to draw the attention of the hon. Chief Minister to another aspect which may be interpreted in any manner. I shall read section 9 (1).—

"9 (1) Subject to the provisions of this Act, the functions of the Corporatian shall be to plan and promote programmes for the production, processing, marketing, storage, export and import of agricultural produce and notified commodities through co-operative societies."

9 (2) In Particular and without prejudice to the generality of the foregoing provision, the Corporation may—

(a) advance loans or grant subsidies to State Governments for financing co-operative societies and for employment of staff for implementing programmes of co-operative development;

(b) provide funds to state Governments for financing co-operative societies for the purchase of agricultural produce and notified commodities on behalf of the Central Government;

(c) plan and promote programmes through co-operative societies for the supply of seeds, manures, fertilizers, agricultural implements and other articles for the development of agricultural produce.

My submission is as stated in sub-section (2) of section 9, it only means that the Corporation can provide funds to State Governments for financing co-operative societies for the purchase of agricultural produce and notified commodities on behalf of the Central Government. I am not opposed to the coming in of the Co-operative Textile Mill at Gadag, but I am only pointing out the relevant provisions. ನೀವು ಬಹಳ ಬುದ್ಧಿವಂತಿಕೆಯಿಂದ ಓದಿದಿರಿ, ಅದಕ್ಕೋಸ್ಕರ ನಾನು ಓದಿ ಹೇಳುತ್ತಿದ್ದೇನೆ.

Sri D. DEVARAJ URS.—ನಿಮ್ಮ ಬುದ್ಧಿವಂತಿಕೆ ನನಗೂ ಗೊತ್ತಿದೆ. I have every right to say as Government what we consider to be the agricultural produce and its processing. I know, as a legislator, what is clear to Government. The hon. member Sri Krishnan has already aired his opinion and I request to listen to me patiently. Cotton is an agricultural commodity.

(SRI D. DEVARAJ URS)

ಅಗ್ರಿಕಲ್ಚರಲ್ ಪ್ರಾಡಕ್ಟ್ಸ್ ಎಂದರೆ, ಕಾಟನ್ ಪ್ರೆಸ್ಸಿಂಗ್, ಜಿನ್ನಿಂಗ್. ಜಿನ್ಡ್ ಆರ್ ಅನ್ ಜಿನ್ಡ್ ಎಂದು ಹೇಳಿದರೆ, ನೂಲು ಮಾಡತಕ್ಕದ್ದು. ಇದನ್ನು ನೀವು ಹೇಳಿದಿರಾ? ನೀವು ಏನೇನೊ ಹೇಳಿಕೊಂಡರೆ ನಾನು ಏನು ಮಾಡ್ಲಿ. ಅದನ್ನು ಸರ್ಕಾರ ಒಪ್ಪುವುದಿಲ್ಲ, ದೇಶ ಒಪ್ಪುವುದಿಲ್ಲ, ಕೇಂದ್ರ ಸರ್ಕಾರವೂ ಒಪ್ಪಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ದೇಶದ ವಿಚಾರ ಇಲ್ಲಿ ಬರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.— ದೇಶದ ಪರವಾಗಿ ನಾನು ಮಾತನಾಡುವುದಕ್ಕಾಗುವುದಿಲ್ಲವೆ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ, ಕಾನೂನಿನಲ್ಲಿ ಇದನ್ನು ಹೇಳಿದೆ, ಆದ್ದರಿಂದ ಈ ಒಂದು ಇಂಡಸ್ಟ್ರಿಗೆ ಇಲ್ಲಿ ಅವಕಾಶವಿದೆ. ಆ ಕಾನೂನನ್ನು ಇವರೂ ಓದಿರಬಹುದು. ಆದರೆ ಅದಕ್ಕೆ ಡಿಫರೆನ್ಸ್ ಇಂಟರ್‌ಪ್ರಿಟೇಷನ್ ಅನ್ನು ವಿಪರೀತ ಮಾಡಿಬಿಟ್ಟರು. ಆ ವೈಪರೀತ್ಯದಿಂದ ಇತರೆ ವೈಪರೀತ್ಯಗಳು ಪ್ರಾರಂಭವಾಗಿವೆ. ಮತ್ತೆ ಇನ್ನೊಂದು ವಿಚಾರ, ಇವರು ಚೇರ್ಮನ್‌ರನ್ನು ಕೇಳಿದರು, ಇವರು ಕೇಳಿದಕ್ಕೆ ಅವರು ಡಿಫೈನ್ ಮಾಡಲಿಲ್ಲ. ಆದ್ದರಿಂದ ಇವರು ಒಂದು ಕನ್‌ಕ್ಲೂಷನ್‌ಗೆ ಬಂದರು.

The Chairman while giving evidence before the Committee has stated that this commodity has not been defined. But is it conclusive proof to say that this is not an agricultural produce. ಅವರು ಗೊತ್ತಿಲ್ಲ ಎಂದು ಹೇಳಿಬಿಟ್ಟರೆ ಏನು? ದಯಮಾಡಿ ಕೇಳಿ, ತಾವೂ ಸ್ವಲ್ಪ ಸರಿಯಾಗಿ ನೋಡಬೇಕು. ಈ ಕಮಿಟಿಗೆ ಇರತಕ್ಕ ವ್ಯಾಪ್ತಿ ಇಷ್ಟೊಂದಲ್ಲ. ನೀವು ಮೂಲತಃ ಸರ್ಕಾರ ತಪ್ಪು ಮಾಡಿದೆ ಎಂದು ಹೇಳಬೇಕಾದರೆ ...

He was talking not on behalf of Government but he was talking on behalf of the Corporation.

Sri M. S. KRISHNAN.—Is it not the duty of the Officer to know all these things.

Sri D. DEVARAJ URS.— I am pointing out where the hon. members of the committee have not taken into account what they should have done. They should have gone into this question when the Chairman stated that he did not know whether it was defined on the basis of the Act.

As per the internal working of the PUC, the evidence of the undertaking and the departments concerned is also taken on the dates fixed by the committee. The undertaking or the Departments have to be represented by the Secretary or the Head of the Undertaking.

ಇವರು ಹೇಳಿದ್ದನ್ನೆಲ್ಲಾ ನಾನು ಸವಿನಯದಿಂದ ಕೇಳಿದ್ದೇನೆ, ಇವರು ಏಕೆ ಕೂಗಾಟ ಮಾಡುತ್ತಿದ್ದಾರೆ? ನೀವು ಹೇಳಿದ್ದನ್ನೆಲ್ಲಾ ಎಲ್ಲರಿಗೂ ಒಪ್ಪಿಸಿ ಬಿಡುವುದಕ್ಕಾಗುವುದಿಲ್ಲ. ನಿನ್ನೆಯೆ ಶ್ರೀಮಾನ್ ಪ್ರಭಾಕರ, ಅವರು ನಿಮಗೆ ಕಂಡದ್ದನ್ನು ಕಂಡ ಹಾಗೆ ಹೇಳಿದರೆ ಕೆಂಡದಂಥ ಕೋಪ ಎಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.— ಅದು ನಿಮಗೂ ಅನ್ವಯಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್.— ನಾವು ಏಕೆ ಹೀಗೆ ಬರೆದುಕೊಂಡು ಬಿಟ್ಟಿದ್ದೇವೆಂದು ಒದ್ದಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ನೀವೇ ಮೈಯನ್ನು ಪರಚಿಕೊಳ್ಳುತ್ತಿದ್ದೀರಿ.

ಶ್ರೀ ದೇವರಾಜ ಅರಸ್.— ಡಿಫೆಂಡ್ ಮಾಡುವ ಕಾಲದಲ್ಲಿ ಮಾಡಲೇಬೇಕು. ನೀವು ರಿಪೋರ್ಟ್ ಬರೆಯುವಾಗ ಜಾರಿ ಬಿದ್ದಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.— ನಿಮಗೆ ಎಷ್ಟು ಬುದ್ಧಿ ಇದೆಯೋ ಅಷ್ಟೇ ನಮಗೂ ಇದೆ.

ಶ್ರೀ ಡಿ. ದೇವರಾಜ ಅರಸ್.— ಇಂಟರ್ನಲ್ ವರ್ಕ್ಸ್ ಯಾವ ರೀತಿ ಇರಬೇಕು ಎಂದು ರೂಲ್ಸ್ ಮಾಡಿದ್ದಾರೆ, ಅದರ ಪ್ರಕಾರ ಡಿಪಾರ್ಟ್‌ಮೆಂಟ್ ಹೆಡ್‌ನ್ನು ಎವಿಡೆನ್ಸ್ ತೆಗೆದುಕೊಳ ಲಿಕ್ಕೆ ಕರೆಯಬೇಕು. ಇಲ್ಲಿ ಸೆಕ್ರೆಟರಿ ಆಫ್ ದಿ ಅಂಡರ್ ಟೇಕಿಂಗ್ಸ್ ಅನ್ನು ಕರೆಯಬೇಕು.

In case an officer of a lower rank wants to appear before the Committee, permission of the Chairman has to be obtained in advance.

ಅಂದರೆ ಮಿನಿಸ್ಟರ್ ಅನ್ನು ಸ್ವಾಭಾವಿಕವಾಗಿ ಕರೆಯಬಾರದು. The Minister always functions through the Secretary ಒಬ್ಬ ಮಂತ್ರಿ ಫೈಲ್‌ನಲ್ಲಿ ಆರ್ಡರ್ ಮಾಡಿಬಿಟ್ಟರೆ, ಇಂಥ ಒಂದು ಕೆಲಸ ಆಗಬೇಕು ಎಂದರೆ, ಅದು ಗವರ್ನಮೆಂಟ್ ಆರ್ಡರ್ ಅಲ್ಲ. ಇದು ಸೆಕ್ರೆಟರಿಯೇಟ್ ಮೂಲಕೇನ ಹೋಗುವವರೆಗೂ ಅದು ಸರ್ಕಾರಿ ಆಜ್ಞೆಯಾಗುವುದಿಲ್ಲ. ಸೆಕ್ರೆಟರಿ ರುಜು ಹಾಕಿ ಅದನ್ನು ಗವರ್ನಮೆಂಟ್ ಆರ್ಡರ್ ಎಂದು ಹೊರಡಿಸುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ಅಧಿಕಾರಿಗಳು ರುಜು ಹಾಕುವವರೆಗೂ ಅದು ಸರ್ಕಾರಿ ಆಜ್ಞೆಯಾಗುವುದಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.— ನೀವು ಮೊದಲೆ ಹುಟ್ಟಿದ್ದರೆ, ಡಾಕ್ಟರ್ ಅಂಬೇಡ್ಕರ್ ಅನ್ನು ಕೂರಿಸುವ ಬದಲು, ನಿಮ್ಮನ್ನೇ ಕೂಡಿಸಿ, ಕಾನ್ಸ್‌ಟಿಟ್ಯೂಷನ್ ಬರೆಸಬಹುದಾಗಿತ್ತು. ಅವರಿಗೆ ಗೊತ್ತಿಲ್ಲದಿರುವ ವಿಷಯ ತಿಳಿದುಕೊಳ್ಳಬೇಕೆಂಬ ಸೌಜನ್ಯವೂ ಇಲ್ಲ. ಹೀಗೆ ಮಾಡಿದರೆ ಏನು ಮಾಡುವುದು? ಜಿ. ಒ. ಆಗಬೇಕಾದರೆ ಅದಕ್ಕೆ ಕೆಲವು ಪ್ರೊಸೀಜರ್ ಇದೆ. ಲಗ್ನ ಆಗಬೇಕಾದರೆ ಯಾರಾದರೂ ಹುಡುಗಿಯನ್ನು ಎಳೆದುಕೊಂಡು ಹೋದರೆ ಆಗುವುದಿಲ್ಲ. ಮಂತ್ರಿಗಳನ್ನು ಕರೆಸಿಲ್ಲ. ಸೌಜನ್ಯಕ್ಕಾಗಿ ಕರೆಯುವ ಹಾಗಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಸಂಬಂಧಪಟ್ಟ ಸೆಕ್ರೆಟರಿಗಳನ್ನಾಗಲೀ ಅಥವಾ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನಾಗಲೀ ಕರೆಸಬೇಡವೇ? ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಛೇರ್ಮನ್ನರನ್ನು, ಅಧಿಕಾರಿಗಳನ್ನು ಕರೆಸಿ ಸಾಕ್ಷ್ಯ ತೆಗೆದುಕೊಂಡರು. ಶ್ರೀ ದೇವೇಗೌಡರು ಮತ್ತು ಶ್ರೀ ಆರ್ಮುಗಂ ಇವರುಗಳನ್ನು ಇನ್‌ವೈಟೀಸ್ ಎಂದು ಉದ್ದಕ್ಕೂ ಬರೆದುಕೊಂಡಿದ್ದಾರೆ. ಎಲ್ಲೂ ಕೂಡ ಅವರು ವಿಟನೆಸಸ್ ಎಂದು ಹೇಳಿಲ್ಲ. ಮೊದಲನೆಯ ಮೀಟಿಂಗು ೨೪-೫-೭೩ರಲ್ಲಿ ೯ ಗಂಟೆಗೆ ಆಯಿತು. ಅಂದು ಗುರುವಾರ, ೭ ಜನ ಸದಸ್ಯರು ಬಂದಿದ್ದರು, ಅವರಲ್ಲದೆ ಟಿ. ಹನುಮಂತಪ್ಪನವರು, ಕೆ ಎನ್. ರಾಮಕೃಷ್ಣಪ್ಪನವರು ಸೆಕ್ರೆಟೇರಿಯಟ್‌ನ ಪರವಾಗಿ ಹಾಜರಿದ್ದರು. ಆಮೇಲೆ ಇನ್‌ವೈಟೀಸ್ ಎಂಬ ಹೆಡಿಂಗ್ ಇದೆ, ಅದರ ಕೆಳಗೆ ದೇವೇಗೌಡರ ಮತ್ತು ಆರ್ಮುಗ ರವರ ಹೆಸರಿವೆ, ಮುಂದೆ ದೇವೇಗೌಡರು ಮತ್ತು ಆರ್ಮುಗಂರವರು ಹೇಳಿರುವುದಿದೆ. ಅದಾದ ಮೇಲೆ ಎರಡನೆ ಮೀಟಿಂಗು ಅದೇ ದಿನ ಅಂದರೆ ೨೪-೫-೭೩ರಲ್ಲಿ ೧೦ ಗಂಟೆಗೆ ಸೇರಿತು ಆಗ ಬಂದಿದ್ದ ವಿಟ್‌ನೆಸಸ್ ಎನ್. ಲಕ್ಷ್ಮಣ ರಾವ್, ಆರ್ ಎಸ್ ಎ ರಾವ್, ಗುರಪ್ಪಾಜಿ— ಜನರಲ್ ಮ್ಯಾನೇಜರ್, ರಾಮಕೃಷ್ಣ ನುರಿಯಾಯು— ಮ್ಯಾನೇಜರ್ (ವರ್ಕ್‌ಷಾಪ್) ಮೈಸೂರು ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್ ಇವರುಗಳು. ಅವರಿಗೆ ಶಿರೋನಾಮ ವಿಟ್‌ನೆಸಸ್ ಎಂದಿದೆ. ನಂತರ ಛೇರ್ಮನ್ನರು ಕೇಳಿದ್ದು ವಿಟ್‌ನೆಸಸ್ ಹೇಳಿದ್ದು ನಮೂದಾಗಿದೆ. ವಿಟ್‌ನೆಸಸ್ ಆಫೀಸರುಗಳು. ಆಫೀಸರುಗಳಾದ್ದರಿಂದ ಅವರನ್ನು ವಿಟ್‌ನೆಸಸ್ ಎಂದು ಸೂಚಿಸಿದ್ದಾರೆ. ಪೂರ್ವಗ್ರಹ ಪೀಡಿತರಾದ ಅಂಥ ಮನಸ್ಸುಳ್ಳ ಕೆಲವು ಜನರು ಸೇರಿ ಈ ಕಥೆ ಕಟ್ಟಿದರು.

ಶ್ರೀ ಕೋಣಂದೂರು ಲಿಂಗಪ್ಪ — ಮಾನ್ಯ ಮುಖ್ಯಮಂತ್ರಿಗಳ ಈ ರಿಮಾರ್ಕ್ ನ್ಯಾಯವಾದದ್ದಲ್ಲ. ಇದು ಅನ್ಯಾಯ ಮತ್ತು ಇದರಿಂದ ದೊಡ್ಡ ಅಪಚಾರ ಮಾಡಿದಂತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.— ನೀವು ಮಂತ್ರಿಗಳಿಗೆ ಅಪಚಾರ ಮಾಡಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.— ಪೂರ್ವಗ್ರಹ ಪೀಡಿತರು ಯಾರು ಆಗಿರಲಿಲ್ಲ, ಇಲ್ಲದಲ್ಲಾ ಹೇಳುತ್ತಿದ್ದೀರಿ.

ಶ್ರೀ ಡಿ, ದೇವರಾಜ ಅರಸ್.— ನೀವು ವಿಟನೆಸಸ್ ಆಗಿ ಮಂತ್ರಿಗಳನ್ನೇಕೆ ಕರೆಯಲಿಲ್ಲ?

ಶ್ರೀ ಎಂ. ಎಸ್. ಎಸ್. ಕೃಷ್ಣನ್.— ಏಕೆ ಕರೆಯಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಸಂಬಂಧಪಟ್ಟ ಸೆಕ್ರೆಟರಿಯನ್ನಾಗಲೀ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನ್ನಾಗಲೀ ಕರೆಯಬೇಕಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್.— ಪೂರ್ವಗ್ರಹ ಪೀಡಿತರು ಎಂದು ಹೇಳುವುದು ನ್ಯಾಯವಲ್ಲ. ವೈಯಕ್ತಿಕವಾಗಿ ನಮಗೆ ಪಾಟೀಲರ ಮೇಲೆ ದ್ವೇಷವಿಲ್ಲ. ಇಷ್ಟಬಂದ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ The Hon'ble Chief Minister must speak in a responsible manner as a Chief Minister.

Sri D. DEVARAJ URS.— I am responsibly talking as a Chief as aMinister.

ತಾವು ಸಮಿತಿಗೆ ಕರೆಸಿದಾಗ ಇನ್‌ವೈಟೀಸ್ ಎಂದು ಹೇಳುವುದಕ್ಕೇನು ಅಧಿಕಾರವಿದೆ?

ಶ್ರೀ ಕೆ. ತಿಮ್ಮಪ್ಪ.— ಇನ್‌ವೈಟೀಸ್ ಎಂದು ಹಾಕಬಾರದು ಎಂದು ಎಲ್ಲಿದೆ? ಏಕೆ ಹಾಕಬಾರದು?

ಶ್ರೀ ದೇವರಾಜ ಅರಸ್.— ಒಂದು ಮಿತಿಯಲ್ಲಿ ಕೆಲಸ ಮಾಡಬೇಕು. ಇಷ್ಟ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ. You can call the witnesses, you cannot call the invitees.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಸನ್ನಿವೇಶವನ್ನು ಮುಖ್ಯಮಂತ್ರಿಗಳು ಅರ್ಥಮಾಡಿಕೊಳ್ಳಬೇಕು.

ಶ್ರೀ ವಿ. ಎನ್. ಪಾಟೀಲ್.— ಇದುವರೆಗೆ ಸರಿಯಾಗಿ ಮಾತನಾಡಿದರು. That was more convincing.

ಈಗ ಪೂರ್ವಗ್ರಹ ಪೀಡಿತರು ಎಂದು ಹೇಳಿದುದು ಸರಿಯಲ್ಲ.

Sri D. DEVARAJ URS.— I still stick to it.

ನೀವು ಇಲ್ಲ ಎಂದು ಹೇಳಿ. ಅವರು ಹೇಳುವುದನ್ನು ನಾವು ಕೇಳಬೇಕು.

Sri KAGODU THIMMAPPA.— If the Hon'ble Chief Minister were to say like that, no Committe can function; no Committee can exist. There is no point in having a Committee. It is for the House to agree with the Report or not.

D. DEVARAJ URS.— It is my view.

Sri KAGODU THIMMAPPA.— It is left to the House to agree with the Report or not.

ಶ್ರೀ ಕೋಣಂದೂರು ಲಿಂಗಪ್ಪ.— ಪೂರ್ವಗ್ರಹ ಪೀಡಿತ ಸಮಿತಿ ಅಂದರೆ ಈ ಸಭೆಗೆ ಸಂಬಂಧಪಟ್ಟಿರುವ ಸಮಿತಿ. ಹಾಗೆ ಹೇಳಿದರೆ ಈ ಸದನದಮೇಲೆ ಆರೋಪ ಮಾಡಿದಂತಾಗುತ್ತದೆ

ಶ್ರೀ ಡಿ. ದೇವರಾಜ ಅರಸ್.— ನಾನು ಹೇಳುವುದು ಸಮಿತಿಯ ವಿಚಾರ.

ಶ್ರೀ ಹೆಚ್. ಟಿ ಕೃಷ್ಣಪ್ಪ.— ಅಧ್ಯಕ್ಷರೇ, ಈ ಕಮಿಟಿಗೆ ಒಂದು ಕೆಲಸವನ್ನು ವಹಿಸಿ ಕೊಟ್ಟಿರುವಾಗ ಹೀಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಪರೋಕ್ಷವಾಗಿ ಇದನ್ನು ವಿಚಾರ ಮಾಡಿದರೆ ಅಧ್ಯಕ್ಷರಿಗೆ ಇನ್‌ಸಲ್ಟ್ ಮಾಡಿದಂತಾಗುವುದು.

SRI M. S. KRISHNAN.—Madam Speaker, I rise to a point of Order Rule 288 of the Rules of procedure and Conduct of Business Rule 288 says:—

"A member while speaking shall not—

(i) refer to any matter of fact on which a judicial decision is pending;

(ii) make a personal charge against a member;

(iii) use offensive expressions about the conduct or proceeding of Parliament or any State Legislature;

(iv) reflect on any determination of the Assembly except on a motion for rescinding it ;

(v) reflect upon the conduct of persons in high authority unless the discussion is based on a substantive motion drawn in proper terms ;

Explanation The words "persons in high authority" mean persons whose conduct can only be discussed on substantive motion drawn in proper terms under the Con itution or such other persons whose conduct, in the opinion of the Speaker should be discussed on a substantive motion drawn up in terms to be approved by him ;

(vi) use the Governor's name for the purpose of influencing the debate ;

(vii) utter treasonable, seditious or defamatory words;

(viii) use his right of speech for the purpose of obstructing the business of the Assembly."

The Hon'ble Chief Minister has just now said ಪೂರ್ವಗ್ರಹ ಪೀಡಿತರು.

This is a very very offencive language which is prejudicial to sub-rule (ii) and (vii) of Rule 288. I would say that it must be expunged.

ಅಧ್ಯಕ್ಷರು: ಅವರೇನು ಹೇಳಿದರು ? ಉದ್ವೇಗದಲ್ಲಿ ಏನೋ ಹೇಳಬಾರದು. ಕೆಲವರು ಪೂರ್ವಗ್ರಹ ಪೀಡಿತರಾದವರಿರುವುದರಿಂದ ಹೀಗಾಗಿದೆ ಎಂದು ಹೇಳಿದರು.

SRI M. S. KRISHNAN.—He was psrsononally referring to me. ಹೇಳಿರುವುದನ್ನು ತೆಗೆಸಿ ನೋಡಬಹುದಂ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ ತಾವು ರೆಕಾರ್ಡನ್ನು ಬೇಕಾದರೆ ತೆಗೆಸಿ ನೋಡಿರಿ.

ಅಧ್ಯಕ್ಷರು.—ನಾನು ಅದನ್ನು ತೆಗೆಸಿ ನೋಡುತ್ತೇನೆ.

SRI M. S. KRISHNAN.—My submission is if it refers to the persons who are the Members af the Committee then no person can serve on any committee. Therefore that must be expunged.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆಂದು ಹೇಳಿದ್ದರೂ ಮಾನ್ಯ ಸದಸ್ಯರು ಅದನ್ನೇ ಹೇಳುತ್ತಿದ್ದರೆ, ನಾನೇನು ಹೇಳಲಿ ?

ಶ್ರೀ ಡಿ. ದೇವರಾಜ ಅರಸ್.—ಹಾಗೆ ಅವರನ್ನು ಇನ್‌ವೈಟೀಸಾಗಿ ಕರೆಸಿದ್ದು ಸರಿಯಲ್ಲ ಎಂಬುದು. ನನ್ನ ಅಭಿಪ್ರಾಯ. ಇನ್‌ವೈಟೀಸಸ್ ಎಂತ ಕರೆಸಿ ಅವರಿಂದ ಎವಿಡೆನ್ಸ್‌ನ್ನು ತೆಗೆದುಕೊಂಡಿದ್ದಾರೆ. ಹಾಗೆ ಅವರಿಂದ ಯಾವಾಗ ಎವಿಡೆನ್ಸ್‌ನ್ನು ತೆಗೆದುಕೊಂಡರೋ ಆಗ ಅವರು ಅಲ್ಲಿಗೆ ಇನ್‌ವೈಟೀಸಾಗಲಿಲ್ಲ. ಅವರನ್ನು ಅಲ್ಲಿಗೆ ವಿಟ್ನೆಸ್ಸಾಗೇ ಕರೆಸಬೇಕಾಗಿತ್ತು. ಹಾಗೆ ಮಾಡುವುದಕ್ಕೂ ಇಲ್ಲಿ ಪ್ರೊಸೀಜರಿದೆ. Rule 12 of the Rules of Procedure for internel working of the committee says :

(SRI D. DEVARAJ URS)

> "22. A Member of the Assembly or a Member af the Council who is not a Member of the Committee or any other person may, with the permission of the Chairman, attend a sitting of the committee when evidence is being taken, but not when the committee is deliberating."

SRI M. S. KRISHNAN.—May I request you to refer to rule 11 (1).

SRI D. DEVARAJ URS.—Yes: Rule 11 (1) says that the Committee may send for persons, papers etc.

SRI M. S. KRISHNAN.—So we have sent for them.

SRI D. DEVARAJ URS.—No. You have invited them. If you had merely sent for them certainly I would have had no comments.

SRI M. S. KRISHNAN.—You can refer to the dictionary meaning of the word "invited" which meas "request to courteously come".

ಶ್ರೀ ಡಿ. ದೇವರಾಜ ಅರಸ್.—ಇದು ಯಾರ ಮನೆಯ ಮದುವೆಯೂ ಅಲ್ಲ, ಅಥವಾ ಅದ° ಅವರ ಮನೆಯ ಔತಣಕೂಟವೂ ಅಲ್ಲ This committee is on behalf of this Hon. House. It has certain functions. That is why the Committee has been authorised to call for records. Normally no person can call for the records. It is only the committee which can do so. Even as a Ghief Minister I have no authority unless I serve in a committee like this.

ಒಂದು ವೇಳೆ ಮುಖ್ಯಮಂತ್ರಿಯನ್ನೇ ಅಲ್ಲಿಗೆ ವಿಟ್ನೆಸ್ ಆಗಿ ಕರೆಸಬೇಕಾದ ಪ್ರಸಂಗ ಬಂದಾಗೂ ಅವರನ್ನು ಗೌರವಯುತವಾಗಿ ಇನ್‌ವೈಟೀಸ್ ಎಂತ ಕರೆಸುತ್ತೇವೆಂದರೆ ಅದು ಸಾಧ್ಯವಿಲ್ಲ. ಅಲ್ಲಿಗೆ ಇನ್‌ವೈಟೀಸಾಗಿ ಬಂದವರು ಎವಿಡೆನ್ಸ್ ಕೊಡುವುದಕ್ಕಾಗುವುದಿಲ್ಲ. ವಿಟ್ನೆಸ್ ತೆಗೆದುಕೊಳ್ಳಬೇಕಾದರೆ ಅವರನ್ನು ವಿಟ್ನೆಸಾಗೇ ಕರೆಸಬೇಕು ಸಭೆಗೆ. ಇನ್ನು "ಇನ್‌ವೈಟಿ" ಎಂಬ ಪದಕ್ಕೆ ಡಿಕ್ಷನರಿ ಅರ್ಥ ನೋಡಬೇಕೋ ? ನೋಡೋಣ. Invitee means one who is invited; person asked graciously, kindly or courteously to come to a place of meeting ; ect. Even if I am called as an invitee it is incorrect on the part of the committee to extend a gracious invitation. This cannot also be ae precedent any more to any committee.

ಈ ಅರ್ಥ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಹೀಗಿದ್ದಾಗ ವಿಟ್ನೆಸ್‌ಗಳನ್ನು ರೆಸ್‌ಫೆಕ್ಟ್‌ಫುಲ್ಲಾಗಿ, ಕರ್ಟಿಯಸ್ಸಾಗಿ, ಕೈಂಡ್ಲಿಯಾಗಿ ಯಾರಾದರೂ ಕರೆಯುತ್ತಾರೆಯೇ? ಗ್ರೇಸ್‌ಫುಲಿ ಎಂದು ಕರೆಯುತ್ತಾರೆಯೇ?

SRI H. T. KRISHNAPPA.—What is the motive you want to attribute ? can you explain ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕೆ. ಹೆಚ್. ಪಾಟೀಲರು ಇಲ್ಲಿ ಎಲ್ಲಾ ರೂಲ್ಸ್‌ಗಳನ್ನೂ ವೈಲೇಟ್ ಮಾಡಿ ಕೆಲಸ ಮಾಡಿದ್ದರೂ ಮುಖ್ಯಮಂತ್ರಿಗಳು ವರದಿಯ ಪ್ರೊಸೀಜರಿನ ಬಗ್ಗೆ ಏಕೆ ಇಷ್ಟೆಲ್ಲಾ ನಿಯಮಗಳನ್ನು ಕೇಳುತ್ತಿದ್ದಾರೋ ತಿಳಿಯದು.

SRI D. DEVARAJ URS.—Then let us see the meaning of the word "witness" It says "to bear witness to; to furnish oral or written evidence, documentary or otherwise."

ಹೀಗೆ 'ಪಿಟ್ನೆಸ್ಸಿಗೂ' ಮತ್ತು 'ಇನ್‌ವೈಟೀಗೂ' ಬಹಳ ವ್ಯತ್ಯಾಸವಿದೆ ಪದಗಳಲ್ಲಿ.

SRI M. S. KRISHNAN.—The Committee has not said they are witnesses. What it says is they are invitees to express their views,

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಆ ಛೇರ್ಮನ್ನಿಗೂ ಕೂಡ ಇನ್‌ವೈಟೀಸ್ ಅಂತಲೇ ಹೇಳಿದ್ದಾರೆ. ಹಾಗೆ ಇನ್ನು ಕೆಲವರಿಗೂ ಹೇಳಿದ್ದಾರೆ. ಅದು ಸರಿಯಲ್ಲ. ನಮ್ಮ ಸಮಿತಿಯ ಮುಂದೆ ಎಲ್ಲರೂ ಒಂದೇ - ಎಲ್ಲರೂ ಸರಿಸಮಾನರು. ಆ ಸಮಿತಿಗೆ ಯಾರೇ ಬರಲಿ, ರಾಜ್ಯದ ಮುಖ್ಯ ಮಂತ್ರಿಯೇ ಬರಲಿ ಅದಕ್ಕೆ ವಿಟ್ನೆಸ್ಸಾಗಿ ಬರಬೇಕೇ ವಿನಾ ಅಲ್ಲಿಗೆ ಇನ್‌ವೈಟೀಸಾಗಿ ಬರುವುದಕ್ಕೆ ಸಾಧ್ಯವಿಲ್ಲ.

SRI K. PUTTASWAMY.—The term "send for person" is equivalent to sending non - bailable warrants.

ಶ್ರೀ ಡಿ. ದೇವರಾಜ ಅರಸ್.—ಇನ್ನು ಆ ಮಿಲ್ಲು ಅಗ್ರೋ ಬೇಸ್ಡ್ ಇಂಡಸ್ಟ್ರಿಯೇ ಅಲ್ಲವೇ ಅನ್ನತಕ್ಕ ವಿಚಾರದಲ್ಲಿ ಅದು ಅಗ್ರೋಬೇಸ್ಡ್ ಇಂಡಸ್ಟ್ರಿಯೇ ಎಂದು ತೀರ್ಮಾನವಾಗಿರುವಾಗ ಅದು ಹಾಗಲ್ಲ ಎನ್ನುವುದು ಸರಿಯಲ್ಲ. ಶ್ರೀ ಕೃಷ್ಣನ್‌ರವರು ಅನುಮಾನದಲ್ಲಿ ಮಾತ್ನಾಡಿದರು.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಅಲ್ಲಿ ಹರಡಿರತಕ್ಕದ್ದೆಲ್ಲಾ ದುರ್ಗಂಧವಾಗಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ಅದರ ಮೇಲೆ ಸುಗಂಧವನ್ನು ಹರಡುತ್ತಿದ್ದಾರೆ...

ಶ್ರೀ ಡಿ. ದೇವರಾಜ ಅರಸ್.—ಪೀನಾಸಿ ಹಿಡಿದಿರತಕ್ಕ ಮೂಗಿಗೆ ಎಲ್ಲವೂ ದುರ್ಗಂಧವೆ ? ದುರ್ವಾಸನೆಯೆ ?

ಇನ್ನು ನಮ್ಮ ರೂಲ್ಸ್ ಆಫ್ ಪ್ರೋಸೀಜರ್ ಅಂಡ್ ಕಾಂಡಕ್ಟ್ ಆಫ್ ಬಿಜಿನೆಸ್ ರೂಲ್ಸ್‌ನ ೨೫೬ (ಎ) ನಲ್ಲಿ ಏನು ಹೇಳಿದ್ದಾರೆಂಬುದನ್ನು ಸ್ವಲ್ಪ ನೋಡೋಣ :

ನಮ್ಮ ರೂಲ್ಸ್ ಆಫ್ ಪ್ರೊಸೀಜರಿನ ಸೆಕ್ಷನ್ ೨೫೬ (ಎ)ನಲ್ಲಿ ಈ ರೀತಿ ಹೇಳಿದೆ:

"There shall be a Committee on Public Undertakings for the examination of the working of the public undertakings specified in the Schedule. The functions of the Committee shall be-

(a) to examine the reports and acounts of the public undertaking specified in suchedule III ;

(b) to examine the reports, it any, of the Comptroller and Auditor - General on the Public Undertakings ;

(c) to examine, in the context of the autonomy and efficiency of the Public Undertakings, whether the affairs of the Public Undertakings are being managed in accordance with sound business principales and prudent cammercial practices land

(d) to exercise such other functions vested in the Committee on Public Accounts and the Committee on Estimates in relation to the Public Undertaking specified in the III Schedule as are not covered by clauses (a), (b) and (c) above and as may be allotted to the Committee the Speaker from time to time.

7-00 P.M.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಜೊತೆಗೆ ಎಕ್ಸ್‌ಪರ್ಟ್ ಆಗಿರತಕ್ಕ ಸೆಕ್ರೇಟರಿಯೇಟ್ ಬೇರೆ ಇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ವಿಷಯವನ್ನು ಅದರಲ್ಲಿ ಹೇಳಿದೆ. ಅದು ಈ ರೀತಿ ಇದೆ:

Provided that the Committee shall not examine and investigate any of the following namely.

(i) matters of major Government policy as distinct from business or commercial functions of the public undertakings;

(ii) matters of day to day administration;

(iii) matters for the consideration of which machinery is established by any special statute under which a particular public undertaking is established.

ಮಾನ್ಯ ಅಧ್ಯಕ್ಷರೇ, ಈ ವಿಚಾರ ನಮ್ಮ ಸಮಿತಿಯವರ ಗಮನಕ್ಕೆ ಬಂತೋ ಇಲ್ಲವೋ ನನಗೆ ಅದು ಮಾನ್ಯವಾಗಿದೆ. ಒಂದುವೇಳೆ ಬಂದಿದ್ದರೆ ಬಹುಶಃ ಅಗ್ರೊ ಬೇಸ್ಡ್ ಇಂಡಸ್ಟ್ರೀಸ್ ಅಲ್ಲ. ಉಂಟು ಎಂಬ ವಿಷಯಕ್ಕೆ ಅವರು ಹೋಗುತ್ತಿರಲಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ನಾನು ಈ ಒಂದು ವಿಷಯವಾಗಿಯೇ ಮಾತನಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ. ಲೋಕಸಭಾ ರೂಲ್ಸಿನಲ್ಲಿನ ಒಂದು ಪ್ರತ್ಯೇಕ ಪ್ಯಾರಾವನ್ನು ಓದಿ ನಾನು ಇದನ್ನೇ ವ್ಯಾಖ್ಯಾನ ಮಾಡುತ್ತಿದ್ದೆ. ಮಾನ್ಯ ಶ್ರೀ ಸಿದ್ದವೀರಪ್ಪನವರು ಇದೇನು ಅಷ್ಟು ದೊಡ್ಡ ಪ್ರಶ್ನೆಯಲ್ಲವೆಂದು ಹಾರಿಸುವುದಕ್ಕೆ ಪ್ರಯತ್ನಮಾಡಿದರು. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದಮೇಲೆ ನನಗೆ ಒಂದು ಅನುಮಾನ ಬರುತ್ತದೆ. ಲೋಕಸಭಾ ರೂಲ್ಸ್‌ನ್ನು ನೋಡಿದರೆ ಅದರಲ್ಲಿ Rule 312A of the Lok Sabha Rules of Procedure is analogous to rules 256A of our Rules ಎಂದಿದೆ. ಅದೂ ಅಲ್ಲದೆ S. T. C., N M. D. C. Personnel policies in Public Undertaking ಎಂಬ ಬಗ್ಗೆಯೂ ಹೇಳಿದೆ. ಇಂಥಹ ವ್ಯವಹಾರಗಳು ಬಂದಾಗ ಬೇರೆಯವರು ಯಾವರೀತಿಯಾಗಿ ಮಾಡುತ್ತಾರೆ ಎಂಬುದನ್ನು ನೋಡಬೇಕಾಗುತ್ತದೆ. ನಿಮಗೆ ಹೆಚ್ಚಿಗೆ ಇದರಲ್ಲಿ ಅವಕಾಶ ಸಿಗುತ್ತದೆ. ನಾವೂ ಸಹ ಅದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ಒದಗಿಸಿಕೊಟ್ಟರೆ ಒಳ್ಳೆಯದು. ಲೋಕಸಭಾ ರೂಲ್ಸ್ ಪ್ರಕಾರ ಮಾಡಿರತಕ್ಕ ಅನೇಕ ರಿಪೋರ್ಟ್‌ಗಳನ್ನು ನಾನು ನಿನ್ನೆ ಕೋಟ್ ಮಾಡಿದೆ. I do not want to take much time of the House. I would request yon to go through all these reports. There are serious matters of policy. You can read it. Afterwards there was reply from the Government also and in respect of one particular question of phoning and oral instructions, the Minister has been criticised and the ministry has accepted the mistake in the Lok Sabha. ಆದ್ದರಿಂದ ಇವರು ಈ ರೀತಿ ಮಾಡುವುದು ಸರಿಯಾದುದಲ್ಲ.

So the Committee is not precluded from discussing matters of policy according the practices and precedents in our country. ಇವರೂ ಸಹ ಸ್ವಲ್ಪಮಟ್ಟಿಗೆ ಪಾಲಿಸಿ ಬಗ್ಗೆಯೂ ಡಿಸ್ ಕಸ್ ಮಾಡಿದ್ದಾರೆ.

I would also request you to go throw another British publication, I have cited. There again it is a case of public undertaking. A big discussion took place whether matters of policy could be or could not be discussed. They have come to the conclusion that they could discusse. We are supposed to follow British practice...

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಬಹಳ ವಿಬಲವಾಗಿ ಹೇಳಿದ್ದಾರೆ. ನಾನು ಹೇಳುವುದನ್ನು ಸಹ ಅವರು ಸಾವಧಾನವಾಗಿ ಕೇಳಬೇಕು. ಎಲ್ಲ ವಾದಗಳಿಗೂ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೇಳುವುದನ್ನು ನಾವು ಕೇಳುವುದಕ್ಕೇ ಇಲ್ಲಿ ಇರುವುದು.

ಶ್ರೀ ಡಿ. ದೇವರಾಜ್ ಅರಸ್.—ರೂಲ್ ಇದೆಯೆಂದು ಮಾನ್ಯ ಸದಸ್ಯರು ಹೇಳಿದರು. ಅದನ್ನು ಯಾರೂ ಡಿನೈ ಮಾಡುವುದಿಲ್ಲ. ಅದು ನನಗೂ ಗೊತ್ತಿದೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ರೂಲ್ಸ್ ಇದ್ದರೂ ಅವರು ಇಲ್ಲಿ ಹೀಗೆ ಮಾಡಿದರು, ಅವರು ಅಲ್ಲಿ ಹಾಗೆ ಮಾಡಿದರೂ ಎಂದು ಹೇಳುವುದನ್ನು ಚೆನ್ನಾಗಿ ತಿಳಿದು ವಿಚಾರಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಪಾರ್ಲಿಮೆಂಟ್ ಪ್ರೊಸೀಜರ್ ವಿಷಯ ನಾನು ಹೇಳಿದ್ದು.

ಶ್ರೀ ಡಿ. ದೇವರಾಜ ಅರಸ್.—ಪಾರ್ಲಿಮೆಂಟಿನಲ್ಲಿಯೇ ಒಂದುವೇಳೆ ಪಾರ್ಲಿಮೆಂಟರಿ ಪ್ರೊಸೀಜರ್‌ಗೆ ವಿರೋಧವಾಗಿ ಹೋದರೆ, ಅದನ್ನು ನಾವು ಇಲ್ಲಿ ಫಾಲೊ ಮಾಡುವುದಕ್ಕಾಗುತ್ತದೆಯೇ ? ಇದು ಮೈಸೂರು ರಾಜ್ಯದ ಶಾಸನಸಭೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಸಾವರಿನ್‌ಬಾಡಿ.

ಶ್ರೀ ದೇವರಾಜ ಅರಸ್.—ಅವರು ಪಾರ್ಲಿಮೆಂಟ್ ರೂಲ್ಸನ್ನು ಕೋಟ್ ಮಾಡಿದರು. ಅಲ್ಲಿ ಪ್ರೊಸೀಜರ್ ಆ ರೀತಿಯಾಗಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದು ಬಹಳ ಮುಖ್ಯವಾದುದು. ನಾವೂ ಸಹ ಅನೇಕಬಾರಿ ಇಂತಹ ಪ್ರಶ್ನೆಗಳು ಇಲ್ಲಿ ಉದ್ಭವಿಸಿದಾಗ ಅನಾವಶ್ಯಕವಾದ ರೂಲ್ಸ್ ನಮ್ಮಲ್ಲಿದ್ದರೆ, ಅದು ಬೇಡವೆಂದು ಹೇಳಿ ಲೋಕಸಭಾ ರೂಲ್ಸನ್ನು ಫಾಲೋ ಮಾಡಿರತಕ್ಕ ನಿದರ್ಶನಗಳು ನಮ್ಮಲ್ಲಿ ಬೇಕಾದಷ್ಟು ಇವೆ. ಅಲ್ಲಿನ ರೂಲ್ಸನ್ನು ನೋಡಿ ಸ್ಪೀಕರ್ ಅವರು ರೂಲಿಂಗ್ ಹಿಂದೆ ಕೊಟ್ಟಿರುವುದೂ ಸಹ ನಮ್ಮಲ್ಲಿ ಇದೆ. ಈಗ ಇದರಲ್ಲಿ ಅಲ್ಲಿನ ರೂಲ್ ಮತ್ತು ಇಲ್ಲಿನ ರೂಲ್ ಒಂದೇ ಆಗಿದೆ. ಆದ್ದರಿಂದ ಇದರಲ್ಲಿ ಒಂದು ರೀತಿಯ ರೂಲ್ಸನ್ನು ನಾವು ಫಾಲೋ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬೈಬಲ್ ತರಹ ಇದೆ.

ಶ್ರೀ ಡಿ. ದೇವರಾಜ ಅರಸ್.—ಆ ರೀತಿಯಾಗಿ ಇದ್ದರೂ ರೂಲ್ಸ್ ಆಫ್ ಪ್ರೊಸೀಜರ್ ಫಾಲೊ ಮಾಡಬೇಕೆಂದು ಹೇಳಿದೆ. ಒಂದು ವೇಳೆ ರೂಲ್ಸ್ ಇಲ್ಲದೇ ಇದ್ದರೆ, ಕನ್‌ವೆನ್‌ಷನ್, ಮತ್ತೊಂದು ಮಾರ್ಗದೊಂದು ಅನುಸರಿಸಬೇಕೆಂದು ಹೇಳಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಯಾವ ಪಾಲಿಸಿ ಪ್ರಕಾರ ಇದನ್ನು ಡಿಸ್‌ಕಸ್ ಮಾಡಬೇಕು, ಯಾವುದು, ಏನು ಎಂಬುದನ್ನು ನಾನು ಸ್ಪಷ್ಟವಾಗಿ ತಿಳಿದ ಹೊರತು ಅದರ ಬಗ್ಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇವರು ಅದನ್ನು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಅಲ್ಲವೆಂದು ಏಕೆ ಪ್ರಸ್ತಾಪಮಾಡಿದ್ದಾರೋ ಗೊತ್ತಿಲ್ಲ. ಇವರು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಮಾಡಿದಂಥ ವ್ಯವಹಾರದ ಬಗ್ಗೆ ಮಾತನಾಡಿದ್ದಾರೆ. ಆದ್ದರಿಂದ ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಇಲ್ಲಿ ಇವರು ಹೇಳತಕ್ಕ ಪಾಲಿಸಿ ಮ್ಯಾಟರ್ ಯಾವುದು ? ಇವರು ಅದನ್ನು ಇಂಡಸ್ಟ್ರಿಯಲ್ಲವೆಂದು ಕೊಟ್ಟಿರುವುದು ತಪ್ಪು. ಇಂಡಸ್ಟ್ರಿಯಲ್ಲವೆಂದು ಹೇಳಿದರೆ ಇವರಿಗೆ ಎಲ್ಲ ಸರಿಹೋಗುತ್ತದೆಯೇ ? ಇದು ಇಂಡಸ್ಟ್ರಿ ಅಲ್ಲವೆಂದು ಹೇಳುವುದು ಈ ಕಮಿಟಿಗೆ ಅಧಿಕಾರವಿಲ್ಲ. ಈ ಇಂಡಸ್ಟ್ರಿಗೆ ಮಾಡಿದ ವ್ಯವಹಾರ ಸರಿಯೋ ತಪ್ಪೋ ಎಂದು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಇದು ಇಂಡಸ್ಟ್ರಿಯಲ್ಲವೆಂದು ಹೇಳಿ, ಇದಕ್ಕೆ ಆ ರೀತಿಯಾಗಿ ಹಣವನ್ನು ಕೊಡಬಾರದಾಗಿತ್ತು ಎಂಬುದಾಗಿ ಹೇಳುವುದು ಸರಿಯಲ್ಲ. ನಮ್ಮ ಗೌರ್ನಮೆಂಟ್ ಪಾಲಿಸಿ ಪ್ರಕಾರ ಅದನ್ನು ಅಗ್ರೊ ಬೇಸ್ಡ್ ಇಂಡಸ್ಟ್ರಿ ಎಂಬುದಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅಂದಮೇಲೆ ನೀವು ಅದಕ್ಕೆ ಸಾಲ ಕೊಡಬಾರದಾಗಿತ್ತು. ಷೇರು ಕ್ಯಾಪಿಟಲ್ ಕೊಡಬಾರದಾಗಿತ್ತು ಎಂಬುದಾಗಿ ಕೆಲವರು ಹೇಳಿದ್ದಾರೆ. ಸಾಲ ಕೊಡುವುದಕ್ಕಿಂತ ಅದಕ್ಕೆ ಷೇರು ಕ್ಯಾಪಿಟಲ್ ಕೊಟ್ಟಿದಕ್ಕೆ ಅದರ ಶಕ್ತಿ ಹೆಚ್ಚುತ್ತದೆಂದು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಆ ರೀತಿಯಾಗಿ ಹೇಳದ ಅದರ ಬಗ್ಗೆ ಬುಡಕ್ಕೆ ಕೈಹಾಕಿ ಇದು ಇಂಡಸ್ಟ್ರಿ ಅಲ್ಲವೆಂದು ಹೇಳಿದ್ದಿರಿ. It is an agro-based industry. In our opinion you may be right ಒಂದು ವೇಳೆ ರೂಲ್ಸ್, ಕನ್‌ವೆನ್‌ಶನ್ ಮತ್ತು ಪ್ರೊಸೀಜರ್ ಹಾಗೆ ಇದ್ದರೂ ರಿಪೋರ್ಟನ್ನು ಏಕೆ ಹಾಗೆ ಬರೆದರು ? ಇಂತಿಂಥದನ್ನು ಮಾಡಬಾರದಾಗಿತ್ತು, ಹೆಚ್ಚಿಯಾಗಿ ಮಾಡಿದ್ದಾರೆ ಪ್ರೊಸೀಜರ್ ಅಹಾಪ್ಟ್ ಮಾಡಿದ್ದು ಸರಿಯಾಗಿಲ್ಲ ಎಂದು ಹೇಳಿದ್ದಾರೆ. ನಾವು ಮಾಡಿದ ಉದ್ದೇಶ ಸರಿಯಾಗಿದ್ದರೆ ಏಕೆ ನಾವು ಮಾಡಿದ್ದು ಸರಿ ಎಂದು ಒಪ್ಪಿಕೊಳ್ಳುವುದಿಲ್ಲ ?

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಮಂತ್ರಿಯವರು ಫೋನ್ ಮಾಡಿಕೊಂಡು ಏನಾದರೂ ರೂಲ್ಸನ್ನು ಪಾಲನೆ ಮಾಡುವುದಾದರೆ, ಕಮಿಟಿ ಮಾಡಿದ್ದುದರ ಅವಶ್ಯಕತೆಯಾದರೂ ಏನು ?

ಶ್ರೀ ಡಿ. ದೇವರಾಜ ಅರಸ್.—ಫೋನ್ ಇರುವುದು ಗಂಡ ಹೆಂಡತಿಯರು ಮಾತನಾಡುವುದಕ್ಕಲ್ಲ. ಸರ್ಕಾರದ ಕೆಲಸ ಮತ್ತು ದೇಶದ ಕೆಲಸ ಮಾಡುವುದಕ್ಕೋಸ್ಕರ ಫೋನ್ ಇರುವುದು. ಹಾಗೆ ಏನಾದರೂ ಫೋನ್ ಮಾಡಿದರೆ ದೇಶ ಕೆಳಗಡೆ ಹೋಗುತ್ತದೆಯೇ ? ಆದ್ದರಿಂದ ಮೊನಲನೆಯಂದಾಗಿ ನಿಮಗೆ ಇದು ಅಗ್ರೋ ಬೇಸ್ಡ್ ಇಂಡಸ್ಟ್ರಿಯಲ್ಲವೆಂದು ಹೇಳುವುದಕ್ಕೆ ಯಾವ ಕಾರಣವು ಇಲ್ಲ. ಒಂದು ವೇಳೆ ಪ್ರೊಸೀಜರ್ ಬಿಟ್ಟುಹೋಗಿದ್ದರೂ, ಅದು ಅಗ್ರೋ ಬೇಸ್ಡ್ ಇಂಡಸ್ಟ್ರಿಯಲ್ಲವೆಂದು ಹೇಳುವುದು ಬಿಟ್ಟು ಬೇರೆ ಯಾವುದು ನಿಮಗೆ ಹೇಳುವುದಕ್ಕೆ ಇದೆ ? ಹತ್ತಿಯನ್ನು ಪ್ರೊಸೆಸಿಂಗ್ ಮಾಡುವುದಕ್ಕೆ ಅದು ಇರುವುದು. ಪ್ರೊಸೆಸಿಂಗ್ ಮಾಡುವುದರ ಅರ್ಥವಾದರೂ ಏನು ? ಟೆಕ್ಸ್‌ಟೈಲ್ಸ್‌ನಲ್ಲಿಯೂ ಪ್ರೊಸೆಸಿಂಗ್ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನೀವು ಏನು ಹೇಳಿದರೂ ಅವರು ರಾಜಿನಾಮೆ ಕೊಡುವುದಿಲ್ಲ. ಪಾಪ ಕಿತ್ತೂರವರು ಕೆಟ್ಟರೆಂದು ಇವರು ಕೆಟ್ಟರೇ ? ನಾವು ದೇಶದಲ್ಲಿ ಭ್ರಷ್ಟಾಚಾರ ಮಾಡುತ್ತಿರುವ ಮಂತ್ರಿಯವರು ಇರಬಾರದು ಎಂದು ಹೇಳುವುದು.

ಶ್ರೀ ಡಿ. ದೇವರಾಜ್ ಅರಸ್ —ಯಾವುದು ಭ್ರಷ್ಟಾಚಾರ ಸ್ವಾಮಿ ? ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿ ಬಾವಿ ತೆಗೆಸಿ ನೀರು ಕೊಡಿಸಿದ್ದೇವೆ. ಇದು ಭ್ರಷ್ಟಾಚಾರವೇ ?

ಶ್ರೀ ವಾಟಾಳ್ ನಾಗರಾಜ.—ಯಾರ್ಯಾರು ಯಾವ್ಯಾವ ಹೆಸರಿನಲ್ಲಿ ಏನೇನು ಮಾಡಿದ್ದಾರೆ ಎಂಬ ಕರ್ಮಕಾಂಡ ಬರುತ್ತದೆ. ಅದು ಸಹ ದೂರವಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಲ್ಲವೂ ನಿಮಗೆ ಕರ್ಮಕಾಂಡವೆಂದು ಕಂಡರೆ ನಾವು ಏನು ಮಾಡುವುದಕ್ಕಾಗುತ್ತದೆ. ದೇವರು ನಿಮಗೆ ಒಳ್ಳೆಯದು ಮಾಡಲಿ. ಅಷ್ಟೆ ನಾನು ಹೇಳುವುದು. ಆತುರಾತುರವಾಗಿ ಮಾಡಿದರೆ everything depends upon tne motive behind it.

ಶ್ರೀ ಕೊಣಂದೂರು ಲಿಂಗಪ್ಪ.—ಮೋಟೀವ್ ಬಿಹೈಂಡ್ ಇಟ್ ಎಂದು ಹೇಳಬೇಡ. ಯಾವುದಾದರೂ ಒಂದು ಗುರಿ ಮುಟ್ಟುವುದಕ್ಕೆ ಆಚರಣೆ ಬಹಳ ಮುಖ್ಯ. ಉದಾಹರಣೆಗೆ ಗೋಡ್ಸೆ ಮಹಾತ್ಮಾ ಗಾಂಧೀಜಿಯವರನ್ನು ಒಂದು ಮೋಟೀವ್ ಇಟ್ಟುಕೊಂಡು ಕೊಲೆ ಮಾಡಿದ. ಆದ್ದರಿಂದ ಆಚರಣೆ ಮುಖ್ಯ.

ಶ್ರೀ ಡಿ. ದೇವರಾಜ ಅರಸ್.—ಅಲ್ಲಿ ಕೊಲೆ ಮಾಡಿದ್ದುದರಿಂದ ದೇಶಕ್ಕೆ ಅನ್ಯಾಯವಾಯಿತು. ಆದರೆ ಇಲ್ಲಿ ಅನ್ಯಾಯ ಯಾರಿಗೂ ಆಗಲಿಲ್ಲ. ಹಾಗೆ ಅಂಥ ಉದ್ದೇಶದಿಂದ ಇಲ್ಲಿ ಯಾರಾದರೂ ಕೊಲೆ ಮಾಡಿದರೇ ? ನೀವು ರೈತರ ಪ್ರತಿನಿಧಿಗಳಾಗಿ ಹೀಗೆ ಮಾತನಾಡುವುದು ಸರಿಯಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕೇವಲ ೨೧ ಲಕ್ಷ ರೂಪಾಯಿಯಲ್ಲಿ ಮೂರು ಕೋಟಿ ರೂಪಾಯಿ ಪ್ರೊಜೆಕ್ಟ್. ಅವರು ಕೇವಲ ಒಬ್ಬ ಸಾಮಾನ್ಯ ಸದಸ್ಯರಾಗಿದ್ದಾರೆ ಹೀಗೆ ಮಾಡಲು ಸಾಧ್ಯವಿತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಪಾಂಡವಪುರ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಎರಡು ಲಕ್ಷ ರೂಪಾಯಿ ಸಹ ಇರಲಿಲ್ಲ. ೨೦ಲಕ್ಷ ರೂಪಾಯಿ ನಾವು ಸರ್ಕಾರದಿಂದ ಕೊಟ್ಟಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಆದ್ದರಿಂದ ತಾವು ಒಂದು ಅದರ ಪ್ರಿನ್ಸಿಪಲ್ ತಿಳಿಯದೆ ಮಾತನಾಡುವುದಕ್ಕೆ ಹೊರಟರೆ ನಾನು ಉತ್ತರ ಏನು ಹೇಳಲಿ ? ಇವೊತ್ತಿನ ದಿವಸ ಕೋಪರೇಟೀವ್ ಸ್ಟ್ರಕ್ಚರಿನಲ್ಲಿ ಒಂದು ರೂಪಾಯಿ ಕೊಟ್ಟರೆ ೧೦ ರೂಪಾಯಿ ಸಾಲ ಕೊಡಬೇಕೆಂದು ನಿಯಮ. ಅವರಿಗೂ ಬೇರೆ ಬೇರೆ ಕಡೆಯಿಂದ ಕೊಡುತ್ತಿದ್ದಾರೆ. ಮಾರ್ಕೆಟ್ ಸೊಸೈಟಿಯಿಂದ ಸಹ ಕೊಟ್ಟಿದಾರೆ. ಆದ್ದರಿಂದ ನಾವು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇವತ್ತು ಪಾಟೀಲರೆ ಆಗಲಿ, ಅಥವಾ ಇನ್ನಿತರ ಯಾರೇ ಆಗಲಿ, ತಮ್ಮ ತಮ್ಮ ಸ್ವಾರ್ಥಕ್ಕೆ ಈ ರೀತಿ ಕೊಟ್ಟ ಹಣವನ್ನು ದುರುಪಯೋಗ ಮಾಡಿಕೊಂಡಿದ್ದರೆ, ನೀವು ಹೇಳುವುದಕ್ಕಿಂತ ಮುಂಚೆ ನಾನೇ ಮೊದಲು ಕ್ರಮ ತೆಗೆದುಕೊಳ್ಳುತ್ತಿದ್ದೆ. ನಿಮಗೆ ದೇಶದಲ್ಲಿ ಹತ್ತಿ ಬೆಳೆಯುವವರ ವಿಚಾರ ಇನ್ನೂ ಗೊತ್ತಿಲ್ಲ. ಇಡೀ ನಮ್ಮ ರಾಜ್ಯದಲ್ಲಿ ಹತ್ತಿ ಹೆಚ್ಚುಬೆಳೆಯತಕ್ಕ ಪ್ರದೇಶ ಇರುವುದು ಬಿಜಾಪುರ, ಧಾರವಾಡ, ಗುಲ್ಬರ್ಗ, ಮತ್ತು ರಾಯಚೂರಿನಲ್ಲಿ, ಇಡೀ ಭಾರತದಲ್ಲಿ ನಮಗೆ ಮೂರನೇ ಸ್ಥಾನ ಇದೆ. ನಮ್ಮ ಕೃಷ್ಣ ನದಿಯ ಯೋಜನೆ ಪೂರ್ತಿಯಾದಲೆ ನಮಗೆ ಎರಡನೆಯ ಸ್ಥಾನ ದೊರೆಯಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದೇ ರೀತಿ ಬಿಜಾಪುರ ಸಂಸ್ಥೆಯವರು ಕೇಳಿದಾಗ ಏಕೆ ಕೊಟ್ಟಿಲ್ಲ ಕೇವಲ ಹುಲುಕೋಟೆಗೆ ಮಾತ್ರ ಏಕೆ ಇಷ್ಟು ಆತುರಾತುರವಾಗಿ ಮಾಡಿದರು ?

ಶ್ರೀ ಡಿ. ದೇವರಾಜ ಅರಸ್.—ಸುಮ್ಮನೆ ಯಾರೋ ಹೇಳಿದರು ಎಂದು ಹೇಳುವುದು ಸರಿಯಲ್ಲ. ನಾಳೆ ನೀವು ಸಹ ಅರ್ಜಿ ಹಾಕಿ: ನಾನು ಕೊಡಿಸುತ್ತೇನೆ, ಹಾಗೆ ಯಾರು ಅರ್ಜಿ ಹಾಕಿದ್ದಾರೆ ಮತ್ತು ಯಾರಿಗೆ ಕೊಟ್ಟಿಲ್ಲವೆಂಬುದನ್ನು ತೋರಿಸಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದನ್ನು ತೋರಿಸಿದರೆ ತಾವು ರಾಜಿನಾಮೆ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳಿದ ತಕ್ಷಣ ರಾಜಿನಾಮೆ ಕೊಡುವುದಕ್ಕಾಗುತ್ತದೆಯೇ?

ಮಾತೆತ್ತಿದರೆ ರಾಜಿನಾಮೆ ಕೊಡುವ ವಿಷಯ ಹೇಳುತ್ತೀರಾ. ನೀವು ರಾಜಿನಾಮೆ ಕೊಡಿ ಎಂದು ಹೇಳಿದರೆ ನಾವು ರಾಜೀನಾಮೆಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಾಟಾಳ್‌ನಾಗರಾಜ್.—ನೀವು ರಾಜಿನಾಮೆ ಕೊಡುವುದಿಲ್ಲ ಎಂಬುದು ನಮಗೆ ಗೊತ್ತಿದೆ.

ಶ್ರೀ ಕೋಣಂದೂರುಲಿಂಗಪ್ಪ.—ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ಮತ್ತು ಬಿಜಾಪುರದಲ್ಲಿ ಇಂಥಾದ್ದೇ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಸರ್ಕಾರದ ನೆರವನ್ನು ಕೇಳಿದಾಗ ನೀವು ಏತಕ್ಕೆ ರೆಫ್ಯೂಜ್ ಮಾಡಿದ್ದಿರಿ?

ಶ್ರೀ ಡಿ. ದೇವರಾಜ ಅರಸ್.—ಇಲ್ಲ ಅದು ಸರಿಯಲ್ಲ, ಹಿಂದೆ ಹಾವೇರಿಯಲ್ಲಿ ಒಂದು ಸಂಸ್ಥೆಯವರು ಸೀಡ್‌ಪ್ರೋಸೆಸಿಂಗ್ ಪ್ಲಾಂಟ್ ಹಾಕಬೇಕು ಎಂದು ಸರ್ಕಾರದ ನೆರವು ಕೇಳಿದಾಗ ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರ ನಿರಾಕರಿಸಿದ ಮಾತ್ರಕ್ಕೆ ನಾವು ಹಾಗೆ ಮಾಡಬೇಕಾಗಿತ್ತೇನು; ಈ ವರದಿಯಲ್ಲಿ ಅದನ್ನೂ ಕ್ವೋಟ್ ಮಾಡಿದ್ದಾರೆ. ಸೀಡ್ ಪ್ರೋಸೆಸಿಂಗ್ ಪ್ಲಾಂಟ್ ಅಗ್ರೋಬೇಸ್ಡ್ ಇಂಡಸ್ಟ್ರಿ ಎಂದು ಹೇಗೆ ಹೇಳುತ್ತೀರಿ ಎಂದು ಹಿಂದಿನ ಸರ್ಕಾರದವರು ಹೇಳಿದ್ದಾರೆ. ಮೈಜ್ ಮಿಲ್ಲಿಂಗ್ ಪ್ಲಾಂಟ್ ಮತ್ತು ಸೀಡ್ ಪ್ರೋಸೆಸಿಂಗ್ ಪ್ಲಾಂಟ್ ಅಗ್ರೋಬೇಸ್ಡ್ ಇಂಡಸ್ಟ್ರೀಸ್ ಎಂದು ಹಿಂದಿನ ಸರ್ಕಾರದವರು ಹೇಳಿದರು. ಇದು ನಮಗೆ ಒಂದು ಒಳ್ಳೆಯ ಉದಾಹರಣೆ ಸಿಕ್ಕಿದೆ. ಆಗ ಅಲ್ಲಿ ಳ ಮೈಜ್ ಮಿಲ್ಲಿಂಗ್‌ಪ್ಲಾಂಟ್ ಬಂದಿದ್ದರೆ ಪ್ರತಿಯೊಬ್ಬರು ಮೈಜ್ ಬೆಳೆಯುತ್ತಿದ್ದರು. ೪–೫ ವರ್ಷಗಳ ಹಿಂದೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಟಾಂ ಟಾಂ ಹಾಕಿಸಿ ರೈತರು ಮೈಜ್ ಬೆಳೆಯಬೇಕು ಎಂದು ಸಲಹೆ ಕೊಟ್ಟರು. ಆಗ ಎಲ್ಲರೂ ಮೈಜ್ ಬೆಳೆದರು. ಆಗ್ಗೆ ಅದರ ಬೆಲೆ ಇಳಿಯಿತು ಅದರ ಮುಂದಿನ ವರ್ಷ ಯಾರೂ ಮೈಜ್ ಬೆಳೆಯಲಿಲ್ಲ. ಅದಕ್ಕೇ ಆಹಾರ ಪದಾರ್ಥಗಳ ಬೆಲೆಗಳು ಏರುಪೇರಾಗುತ್ತವೆ. ರೈತ ಬೆಳೆದ ಮಾಲಿಗೆ ಒಂದು ವರ್ಷ ಒಳ್ಳೆಯ ಬೆಲೆ ಸಿಕ್ಕುತ್ತದೆ, ಇನ್ನೊಂದು ವರ್ಷ ಒಳ್ಳೆಯ ಬೆಲೆ ಸಿಕ್ಕುವುದಿಲ್ಲ, ಹಿಂದೆ ಕಷ್ಟ ಏನು ಏನು ಆಗಿದೆ ಎಂಬುದನ್ನು ಮಾನ್ಯ ವಿರೋಧ ಪಕ್ಷದವರು ಒಪ್ಪುತ್ತಾರೆ, ಅದರ ಹಿಂದೆ ಮೈಜ್ ಪ್ಲಾಂಟ್ ಹಾಕಿದ್ದರೆ ಮೈಜ್ ಬೆಳೆದಂತಹ ರೈತರಿಗೆ ಒಂದು ಸ್ಟೇಬಲ್ಲೈಜ್ಡ್ ಬೆಲೆ ಸಿಕ್ಕುತ್ತಿತ್ತು, ಆದರೆ ಆ ಪ್ಲಾಂಟ್ ಹಾಕುವುದಕ್ಕೆ ಅವಕಾಶವನ್ನು ಕೊಡಲಿಲ್ಲ, ಆಗ ಈ ಮೈಜ್ ಪ್ಲಾಂಟ್ ಹಾಕಿದ್ದಗೆ ಮೈಜ್ ಬೆಲೆ ಏತಕ್ಕೆ ಕುಸಿಯುತಿತು ? ಈಗ ಹತ್ತಿ ಬೆಳೆಯತಕ್ಕ ಆ ಭಾಗದ ರೈತರ ಹಿತರಕ್ಷಣೆಯನ್ನು ನಾವು ಹೇಗೆ ಮಾಡುವುದು? ಆ ಪ್ರದೇಶದ ಹತ್ತಿ ಬೆಳೆಯುವ ರೈತರು ಸಾಹುಕಾರರ ಕೈಗೊಂಬೆಗಳಾಗಿ ಯುಗ ಯುಗಾಂತರಗಳಿಂದ ಬಂದಿದ್ದಾರೆ ಅಲ್ಲಿ ಕಾಟನ್ ಜಿನ್ನಿಂಗ್ ಪ್ಲಾಂಟಾಗಲೀ, ಟೆಕ್ಸ್‌ಟೈಲ್ಸ್ ಸ್ಪಿನ್ನಿಂಗ್ ಮಿಲ್ಲಾಗಲೀ ಇಲ್ಲ, ಇದು ಸಹಕಾರಿ ಕ್ಷೇತ್ರದಲ್ಲಿ ರಾಜ್ಯದಲ್ಲೇ ಮೊದಲನೇ ನೂಲಿನ ಕಾರ್ಖಾನೆಯಾಗುತ್ತದೆ, ಆದ್ದರಿಂದ ಅಲ್ಲಿ ಒಂದು ಕೋಆಪರೇಟೀವ್ ಟೆಕ್ಸ್‌ಟೈಲ್ಸ್ ಸ್ಪಿನ್ನಿಂಗ್ ಮಿಲ್ ಮಾಡುವುದರಿಂದ ಅಲ್ಲಿನ ರೈತರಿಗೆ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಅದಕ್ಕೆ ಸಹಾಯ ಮಾಡಲಾಗಿದೆ, ಹಿಂದೆ ಹುಬ್ಬಳ್ಳಿಯಲ್ಲಿ ಕರ್ನಾಟಕ ಕಾಟನ್ ಟೆಕ್ಸ್‌ಟೈಲ್ ಮಿಲ್ ಸ್ಥಾಪನೆ ಮಾಡಿದ್ದರು ಹುಬ್ಬಳ್ಳಿಯ ಕೆಲವು ಶ್ರೀಮಂತ ಹತ್ತಿ ಬೆಳೆಗಾರರು ಇದು ಮೇಲಕ್ಕೆ ಬಾರದ ಹಾಗೆ ಮಾಡಿದರು, ಈ ಕಾರ್ಖಾನೆಗೆ ಸಂಬಂಧಪಟ್ಟಹಾಗೆ ಒಂದು ದಾರುಣ ಕತೆ ಇದೆ, ಅದನ್ನು ಬೇಕಾದರೆ ಒಂದು ದಿನವೆಲ್ಲಾ ಹೇಳುತ್ತೇನೆ, ಸಮಾಚಾರಗಳು ನನ್ನ ಹತ್ತಿರವೂ ಇವೆ, ಕೋಆಪರೇಟೀವ್ ಸ್ಪಿನ್ನಿಂಗ್ ಮಿಲ್ಲನ್ನು ಬೇರೆಯವರೂ ಹಾಕುವುದಕ್ಕೆ ಮುಂದೆ ಬಂದರೆ ೧೦ ಮಿಲ್ಲುಗಳನ್ನು ಹಾಕುವುದಕ್ಕೆ ಯಾರಾದರೂ ಮುಂದೆ ಬಂದರೆ ಅವರಿಗೆ ಸಹಾಯ ಮಾಡುವುದಕ್ಕೆ ನಾವು ತಯಾರಾಗಿದೆವೆ ಹತ್ತಿ ಬೆಳೆಯುವ ರೈತರಿಗೆ ನೇರವಾದ ಫಾಯಿದೆ ಇದ್ದರೆ, ಸರಿಯಾದ ಬೆಲೆ ಸಿಕ್ಕತಕ್ಕಂಥಾ ವಿಚಾರ ಇದ್ದರೆ ಇಂಥಾ ಮಿಲ್ಲನ್ನು ಧಾರವಾಡದಲ್ಲಿ ಮಾಡಲಿ, ಅಥವಾ ರಾಯಚೂರಿನಲ್ಲಿ ಮಾಡಲಿ,

ಶ್ರೀ ಎಚ್.ಟಿ. ಕೃಷ್ಣಪ್ಪ :—ಇದನ್ನು ಮಾಡಬಾರದು ಎಂದು ನಾವು ಹೇಳಲಿಲ್ಲ. ಆದರೆ ಅಲ್ಲಿ ಅವರು ಮಾಡಿದ ರೀತಿ ಸರಿಯಾಗಿಲ್ಲ.

ಶ್ರೀ ಡಿ, ದೇವರಾಜ ಅರಸ್ :—ರೈತರ ಹಿತದೃಷ್ಟಿಯಿಂದ ರೂಲ್ಸ್‌ಅನ್ನು ಸ್ವಲ್ಪ ಉಜಾಯಿಸಿ ಕೆಲಸ ಮಾಡಿದ್ದಾರೆ. ಹಾಗೆ ಇದನ್ನು ತೆಗೆದುಕೊಳ್ಳಿ ಫಲಿತಾಂಶವನ್ನು ನೋಡಿ,

ಶ್ರೀ ಕೋಣಂದೂರು ಲಿಂಗಪ್ಪ :—ಹಾಗೆ ಹೇಳಿದರೆ ಮುಗಿದೇ ಹೋಯಿತು.

ಶ್ರೀ ಡಿ, ದೇವರಾಜ ಅರಸ್ :—ಇದು ಅಪಟ್ಟ ರೈತರ ಹಿತದೃಷ್ಟಿಯಿಂದ ಕೈಗೊಂಡ ಕ್ರಮ ಇದರಲ್ಲಿ ಆತುರು ಇದೆ ಆದರೆ ಅಸಹ್ಯಕರವಾದ ಆತುರ ಇಲ್ಲ,

ಶ್ರೀ ಕೋಣಂದೂರು ಲಿಂಗಪ್ಪ :—ಪ್ರಾಜೆಕ್ಟ್ ರಿಪೋರ್ಟ್ ಇಲ್ಲದೆ ಸ್ಯಾಂಕ್ಷನ್ ಮಾಡಿದ್ದು ಹೇಸ್ಟಿ ಅಲ್ಲವೆ?

ಶ್ರೀ ಡಿ. ದೇವರಾಜ ಅರಸ್ :—ಪ್ರಾಜೆಕ್ಟ್ ರಿಪೋರ್ಟ್ ಇತ್ತು, ಆದರೆ ಅದಕ್ಕೆ ರುಜುಹಾಕಿರಲಿಲ್ಲ ಪಂಚಾಂಗ ಇಲ್ಲದೆ ಹೋದರೆ ನಕ್ಷತ್ರವೇ ಹೋಯಿತೇ?

ಶ್ರೀ ಬಿ, ಪುಟ್ಟಸ್ವಾಮಯ್ಯ:—ಮರ್ಡರ್ ಕೇಸಿಗೆ ನೀವು ಒಳ್ಳೆಯ ಲಾಯರ್,

ಶ್ರೀ ಡಿ, ದೇವರಾಜ ಅರಸ್ ;—ಒಂದು ವರ್ಷದಲ್ಲಿ ಸ್ಪಿನ್ನಿಂಗ್ ಮಿಲ್ಲ್ ಬಂದದ್ದನು ನೀವು ಮೆಚ್ಚ ಬೇಕು, ಒಂದು ವರ್ಷದಲ್ಲಿ ಸ್ಪಿನ್ನಿಂಗ್ ಮಿಲ್ಲನ್ನು ಭಾರತದಲ್ಲಿ ಎಲ್ಲೂ ಯಾರೂ ಮಾಡಿಲ್ಲ,

ಶ್ರೀ ಎಚ್.ಟಿ, ಕೃಷ್ಣಪ್ಪ .—ಮೆಚ್ಚುತ್ತೇವೆ,

ಶ್ರೀ ಡಿ ದೇವರಾಜ ಅರಸ್ ;—ಆ ರೀತಿ ೧೨ ಸಾರಿ ಹೇಳಿ. ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಒಂದು ವರ್ಷದಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದರು. ಆದರೆ ಇದು ಒಂದು ವರ್ಷಕ್ಕೆ ಮೊದಲೇ ಕಾರ್ಯರೂಪಕ್ಕೆ ಬಂದದ್ದನ್ನು ನೋಡಿ ಅವರು ಸಂತೋಷಪಟ್ಟರು, ಮತ್ತು ಅದಕ್ಕೆ ದುಡ್ಡು ಒದಗಿಸಿಕೊಟ್ಟಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ;—ಮೂರು ತಿಂಗಳಲ್ಲಿ ಮಾಡಿದರೆ ಇನ್ನೂ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್ ;—ಜಪಾನ್ ದೇಶದವರು ಒಂದು ಮಿಲ್ಲ್ ಹಾಕಬೇಕಾದರೆ ಎರಡು ವರ್ಷ ತೆಗೆದುಕೊಳ್ಳುತ್ತಾರೆ. ಭಾರತೀಯರು ಅದಕ್ಕೆ ನಾರ್ಮಲ್ ಆಗಿ ೧೨ ವರ್ಷ ತೆಗೆದುಕೊಳ್ಳುತ್ತಾರೆ, ನಾವು ೧೨ ವರ್ಷದಲ್ಲಿ ಅದನ್ನು ಮಾಡಿದರೆ ಭೇಷ್ ಎನ್ನುತ್ತೀರಿ, ಎರಡು ವರ್ಷಗಳಲ್ಲಿ ಮಾಡಿದರೆ ಏನೂ ಜಾದು ಮಾಡಿದ್ದಾರೆ ಎಂದು ಹೇಳುತ್ತೀರಿ,

ಶ್ರೀ ಕಾಗೋಡು ತಿಮ್ಮಪ್ಪ;—ಎಲ್ಲರಿಗೂ ಸಮನಾದ ನಿಯಮವನ್ನು ಅನ್ವಯಿಸಬೇಕು.

ಶ್ರೀ ಡಿ. ದೇವರಾಜ ಅರಸ್ ;—ಬೇರೆ ಕಡೆ ಏತಕ್ಕೆ ಆತುರವಾಗಿ ಮಾಡಲಿಲ್ಲ, ಬೇರೆ ಕಡೆಗಳಲ್ಲಿಯೂ ಆತುರದಿಂದ ಕೆಲಸ ಮಾಡಿ ಎಂದು ಸಾವಿರ ಸಾರಿ ಚಾವುಟಿಯಿಂದ ಹೊಡೆಯಿರಿ, ನಾನು ಅದನ್ನು ಒಪ್ಪುತ್ತೇನೆ ಒಳ್ಳೆಯದನ್ನು ಮಾಡಿರುವಾಗ ಜಾಗ್ರತೆಯಾಗಿ ಈ ಕೆಲಸವನ್ನು ಮಾಡಿರುವಾಗ ಏತಕ್ಕೆ ಇಷ್ಟು ಬೇಗ ಮಾಡಿದಿರಿ ಎಂದು ಟೀಕೆ ಮಾಡುವುದು ನ್ಯಾಯವೆ, ಧರ್ಮವೇ, ರೈತರ ಹಿತಕ್ಕೋಸ್ಕರ ಈ ಕೆಲಸವನ್ನು ಆತುರವಾಗಿ ಮಾಡಿದೆ. ಕಾನೂನು ಮಾಡಿ ಅದಕ್ಕೇ ನೇತು ಹಾಕಿಕೊಳ್ಳುವುದಿಲ್ಲ, ಕಾನೂನು ಗೈಡ್‌ಲೈನ್ಸ್ ಅಷ್ಟೆ, ಅನೇಕ ಸಂದರ್ಭದಲ್ಲಿ ಕಾನೂನನ್ನು ಬದಲಾವಣೆ ಮಾಡಿ ಕೆಲಸ ಮಾಡುತ್ತೇವೆ, ನಾವು ಮಾಡಿದಂತಹ ಕಾನೂನನ್ನು ಜಾರಿಗೊಳಿಸುವುದಕ್ಕೆ ಅಧಿಕಾರಿಗಳಿರುತ್ತಾರೆ. ಸೆಕ್ರೆಟರಿಗಳು ಇರುತ್ತಾರೆ, ಯಾರಾದರೂ ತಪ್ಪು ಮಾಡಿದ್ದರೆ ಅದನ್ನು ಕೇಳೋಣ, ಆತುರದಿಂದ ಈ ಕೆಲಸವನ್ನು ಮಾಡಿದ್ದರಿಂದ ಇದನ್ನು ನೀವು ಮೆಚ್ಚಬೇಕು.

ಶ್ರೀ ಎಚ್.ಟಿ, ಕೃಷ್ಣಪ್ಪ ;—ನೀವು ನ್ಯಾಯವಾದಿಗಳಲ್ಲ,

ಶ್ರೀ ಡಿ, ದೇವರಾಜ ಅರಸ್ ;—ಬನ್ನಿ ಗದಗ್ ಮತ್ತು ಧಾರವಾಡ ಭಾಗದಲ್ಲಿ ಎಲ್ಲಿ ಬೇಕಾದರೂ ಹೋಗೋಣ, ಜನತಾ ಕೋರ್ಟಿಗೆ ಹೋಗೋಣ, ರೈತರ ಮುಂದೆ ಇಡೋಣ, ಯಾವುದನ್ನು ಅವರು

ಒಪ್ಪುತ್ತಾರೆ ನೋಡೋಣ, ಯಾರು ತಪ್ಪು ಮಾಡಿದ್ದಾರೆ ಎಂದು ಅವರೇ ನಿರ್ಧರಿಸಲಿ. ನೀವು ರೈತರ ಪರವಾಗಿದ್ದೀರಿ.

ಶ್ರೀ ಕೋಣಂದೂರು ಲಿಂಗಪ್ಪ :—ನಾವು ರೈತರ ಪರವಾಗಿಲ್ಲ ಎಂದು ಯಾರು ಹೇಳಿದರು? ಆ ಬಗ್ಗೆ ನೀವು ಮಾಡಿದಂತಹ ಕ್ರಮ ಏನಿದೆ ಅದರಲ್ಲಿ ಅಕ್ರಮವಾಗಿದೆ, ಅದನ್ನು ನಾವು ಹೇಳಿದ್ದು,

ಶ್ರೀ ಡಿ, ದೇವರಾಜ ಅರಸ್ :—ನಾವು ಎಷ್ಟು ಲಕ್ಷ ರೂಪಾಯಿ ಹಾಳು ಮಾಡಿದ್ದೇವೆ?

ಶ್ರೀ ಕೋಣಂದೂರು ಲಿಂಗಪ್ಪ:—ಅದನ್ನು ಮಾಡುವುದಕ್ಕೆ ಸಿಧಿ ನಿಯಮ ಬೇಡವೆ?

7–30 P.M,

ಶ್ರೀ ಡಿ, ದೇವರಾಜ ಅರಸ್ :—ನಾವೇನು ಮೂರು ಕಾಸನ್ನು ಕಳವು ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ:—ಕಾನೂನು ಕಟ್ಟಳೆ ಅನುಸರಿಸದೆ ಇದನ್ನು ಮಾಡಿರುವುದು ಸರಿಯೇ ಎಂದು ನಾವು ಕೇಳುತ್ತಿರುವುದು?

ಶ್ರೀ ಡಿ. ದೇವರಾಜ ಅರಸ್ :—ಇದು ಅಗ್ರೋಬೇಸ್ಡ್ ಇಂಡಸ್ಟ್ರಿಯಾದ್ದರಿಂದ ಆಗ್ರೋ ಇಂಡಸ್ಟ್ರೀಸ ಕಾರ್ಪೋರೇಷನ್ನಿನವರು ಸಹಾಯ ಮಾಡಿದ್ದಾರೆ, ಅಡರಲ್ಲಿ ತಪ್ಪೇನಿದೆ?

ಶ್ರೀ ಕಾಗೋಡು ತಿಮ್ಮಪ್ಪ :—ನಮ್ಮ ಹಣ ಬ್ಯಾಂಕ್‌ನಲ್ಲಿರುತ್ತದೆ, ಆ ಹಣವನ್ನು ಚೆಕ್ ಕೊಡದೆ ತರುವುದಕ್ಕಾಗುತ್ತದೆಯೇ.

ಶ್ರೀ ಡಿ. ದೇವರಾಜ ಅರಸ್.—ಇದೇ ತಮ್ಮ ವಾದ ಇರುವುದಾದರೆ, ಇಲ್ಲಿ ಹಣವನ್ನು ಯಾರೂ ಕದ್ದು ತಂದಿಲ್ಲ. ಸೂಜಿ ಕಣ್ಣಲ್ಲಿ ಒಂಟೆಯನ್ನು ತೂರಿಸುವ ಪ್ರಯತ್ನಕ್ಕೆ ತಾವು ಬಂದಂತೆ ಕಾಣುತ್ತದೆ.

ಅಂತಹ ಅಸಾಧ್ಯವಾದ ಕೆಲಸವನ್ನು ತಾವು ಮಾಡಬೇಡಿ. ತಮ್ಮಲ್ಲಿ ವಿನಯದಿಂದ ಕೇಳಿಕೊಳ್ಳುವು ದೇನೆಂದರೆ, ನಾವು ಮಾಡಿರುವ ಕೆಲಸದ ಹಿನ್ನೆಲೆಯನ್ನು ತಿಳಿದುಕೊಳ್ಳಿ ಯಾರ ಉಪಯೋಗಕ್ಕಾಗಿ ಇದನ್ನು ಮಾಡಿದ್ದೇವೆಂಬುದನ್ನು ತಿಳಿದುಕೊಳ್ಳಿ. ರೈತರ ಬಗ್ಗೆ ವಿರೋಧಪಕ್ಷದವರಿಗೆ ನಮಗಿಂತ ಹೆಚ್ಚು ಅನುಕಂಪ ಇರಬಹುದು. ಇಲ್ಲ ಎಂದು ನಾನು ತರ್ಕ ಮಾಡುವುದಿಲ್ಲ. ನಿಮಗಿಂತ ನಮಗೆ ಅನುಕಂಪ ಕಡಿಮೆ ಇದೆ ಎಂದು ನೀವು ಹೇಳಿದರೆ ಅದರಿಂದ ಏನೂ ನಮಗೆ ಅವಮಾನವಾಗುವುದಿಲ್ಲ. ಈ ದೃಷ್ಟಿಯಿಂದಲಾದರೂ ಸಹ ನಿಮ್ಮ ದೃಷ್ಟಿಕೋನವನ್ನು ಬದಲಾವಣೆ ಮಾಡಿ. ಮತ್ತು ಈ ಕೆಲಸಕ್ಕೆ ಪ್ರೋತ್ಸಾಹ ಮತ್ತು ಬೆಂಬಲವನ್ನು ಹೆಚ್ಚಾಗಿ ಕೊಡಿ. ನಾವೇನು ಮಾಡಬಾರದ ಅಪರಾಧವನ್ನು ಮಾಡಿಲ್ಲ. ಈ ಹಣದಿಂದ ಸ್ವಂತಕ್ಕೆ ಏನಾದರೂ ಸಂಪಾದನೆ ಮಾಡಿಕೊಂಡಿದ್ದೇವೆಂಬುದನ್ನು ತಾವು ತೋರಿಸುವುದಾದರೆ ಆಗ ನಾವು ತಪ್ಪಿತಸ್ಥರಾಗುತ್ತೇವೆ. ಆಗ ನಮಗೆ ಶಿಕ್ಷೆ ವಿಧಿಸಬೇಕಾದುದು ಸಹಜ ಆದರೆ ಇಲ್ಲಿ ಅಂತಹದ್ದೇನೂ ನಡೆದಿಲ್ಲ, ಸಂಬಂಧಪಟ್ಟ ಮಂತ್ರಿಗಳು ತಮ್ಮ ಸ್ವಂತ ಸ್ಥಳವಾದ್ದರಿಂದ ಇಷ್ಟು ಬೇಗ ಕೆಲಸಗಳನ್ನು ಮಾಡಿದರು, ಬೇರೆ ಕಡೆ ಆದರೆ ಈ ರೀತಿಯಾಗಿ ಮಾಡುತ್ತಾರೆಯೇ ಎಂಬ ಅನುಮಾನ ತಮಗೆ ಇರಬಹುದು ಆ ರೀತಿ ಏನಾದರೂ ಅವರು ನಡೆಯದಿದ್ದರೆ ನನಗೆ ತಿಳಿಸಿ, ಆಗ ನಾನೂ ಸಹ ನಿಮ್ಮ ಜೊತೆಯಲ್ಲಿ ಸೇರಿಕೊಂಡು ಅವರನ್ನು ಹೀಯಾಳಿಸುತ್ತೇನೆ ರಾಜೀನಾಮೆ ಕೊಡಿ ಎಂದು ಕೇಳುತ್ತೇನೆ ಮತ್ತು ನಿಮ್ಮ ಜೊತೆಯಲ್ಲಿದ್ದುಕೊಂಡು ಸಹಕಾರ ಕೊಡುತ್ತೇನೆ. ಆದರೆ ಇಲ್ಲಿ ರೈತರ ಹಿತ ದೃಷ್ಟಿಯಿಂದ ಜಾಗ್ರತೆಯಾಗಿ ಕೆಲಸವಾಗಿರುವುದಕ್ಕಾಗಿ ತಾವು ಮೆಚ್ಚಬೇಕು ಈ ರೀತಿ ಬೇರೆ ಕಡೆ ಗಳಲ್ಲಿಯೂ ಜಾಗ್ರತೆ ಕೆಲಸಗಳಾಗುವಂತೆ ನೋಡಿಕೊಳ್ಳುತ್ತಿದ್ದೇವೆ. ಉದಾಹರಣೆಗೆ ಹೇಳ ಬೇಕೆಂದರೆ, ದಾವಣಗೆರೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಪ್ರಯತ್ನ ಕಳೆದ 2 ವರ್ಷಗಳಿಂದಲೂ ನಡೆಯುತಿತ್ತು. ಆದರೆ ಕಾರ್ಯಗತವಾಗಲಿಲ್ಲ ಆದರೆ ನಾವು ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲಿಯೇ ಅದಕ್ಕೆ ಅಸ್ತಿಭಾರವನ್ನು ಹಾಕಿದ್ದೇವೆ. ಇನ್ನು ಒಂದು ವರ್ಷದಲ್ಲಿಯೇ ಅದು ಪ್ರೊಡಕ್ಷನ್‌ಗೆ ಬರುತ್ತದೆ. ಇದೇ ರೀತಿ ಕೊಳ್ಳೆಗಾಲದಲ್ಲಿ ಮಹದೇಶ್ವರ ಕೋಆಪರೇಟಿವ್ ಷುಗರ್ ಮಿಲ್ಲನ್ನು ಸ್ಥಾಪನೆ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಬಹಳ ಕಾಲದಿಂದ ಇದೂ ಸಹ ಕಾರ್ಯರೂಪಕ್ಕೆ ಬರದೆ ಸ್ಥಗಿತವಾಗಿತ್ತು,

ಶ್ರೀ ಎಚ್.ಟಿ. ಕೃಷ್ಣಪ್ಪ: ಅದಕ್ಕೆ— ಲೈಸೆನ್ಸ್ ಕೊಟ್ಟಿರಲಿಲ್ಲ.

ಶ್ರೀ ಡಿ. ದೇವರಾಜ ಅರಸ್ : ಲೈಸೆನ್ಸ್ ತೆಗೆದುಕೊಂಡಿದ್ದರು. ಆದರೆ ಕಾರ್ಯರೂಪಕ್ಕೆ ಬಂದಿರಲಿಲ್ಲ. ನಿಮಗೆ ಅದರ ಹಿಂದಿನ ಚರಿತ್ರೆ ಗೊತ್ತಿಲ್ಲ. ನಾನು ಈಗ ಎಲ್ಲವನ್ನು ಹೇಳುವುದಕ್ಕೆ ಹೊಗುವುದಿಲ್ಲ. ಇದೇ ರೀತಿ ಬೆಳಗಾಂನಲ್ಲಿ ಎರಡು ಮಿಲ್ಲ್‌ಗಳು ಅನೇಕ ವರ್ಷಗಳಿಂದ ಪ್ರಾರಂಭವಾಗುವುದರಲ್ಲಿಯೇ ಇದ್ದವು. ಈಗ ಅದರ ಕಡೆಗು ಗಮನ ಕೊಟ್ಟಿದ್ದೇವೆ. ಹೇಳಬೇಕೆಂದರೆ ಇಂಥಾದ್ದು ಬೇಕಾದಷ್ಟು ಇವೆ, ನಾವು ಇದನ್ನೆಲ್ಲಾ ಆತುರಾತುರದಿಂದ ಮಾಡುತ್ತಿರುವುದೇ ಅಪರಾಧವೆಂದು ತಾವು ಹೇಳುವುದಾದರೆ, ಅದಕ್ಕೆ ನೀವೇ ಅಪಚಾರ ಮಾಡಿದಂತೆ ಆಗುತ್ತದೆ. ಮತ್ತು ರೈತರಿಗೂ ತಾವೇ ಅಪಚಾರ ಮಾಡಿದಂತೆ ಆಗುತ್ತದೆ. ಇಂತಹ ಕೆಲಸಗಳನ್ನು ನಾವು ಜಾಗ್ರತೆ ಮಾಡುವುದಕ್ಕೆ ಹೊರಟಾಗ ತಾವು ತಮ್ಮ ಸಹಕಾರ ಮತ್ತು ಪ್ರೋತ್ಸಾಹ ಕೊಡಬೇಕು. ನಾವು ಮತ್ತು ನೀವು ಸೇರಿಕೊಂಡು ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು ಪ್ರೊಸೆಸಿಂಗ್ ಯೂನಿಟ್‌ಗಳನ್ನು, ಮೇಜ್ ಪ್ಲಾಂಟ್‌ಗಳನ್ನು, ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡೋಣ. ಇದನ್ನು ಏತಕ್ಕೆ ಹೇಳುತ್ತೇನೆಂದರೆ, ನಾಳೆ ಬರತಕ್ಕಂಥ ಐನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯದಲ್ಲಿ ಇನ್ನೂ ಹತ್ತು ಹದಿನೈದು ಸಕ್ಕರೆ ಕಾರ್ಖಾನೆಗಳನ್ನು 8-9 ಸ್ಪಿನ್ನಿಂಗ್ ಮಿಲ್‌ಗಳನ್ನು ಸ್ಥಾಪಿಸಬೇಕೆಂಬ ಆಸೆ ಸರ್ಕಾರಕ್ಕೆ ಇದೆ, ಈ ರೀತಿ ಮಾಡಿದ್ದೇ ಆದರೆ, ಆಗ ರೈತರ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಆಗುತ್ತದೆಯಲ್ಲದೆ ಅವರನ್ನು ಮೇಲಕ್ಕೆ ಎತ್ತುವುದಕ್ಕೆ ಸಾಧ್ಯವಾಗುತ್ತದೆ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕಲ್ಲದೆ, ಪ್ರತಿಯೊಂದಕ್ಕು ನಾವು ರೂಲ್ಸ್ ಬಿಟ್ಟು ಹೋಗಿದ್ದೇವೆ ಕಾಮಾ ಫುಲುಸ್ಟಾಪನ್ನು ಅನುಸರಿಸಿಲ್ಲವೆಂದು ತಾವು ಮಾತನಾಡುವುದು ಬೇಡ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಾನು ಮೇಲ್ಮನೆಯಲ್ಲಿಯೂ ಸಹ ಈ ರಿಪೋರ್ಟ್ ಬಗ್ಗೆ ಮಾತನಾಡಿದ್ದೆ, ಅಲ್ಲಿಯೂ ಸಹ ಪ್ರತಿಪಕ್ಷದವರು ಹೇಳಿದಂತಹ ಟೀಕೆಗಳನ್ನು ಕೇಳಿದ್ದೇನೆ, ಈ ಬಗ್ಗೆ ನಾನು ಒಂದು ವಿಚಾರವನ್ನು ಮನಬಿಚ್ಚಿ ಮಾತನಾಡುತ್ತೇನೆ, ಅದರಿಂದ ತಮ್ಮ ಮನಸ್ಸಿಗೆ ಬೇಜಾರಾಗಬಹುದು, ಆದರೆ ನನ್ನ ಮನಸ್ಸಿಗೆ ಏನು ಸಮಾಧಾನವಾಗಿದೆಯೆಂದರೆ, ತಾವುಗಳು ಯಾರೂ ಇದರಲ್ಲಿ ಮೊಟಿವೇಟೆಡ್ ಇದೆ ಎಂದು ನಮ್ಮ ಬಗ್ಗೆ ಟೀಕೆಯನ್ನು ಮಾಡಲಿಲ್ಲ ಇದರ ಮೂಲಕ ನಾವು ದುಡ್ಡು ಹೊಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ತಾವುಗಳು ಯಾರೂ ಮಾತನಾಡಲಿಲ್ಲ. ಪ್ರೊಸೀಜರ್‌ನಲ್ಲಿ ಇರೆಗ್ಯುಲಾರಿಟೀಸ್ ಆಗಿದೆ ಎಂದು ಹೇಳಿದಿರಿ. ಪ್ರೊಸೀಜರ್‌ನಲ್ಲಿ ಇರೆಗ್ಯುಲ್ಯಾರಿಟೀಸ್ ಆಗಿದೆ ಎಂದು ಇಟ್ಟುಕೊಂಡರೂ ಸಹ, ಉದ್ದೇಶ ಮಾತ್ರ ಸದುದ್ದೇಶದಿಂದ ಕೂಡಿದೆ, ಇದನ್ನು ಜನತೆಯ ಹಿತದೃಷ್ಟಿಯಿಂದ ಮಾಡಲಾಗಿದೆಯೇ ಹೊರತು ಮತ್ತೇ ಬೇರೆ ಏನೂ ಅಲ್ಲ, ಈ ಒಂದು ಅಂಶವನ್ನು ಬಿಟ್ಟರೆ ಮಿಕ್ಕಂತೆ ಈ ರಿಪೋರ್ಟಿನ ಬಗ್ಗೆ ಮಾನ್ಯ ಸದಸ್ಯರು ಸಮಾಧಾನಕರವಾದ ಮಾತುಗಳನ್ನು ಆಡಿದ್ದಾರೆ, ಅದಕ್ಕಾಗಿ ಈ ಸಭೆಯ ವಿರೋಧ ಪಕ್ಷದ ಎಲ್ಲ ಸದಸ್ಯರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ, ಇಷ್ಟು ಹೇಳಿ, ನಾನು ಇಲ್ಲಿಯವರೆಗೆ ಹೇಳಿದ್ದನ್ನು ಸಮಾಧಾನಕರವಾಗಿ ಕೇಳಿದ್ದಕ್ಕೆ ಮಾನ್ಯ ಸದಸ್ಯರೆಲ್ಲರನ್ನೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಈ ಸಾರ್ವಜನಿಕ ಉದ್ಯಮ ಸಮಿತಿಯವರು ಪ್ರೊಸೀಜರನ್ನು ಅನುಸರಿಸಿಲ್ಲ ಎಂದು ಹೇಳಿದರು. ಈ ಸಮಿತಿಯ ಸದಸ್ಯರಾದವರೊಬ್ಬರು ಇದೇ ಮಾತನ್ನು ಹೇಳಿದರು. ಅವರು ರೂಲ್ಸ್ ಓದಿದ್ದಾರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅವರು ರೂಲ್ಸ್ ಓದಿದ್ದರೆ ನಾವು ಯಾವ ರೀತಿ ರೂಲ್ಸ್ ಅನುಸರಿಸಿದ್ದೇವೆಂಬುದು ಗೊತ್ತಾಗುತ್ತಿತ್ತು. ಈ ಸಮಿತಿಯ ಮಾನ್ಯ ಸದಸ್ಯರೊಬ್ಬರು ಯಾವ ಮೀಟಿಂಗಿಗೂ ಬರಲಿಲ್ಲ. ಕಡೆಯ ಮೀಟಿಂಗಿಗೆ ಬಂದರು. ಇಂತಹವರು ಇಲ್ಲಿ ಮಾತನಾಡುವಾಗ ಸಮಿತಿಯವರು ಪ್ರೊಸೀಜರ್ ಫಾಲೋ ಮಾಡಲಿಲ್ಲವೆಂದು ಹೇಳುವುದಕ್ಕೆ ಮೊದಲು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ನಾವು ಈ ವಿಷಯವನ್ನು ಒಂದೇ ಒಂದು ದೃಷ್ಟಿಕೋನದಿಂದ ನೋಡುತ್ತಿದ್ದೇವೆ. ಕಾನೂನನ್ನು ನೋಡುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಿದ್ದವೀರಪ್ಪನವರು ಹೇಳಿದರು. ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಲ್ಲಿರುವ ಹಣವನ್ನು ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆಂದು ನಾವೇನೂ ಹೇಳಲಿಲ್ಲ. ಆ ಪ್ರಶ್ನೆ ಇಲ್ಲಿ ಬಂದಿಲ್ಲ. ಮಾನ್ಯ ಕೆ. ಎಚ್. ಪಾಟೀಲರಿಗೂ ನನಗೂ ಯಾವ ಸಂಬಂಧವೂ ಇಲ್ಲ. ಎಂದರೆ ಅವರ ಮತ್ತು ನನ್ನ ನಡುವೆ ಯಾವ ವ್ಯವಹಾರವೂ ಇಲ್ಲ. ವೈಯಕ್ತಿಕವಾಗಿ ಅವರ ಮೇಲೆ ಏನಾದರೂ ಆಪಾದನೆ ಹೊರಿಸಿ ಅವರನ್ನು ಭಗ್ನ ಮಾಡಿ ಕಳುಹಿಸಬೇಕೆಂಬ ಉದ್ದೇಶವೇನೂ ನನಗೆ ಇರಲಿಲ್ಲ. ಮತ್ತು ಈ ಒಂದು ಉದ್ದೇಶ ಈ ಕಮಿಟಿಯಲ್ಲಿರುವ ಯಾವ ಸದಸ್ಯರಿಗೂ ಇರಲಿಲ್ಲ. ಆದರೆ ನಾವು ಗುರುತರವಾದ ಟೀಕೆಗಳನ್ನು ಏತಕ್ಕೆ ಮಾಡಿದೆವು ಎಂದರೆ, ಯಾರೋ ಒಬ್ಬ ವ್ಯಕ್ತಿ ಕಾನೂನು ಬಿಟ್ಟು, ರೂಲ್ಸ್ ಬಿಟ್ಟು, ವಿಧಿನಿಯಮಗಳನ್ನು ಬಿಟ್ಟು ನಡೆದುಕೊಂಡರೆ ಅದು ಬೇರೆ ವಿಷಯವಾಗುತ್ತದೆ. ಆದರೆ ಸರ್ಕಾರದ ಒಬ್ಬ ಮಂತ್ರಿ, ಮಂತ್ರಿಯಾದವರು ಒಂದು ಚೌಕಟ್ಟಿನಲ್ಲಿರುತ್ತಾರೆ, ಆ ಒಂದು ಚೌಕಟ್ಟಿನಲ್ಲಿರುವಾಗ, ಚೌಕಟ್ಟನ್ನು ಬಿಟ್ಟು ಜನರ ಹಿತದೃಷ್ಟಿ

ಯಿಂದ ಏನಾದರು ಕೆಲಸ ಮಾಡಿದರೆ ಅದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ, ಆದರೆ ಈ ವಿಷಯದಲ್ಲಿ ಮಾತ್ರ ಆ ಒಂದು ಚೌಕಟ್ಟನ್ನು ಬಹಳ ದೂರ ಮೀರಿ ಇವರು ನಡೆದಿದ್ದಾರೆಂಬುದೇ ಇವರ ಮೇಲಿರುವ ಗುರುತರವಾದ ಅಪಾದನೆ. ಇದರಲ್ಲಿ ಬೇಕಾದಷ್ಟು ಪುರಾವೆಗಳು ಇವೆ. ಅವನ್ನೆಲ್ಲಾ ನನ್ನ ಮಾನ್ಯ ಸ್ನೇಹಿತರುಗಳು ಹೇಳಿದ್ದಾರೆ. ಒಬ್ಬ ಮಂತ್ರಿಯಾಗಿರುವವರು ಒಳ್ಳೆಯ ಕೆಲಸ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಎಲ್ಲವನ್ನೂ ಕೂಡ ಮೀರಿ ನಡೆಯಬಹುದು ಎನ್ನುವ ಅಭಿಪ್ರಾಯ ಇದ್ದರೆ ಅದೇ ರೀತಿ ಎಲ್ಲದಕ್ಕೂ ಇದೇ ಅಭಿಪ್ರಾಯದಿಂದ ಕೆಲಸವನ್ನು ಮಾಡಬಹುದು. ಇವರು ಯಾವುದಾದರೂ ಒಂದು ಇಂಡಸ್ಟ್ರಿಯ ಕೆಲಸವನ್ನು ಒಂದು ವರ್ಷದೊಳಗೆ ಮಾಡುತ್ತಾರೆಂದು ನನಗೆ ನಂಬಿಕೆಯಿಲ್ಲ. ಇನ್ನು ಮುಂದೆ ಮಾಡುತ್ತೇವೆಂದು ಭರವಸೆಯನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಯಾವ ಡಿಸ್ಟ್ರಿಕ್ಟ್‌ನಲ್ಲಿ ಬೇಕಾದರೆ ಕೇಳಲಿ, ಇಂತಹ ಕೆಲಸಗಳಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಭರವಸೆ ಕಾರ್ಯರೂಪದಲ್ಲಿ ಎಷ್ಟರಮಟ್ಟಿಗೆ ಇರುತ್ತದೆ ಎನ್ನುವುದನ್ನು ಮುಂದೆ ನೋಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಜನ ಮುಂದೆ ಬರುವಂತೆ ನೀವು ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅದು ಸರಿ, ಸೊಸೈಟಿಯಿಂದ, ಇಂಡಿವಿಜುಯಲ್‌ನಿಂದ ಹಣ ಕಲೆಕ್ಟ್ ಮಾಡಬೇಕು, ಇದರ ಬಗ್ಗೆ ಹೆಚ್ಚು ವಿವರಣೆಗೆ ನಾನು ಹೋಗುವುದಿಲ್ಲ. ಹಣವನ್ನು ಇಂತಹ ಇಂಡಸ್ಟ್ರೀಸಿಗೆ ಕೊಡಬೇಕು ಎಂದು ಹೇಳುವವರೆ ಕೊಟ್ಟಿಲ್ಲ, ಎಕ್ಸಾಮಿನ್ ಮಾಡಿ ಅಂಥಾದ್ದನ್ನು ತೋರಿಸುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅರ್ಜಿದಾರರು ಮಂಜೂರು ಮಾಡುವವರು ಒಬ್ಬರೇ ಆದಾಗ ಇದು ಸಾಧ್ಯ.

ಶ್ರೀ ಎಂ. ಎಸ್. ಕೃಷ್ಣನ್.— ಎರಡನೆಯ ವಿಚಾರ ಏನೆಂದರೆ, ಎಲ್ಲಾ ಕಡೆಯೂ ಈ ತರಹ ಕೆಲಸಗಳನ್ನು ಮಾಡಬೇಕು ಎನ್ನುವ ಅಭಿಪ್ರಾಯವನ್ನು ಇವರು ಇಟ್ಟುಕೊಳ್ಳಬೇಕು ಒಳ್ಳೆಯ ಕೆಲಸ ಮಾಡುತ್ತೇವೆ. ವಿಧಿನಿಯಮಗಳು ಏನೂ ಬೇಡ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಒಂದು ಚೌಕಟ್ಟಿನೊಳಗೆ ನಾವು ಕೆಲಸ ಮಾಡಬೇಕಾಗುತ್ತದೆ. ಎಲ್ಲಾ ಮೀರಿ ನಡೆಯುವುದಾದರೆ ಯಾವ ರೂಲ್ ಬೇಕಾಗಿಲ್ಲ, ಈ ಹೌಸ್‌ನಲ್ಲಿ ನಾವು ಚರ್ಚೆ ಕೂಡ ಮಾಡಬೇಕಾಗಿಲ್ಲ. ಇವತ್ತಿನ ದಿವಸ ಮಾಡಿರುವಂಥ ತಪ್ಪನ್ನೂ ನಾವು ಮಾಡಬೇಕಾಗುತ್ತದೆ. ಇವತ್ತಿನ ದಿವಸ ನನ್ನ ಅಭಿಪ್ರಾಯದಲ್ಲಿ ಇದು ಅಗ್ರೋ ಇಂಡಸ್ಟ್ರೀಸ್‌ನ ಕಕ್ಷೆಯಲ್ಲಿ ಬರುವುದಿಲ್ಲ. ಬರುವ ರೀತಿಯಲ್ಲಿ ಸಹಕಾರ ನೀಡುತ್ತಿದ್ದಾರೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಫಂಕ್ಷನ್ ಮಾಡುವಾಗ ಅತಿ ಮುಖ್ಯವಾಗಿ ಪ್ರಯಾರಿಟಿಯನ್ನು ಯಾವ ಯಾವುದಕ್ಕೆ ಕೊಡಬೇಕೋ ಅದಕ್ಕೆ ಕೊಟ್ಟಿಲ್ಲ. ಬೇರೆ ಕಡೆ ಪ್ರಯಾರಿಟಿಕೊಟ್ಟು ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗಿತ್ತು. ಅದನ್ನೂ ಕೂಡ ಮಾಡಿಲ್ಲ. ಮಂತ್ರಿಯಾಗಿರುವುದರಿಂದ ಅಧಿಕಾರ ಇರುತ್ತದೆ, ಅದನ್ನು ಉಪಯೋಗಿಸಿಕೊಂಡು ಟೆಕ್ಸ್‌ಟೈಲ್ ಮಿಲ್ ಅನ್ನು ಮಾಡಿಬಿಟ್ಟರು ಇದು ಸರಿಯಾದದ್ದಲ್ಲ. ಮುಂದೆ ಆದರೂ, ತಮಗೆ ಇಷ್ಟಬಂದ ರೀತಿಯಲ್ಲಿ ನಡೆದು ಕೊಳ್ಳದೆ, ಜನಗಳ ಹಿತದ ಬಗ್ಗೆ ಸರಿಯಾಗಿ ನಡೆದುಕೊಳ್ಳಬೇಕು. ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ನಡೆದು ಕೊಳ್ಳಬೇಕು. ಸಮಾಧಾನವಾಗುವ ರೀತಿಯಲಿ ನಡೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ತಮ್ಮ ರಿಪೋರ್ಟಿನ ನಾಲ್ಕನೆ ಪುಟದಲ್ಲಿ ೧-೧೨ನೇ ಪ್ಯಾರಾದಲ್ಲಿ ಏನು ಹೇಳಿದ್ದಿರೋ ಅದನ್ನು ಪೂರ್ತಿಯಾಗಿ ಓದಿಬಿಟ್ಟರೆ, ಅದರಲ್ಲಿ ಒಂದೇ ದಿವಸದಲ್ಲಿ ಇವರಿಗೆ ಹಣ ಕೊಟ್ಟರು ಎನ್ನುವ ಮಾತು ಬಂದಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಒಂದು ತಿಂಗಳು ೧೩ ದಿವಸದಲ್ಲಿ ಕೊಟ್ಟರು.

ಶ್ರೀ ಡಿ. ದೇವರಾಜ ಅರಸ್.—ಡಿಸೆಂಬರ್ ೨೨ರಂದು ಅರ್ಜಿ ಇತ್ತು, ಅವತ್ತೇ, ಎಕ್ಸಾಮಿನ್ ಮಾಡಿ ತೀರ್ಮಾನ ಕೊಡಬೇಕು ಎಂದು ಕೊಟ್ಟರು. ನಂತರ ಒಂದೂವರೆ ತಿಂಗಳು ಆದಮೇಲೆ ಸರ್ಕಾರದ ದುಡ್ಡನ್ನು ನೋಟಿಫಿಕೇಷನ್ ಆದನಂತರ ಕೊಟ್ಟಿರತಕ್ಕದ್ದು, ನಿಮ್ಮ ರಿಪೋರ್ಟಿನಲ್ಲಿ ಒಂದೇ ದಿವಸದಲ್ಲಿ ಕೊಟ್ಟಿರತಕ್ಕದ್ದು ಎಂದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾವುದಾದರೂ ಒಂದು ಸೊಸೈಟಿ, ಒಂದು ತರಹ ಇಂಡಸ್ಟ್ರಿಯನ್ನು ಮಾಡಬೇಕಾದರೆ, ಒಂದು ಕಂಡಿಷನ್ ಹಾಕಿ, ಪ್ರಾಜೆಕ್ಟ್ ರಿಪೋರ್ಟ್ ತೆಗೆದುಕೊಳ್ಳಿ, ಫೀಸಿಬಿಲಿಟಿ ರಿಪೋರ್ಟ ತೆಗೆದುಕೊಳ್ಳಿ, ಇವನ್ನೆಲ್ಲಾ ನೋಡಿ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಸೊಸೈಟಿಗೆ ಉಳಿತಾಯವಾಗುವ ದೃಷ್ಟಿಯಿಂದ ಕೊಟ್ಟಿದ್ದರೆ ತಪ್ಪು ಏನು ಆಯಿತು ?

BUSINESS OF THE HOUSE

MADAM SPEAKER.—The discussion on this subject is concluded. I have an announcement. The Business Advisory committee at a sitting held today have decided that the Assembly may adjourn tomorrow and meet again from 19th September 1973.

According to the decision of the Committee the House will take up Legislative Business tomorrow. The House stands adjourned to meet again tomorrow at 1-00 p. m.

The House adjourned at forty five minutes past seven of the clock to meet again at one of the clock on 12th September 1973

ANNEXURE

THE UNIVERSITY OF HEALTH SCIENCES BILL, 1973.
(L. A. Bill No. 48 of 1973)

A Bill to establish and incorporate a University in the State of Mysore to be known as the University of Health Sciences.

Whereas it is expedient to establish and incorporate a University for the purpose of ensuring efficient and systematic training and research on the allopathic and indegenous systoms of medicine ;

Be it enacted by the Mysore State Legislature in the Twenty-fourth year of the Republic of India as follows :—